
ದೆಹಲಿ ಕರ್ನಾಟಕ ಸಂಘದ

# ಅಭಿಮತ

ಜುಲೈ–2016
ಬೆಲೆ ರೂ. 1



## ವೈಶಾಖದಿಂದ ಶ್ರಾವಣದೆಡೆಗೆ

# ಅಭಿಮತ

ದೆಹಲಿ ಕರ್ನಾಟಕ ಸಂಘದ ಅಭಿಮತ

ಸಂಪುಟ 26 ಸಂಚಿಕೆ 10
ಜುಲೈ 2016, ಬೆಲೆ ರೂ. 1



**ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ**

**ಅಧ್ಯಕ್ಷ**
ವಸಂತ ಶೆಟ್ಟಿ ಬೆಳ್ಳಾರೆ:
9958697823

**ಉಪಾಧ್ಯಕ್ಷರು**
ಆಶಾಲತಾ ಎಂ.:
9891249149
ಎಸ್.ಸಿ. ಹೇಮಲತ:
9971121636

**ಪ್ರಧಾನ ಕಾರ್ಯದರ್ಶಿ**
ಸಿ.ಎಂ.ನಾಗರಾಜ:
9811325440

**ಕೋಶಾಧಿಕಾರಿ**
ಕೆ.ಎಸ್.ಜಿ. ಶೆಟ್ಟಿ
9810232113

**ಜಂಟಿ ಕಾರ್ಯದರ್ಶಿಗಳು**
ಟಿ.ಪಿ. ಬೆಳ್ಳಿಯಪ್ಪ:
9654555795
ಜಮುನಾ ಸಿ. ಮಠದ:
9717146597

**ಸಮಿತಿ ಸದಸ್ಯರು**
ಡಾ. ಎಂ.ಎಸ್. ಶಶಿಕುಮಾರ್:
9811689337
ರಾಧಾಕೃಷ್ಣ:
9818252183
ಪೂಜಾ ಪಿ. ರಾವ್:
9810882498
ವಿ.ವಿ.ಬಿರಾದಾರ:
9873005409
ಸಖಾರಾಮ ಉಪ್ಪೂರು
9958807225
ಸುಮಿತಾ ಮುರಗೋಡ
9873000333
ಶಶಿಕಾಂತ್ ಪಾಟಿಲ್
9650182413
ಬಾಬುರಾಜ್ ಪೂಜಾರಿ
9818807696
ಎಸ್. ಪರಮೇಶ್
9015332380
ತ್ಯಾಗೇಶ್ ಮೂರ್ತಿ
9868393961

**ವಿಶೇಷ ಆಹ್ವಾನಿತರು**
ಐ. ರಾಮ ಮೋಹನ್ ರಾವ್
ಡಾ. ಶರತ್ ಎಸ್. ಜವಳಿ
ಡಾ. ಪುರುಷೋತ್ತಮ ಬಿಳಿಮಲೆ
ಎನ್.ಎಂ. ಸರೋಜ
ರಾಧಾ ಕೌಜಲಗಿ
ಎಂ. ಶಿವರಾಮ ರೈ
ಪಿ. ರಾಜಣ್ಣ

**ಕಾವಲು ಸಮಿತಿ**
ಬಸವರಾಜ್ ಎಸ್. ಕಲ್ಲೂರು
ಎನ್.ಎ. ಮಾಧವ
ಡಾ. ಅಹಲ್ಯಾ ಚಿಂತಾಮಣಿ


## ನೇರ ಮಾತು

ಕರ್ನಾಟಕದವರು ಎಂದ ಕೂಡಲೇ ಕನ್ನಡೇತರರ ಮನಸ್ಸಲ್ಲಿ 'ಬೆಂಗಳೂರ್ ಕೆ ಲೋಗ್ ಬಹುತ್ ಅಚ್ಚೆ ಲೋಗ್ ಹೈ, ಬೆಂಗಳೂರು ಬಹುತ್ ಸುಂದರ್ ಹೈ' ಅನ್ನುವ ದಿನಗಳಿದ್ದವು. ಕಾರಣ ಕನ್ನಡಿಗರು ಶಾಂತಿಪ್ರಿಯರು, ಯಾರ ತಂಟೆಗೂ ಹೋಗದವರು, ಇತರರೊಂದಿಗೆ ಬೆರೆತು ಬಾಳುವವರು, ಸಜ್ಜನಿಕೆಗೆ ಹೆಸರಾದವರು ಹಾಗು ಬೆಂಗಳೂರು ನಗರ ಹಸಿರು ಪ್ರಕೃತಿ ಮತ್ತು ತಂಪಿನ ವಾತಾವರಣ ಹೊಂದಿರುವುದು... ಇತ್ಯಾದಿ.

ಇನ್ನೊಂದೆಡೆ ಪ್ರಾಮಾಣಿಕ ಮತ್ತು ನಿಷ್ಠಾವಂತ ಸಜ್ಜನಿಕೆಯ ರಾಜಕಾರಣಕ್ಕೆ, ಶೈಕ್ಷಣಿಕ ಕ್ಷೇತ್ರಕ್ಕೆ, ಧಾರ್ಮಿಕವಾಗಿ, ಬ್ಯಾಂಕಿಂಗ್ ವ್ಯವಸ್ಥೆಗೆ ಹೋಟೆಲ್ ಉದ್ಯಮಕ್ಕೆ, ಸಾಹಿತ್ಯಕ್ಕೆ, ಕಲೆಗೆ ಹೀಗೆ ಎಲ್ಲಾ ಕ್ಷೇತ್ರದಲ್ಲೂ ಕರ್ನಾಟಕವೆಂದರೆ ಎಲ್ಲರೂ ಮೆಚ್ಚಿಕೊಳ್ಳುತ್ತಿದ್ದರು. ಮತ್ತೊಂದೆಡೆ ಕರ್ನಾಟಕದ ಆಡಳಿತ ವ್ಯವಸ್ಥೆಗೆ, ಜನಸಾಮಾನ್ಯರ ನಿಯಮ, ಕಾನೂನು ಪಾಲನೆಗೆ, ಪ್ರಾಮಾಣಿಕತೆಗೆ, ಶಿಸ್ತಿಗೆ ಸೌಹಾರ್ದತೆ ನಮ್ಮನ್ನು ನೋಡಿ ಕಲಿಯಬೇಕು ಎನ್ನುವ ಮಾತುಗಳನ್ನು ಕೇಳಿ ನಾವು ಹೆಮ್ಮೆ ಪಡುವ ದಿನಗಳು ಇದ್ದವು.

ಕಳೆದ ಕೆಲವು ವರ್ಷಗಳಲ್ಲಿ ವಿಧಾನಮಂಡಲದ ಕೆಲವು ಘಟನೆಗಳು, ರಾಜ್ಯದಲ್ಲಿ ನಡೆಯುತ್ತಿರುವ ಕೋಮು ಗಲಬೆಗಳು, ಅಧೋಗತಿಯ ಜಾತಿ ರಾಜಕಾರಣ, ಪರಮಾವಧಿ ಮೀರಿದ ಭ್ರಷ್ಟಾಚಾರ ರಾಜ್ಯದ ಅಧಿಕಾರಿಗಳ ಮತ್ತು ರಾಜಕಾರಣಿಗಳ ಸಂಘರ್ಷ, ರಾಜ್ಯಸಭೆ, ವಿಧಾನಸಭೆ, ವಿಧಾನ ಪರಿಷತ್ ಚುನಾವಣಾ ಸಂದರ್ಭದಲ್ಲಿ ನಡೆದ ಹಣಕಾಸಿನ ವ್ಯವಹಾರದ ಓಟ್‌ಬ್ಯಾಂಕ್, ಹಲವಾರು ಹಾಡು ಹಗಲೇ ನಡೆದ ಕೊಲೆ ಪ್ರಕರಣಗಳು ದೇಶದಾದ್ಯಂತ ಪತ್ರಿಕಾ ಮತ್ತು ಟಿ.ವಿ. ಮಾಧ್ಯಮಗಳಲ್ಲಿ ಹೆಡ್‌ಲೈನ್ ಆಗಿ ರಾಜ್ಯದ ಮಾನ ಹರಾಜು ಆಗಿರುವುದು ದುರದೃಷ್ಟಕರ. ನಮ್ಮಂತಹ ಹೊರನಾಡ ಕನ್ನಡಿಗರು ರಾಜ್ಯದ ಹೊರಗೆ ಕನ್ನಡ ರಾಯಭಾರಿಯಂತೆ ಕೆಲಸ ಮಾಡುತ್ತಿರುವವರನ್ನು ಇತರ ಭಾಷಿಗರ ಮುಂದೆ ತಲೆ ತಗ್ಗಿಸುವಂತೆ ಮಾಡಿದೆ. ಇಂದು ಕರ್ನಾಟಕದ ಒಂದಾನೊಂದು ಕಾಲದ ಬಿಹಾರ ಮಾದರಿಯಾಗಿದೆ ಎನ್ನುತ್ತಾರೆ ದೆಹಲಿಯ ಸ್ಥಳೀಯರು. ಇದು ಹೌದು ಎನ್ನುವಂತೆ ನಮಗೂ ಭಾಸವಾಗುತ್ತಿದೆ.

ರಾಜ್ಯದ ಎಲ್ಲಾ ಪಕ್ಷಗಳು, ರಾಜಕೀಯ ಧುರೀಣರು ರಾಜ್ಯದ ಮಾನವನ್ನು ಉಳಿಸುವತ್ತ ಒಂದಾಗಬೇಕಾಗಿದೆ. ಕನ್ನಡದ ಜನತೆ ಈ ಕುರಿತು ಚಿಂತಿಸಬೇಕಾಗಿದೆ. ಸ್ವಯಂ ಪ್ರತಿಷ್ಠೆಗಿಂತ ಭಾಷೆ ದೊಡ್ಡದು, ನಮ್ಮ ರಾಜ್ಯ ದೊಡ್ಡದ್ದು ಮತ್ತು ನಮ್ಮ ಕನ್ನಡದ ಸಂಸ್ಕೃತಿ ದೊಡ್ಡದು ಅದನ್ನು ಉಳಿಸಿ ಬೆಳೆಸುವತ್ತ ಎಲ್ಲರ ಗಮನವಿರಲಿ. ಅ

***ವಸಂತ ಶೆಟ್ಟಿ ಬೆಳ್ಳಾರೆ, ಅಧ್ಯಕ್ಷರು***

## ಅಭಿಮತ ರಸಪ್ರಶ್ನೆ

1. ಕೈಯ್ಯಾರ ಕಿಞ್ಞಣ್ಣ ರೈ ನೆನಪು ಕಾರ್ಯಕ್ರಮದ ಇರ್ವರು ಉಪನ್ಯಾಸಕರು ಯಾರು?
2. ಈ ಬಾರಿಯ 'ಯಕ್ಷ ಕಲಾನಿಧಿ' ಪ್ರಶಸ್ತಿ ಪಡೆದ ಕಲಾವಿದರು ಯಾರು?
3. ದಿನಕರ ತಂಡವು ಮೈಸೂರು ರಂಗಾಯಣದಲ್ಲಿ ಪ್ರಸ್ತುತಪಡಿಸಿದ ನಾಟಕಗಳು ಯಾವುವು?
4. ಸಂಘದಲ್ಲಿ ಜೂನ್ 21ರಂದು ನಡೆದ ಪರಸ್ಪರ ಕಾರ್ಯಕ್ರಮದಲ್ಲಿ ಭಾಗವಹಿಸಿದ ಕವಿ ಯಾರು?
5. ಶ್ರೀಗುರುಪ್ರಸಾದಿತ ಯಕ್ಷಗಾನ ಮಂಡಳಿ ಸಾಲಿಗ್ರಾಮ ಮೇಳದ ವ್ಯವಸ್ಥಾಪಕರು ಯಾರು?

ಅಭಿಮತದ ಓದುಗರು ಈ ಮೇಲಿನ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಅಂಚೆ ಮೂಲಕ ಅಥವಾ ಸಂಘದ ಇಮೇಲ್ : dksangha@gmail.com ಮೂಲಕ ದಿನಾಂಕ 25.07.2016ರ ಒಳಗಾಗಿ ತಲುಪಿಸತಕ್ಕದ್ದು. ಎಲ್ಲಾ ಸರಿಯಾದ ಉತ್ತರ ಕಳುಹಿಸಿದವರ ಹೆಸರನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಅಲ್ಲದೇ ಅವರನ್ನು ಯೋಗ್ಯವಾಗಿ ಪುರಸ್ಕರಿಸಲಾಗುವುದು. ರಸಪ್ರಶ್ನೆಯಲ್ಲಿ ಅಭಿಮತ ಸಂಪಾದಕ ಮಂಡಳಿಯವರು, ಅವರ ಮನೆಯವರು, ಸಂಘದ ಕಾರ್ಯಕಾರಿ ಸಮಿತಿಯವರು ಮತ್ತು ಅವರ ಮನೆಯವರು ಭಾಗವಹಿಸುವಂತಿಲ್ಲ.

ಜೂನ್ 2016ರ ಅಭಿಮತ ಪತ್ರಿಕೆಯಲ್ಲಿ ಪ್ರಕಟವಾದ ರಸಪ್ರಶ್ನೆಗಳಿಗೆ **ಸರಿಯಾದ ಉತ್ತರ**
1. ಶ್ರೀಮತಿ ಮಂಜುಳಾ ನಾಗರಾಜ 2. ಡಾ. ಮಲ್ಲಿಕಾ ಎಸ್. ಘಂಟಿ ಮತ್ತು ಡಾ. ಚಂದ್ರಶೇಖರ ನಂಗ್ಲಿ 3. ದೇ. ಜವರೇಗೌಡ 4. ಜುಲೈ 24 5. ಡಾ. ವೈ. ಅವನೀಂದ್ರನಾಥ್ ರಾವ್ ಬಿಡುಗಡೆಗೊಳಿಸಿದವರು ಡಾ. ವೆಂಕಟಾಚಲ ಹೆಗಡೆ

**ಸರಿಯಾದ ಉತ್ತರ ಕಳುಹಿಸಿದವರು.**
ಶ್ರೀ ರಾಘವೇಂದ್ರ ಎಚ್.ಡಿ., ಶ್ರೀಮತಿ ಪ್ರೇಮಲತಾ, ಶ್ರೀ ಮಹೇಂದ್ರ ಎಚ್ ಶ್ರೀಮತಿ ಸೌಮ್ಯ ಕೊಟ್ರೇಶ್, ಶ್ರೀಮತಿ ನಾಗವೇಣಿ ಬಸವರಾಜು.


www.delhikarnatakasangha.com
DELHI KARNATAKA *SANGHA* Rao Tularam Marg, Sector-12, R K Puram, New Delhi-110022.
Phone: 011-26109615. 011-65643615 email:dksangha@gmail.com

## ಮುನ್ನೋಟ

ದೆಹಲಿ ಕರ್ನಾಟಕ ಸಂಘದ ಕಾರ್ಯಕ್ರಮಗಳಲ್ಲಿ ಈ ಬಾರಿ ಜುಲೈ 16ರಂದು ಕರ್ನಾಟಕದ ಹೆಸರಾಂತ ಯಕ್ಷಗಾನ ತಂಡಗಳಲ್ಲಿ ಒಂದಾದ ಶ್ರೀಗುರುಪ್ರಸಾದಿತ ಯಕ್ಷಗಾನ ಮಂಡಳಿ, ಸಾಲಿಗ್ರಾಮದ ಕಲಾವಿದರು ಪ್ರಪ್ರಥಮ ಬಾರಿಗೆ ಸಂಘದಲ್ಲಿ ಆಹೋರಾತ್ರಿ 'ಭೀಷ್ಮ ವಿಜಯ' ಹಾಗೂ 'ನಾಗಶ್ರೀ' ಎಂಬ ಕಥಾ ಪ್ರಸಂಗಗಳನ್ನು ಶ್ರೀ ಪಿ. ಕಿಶನ್ ಹೆಗ್ಡೆ ಅವರ ವ್ಯವಸ್ಥಾಪಕತ್ವದಲ್ಲಿ ಆಡಿತೋರಿಸಲಿದ್ದಾರೆ. ರಾತ್ರಿಪೂರ್ತಿ ನಡೆಯುವ ಈ ಯಕ್ಷಗಾನ ಕಾರ್ಯಕ್ರಮದಲ್ಲಿ ಕರ್ನಾಟಕದ ಕೇಂದ್ರದ ಸಚಿವರು ಮತ್ತು ಸಂಸದರು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಇದೇ ಸಂದರ್ಭದಲ್ಲಿ ಶ್ರೀ ಪಿ. ಕಿಶನ್ ಹೆಗ್ಡೆ ಅವರನ್ನು ಸಂಘದ ಪರವಾಗಿ ಅಭಿನಂದಿಸಲಾಗುವುದು. ಈ ಸುಂದರ ಕಾರ್ಯಕ್ರಮದಲ್ಲಿ ತಾವೆಲ್ಲರೂ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕಾಗಿ ವಿನಂತಿ. ಕಾರ್ಯಕ್ರಮದ ಮಧ್ಯಾಂತರದಲ್ಲಿ ಟೀ, ಕಾಫೀ, ಚುರುಮುರಿ, ಪಕೋಡ ಇತ್ಯಾದಿ ತಿಂಡಿಗಳು ತಮ್ಮನ್ನು ನಿದ್ರೆ ಬಾರದಂತೆ ಮಾಡಲಿದೆ. ಇದೇ ಜುಲೈ 24 ಸ್ಥಳೀಯ ಪ್ರತಿಭೆಗಳಿಂದ ಕನ್ನಡ ರಸಮಂಜರಿ ಕಾರ್ಯಕ್ರಮ ನಡೆಯಲಿದೆ, ಸ್ಥಳೀಯ ಕಲಾವಿದರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಇದರ ಲಾಭವನ್ನು ಪಡೆಯಬೇಕಾಗಿ ವಿನಂತಿ.

ಇತ್ತೀಚಿನ ದಿನಗಳಲ್ಲಿ ಸಂಘಕ್ಕೆ ಕನ್ನಡಿಗರು ಹೆಚ್ಚಿನ ಸಂಖ್ಯೆಯಲ್ಲಿ ಆಜೀವ ಸದಸ್ಯತ್ವವನ್ನು ಕೇಳಿಕೊಂಡು ಬರುತ್ತಿರುವುದರಿಂದ, ಕಾರ್ಯಕಾರಿ ಸಮಿತಿಯ ನಿರ್ಧಾರದಂತೆ ಪ್ರಸ್ತುತ ಸಂವಿಧಾನಕ್ಕೆ ತಿದ್ದುಪಡಿಯ ಬಗ್ಗೆ ಮುಂದೆ ನಡೆಯಲಿರುವ ವಾರ್ಷಿಕ ಸರ್ವ ಸದಸ್ಯರ ಸಭೆಯಲ್ಲಿ ಚರ್ಚಿಸಲಾಗುವುದು. ಸಂವಿಧಾನ ತಿದ್ದುಪಡಿ ಉಪಸಮಿತಿಯ ಅಧ್ಯಕ್ಷ ಶ್ರೀ ಪಿ.ಎಸ್. ಶೆಟ್ಟಿ, ಸಂಚಾಲಕರಾಗಿ ಡಾ. ಎಂ.ಎಸ್. ಶಶಿಕುಮಾರ್, ಸದಸ್ಯರುಗಳಾಗಿ ಶ್ರೀ ಇ.ಸಿ. ವಿದ್ಯಾಸಾಗರ್, ಶ್ರೀ ಬಿ.ಎಲ್. ಸುರೇಶ್, ಶ್ರೀ ಅನಂತನಾರಾಯಣ ಎಂ.ಜಿ., ಡಾ. ವಿ.ಆರ್. ಗುಡ್ಡೇಗೌಡ ಇವರ ಮುತುವರ್ಜಿಯಲ್ಲಿ ಈ ಕರಡು ಪ್ರತಿಯು ರೂಪುಗೊಂಡಿದೆ.

ಕರ್ನಾಟಕದಿಂದ ನೂತನವಾಗಿ ಆಯ್ಕೆಗೊಂಡ ರಾಜ್ಯಸಭಾ ಸಂಸದರು ಹಾಗೂ ಕೇಂದ್ರ ಮಂತ್ರಿಗಳಿಗೆ ದೆಹಲಿ ಕನ್ನಡಿಗರ ಪರವಾಗಿ ಅಭಿನಂದನೆಗಳು. ಅ

*ಸಿ.ಎಂ. ನಾಗರಾಜ, ಪ್ರಧಾನ ಕಾರ್ಯದರ್ಶಿ*

## ದೆಹಲಿ ಕರ್ನಾಟಕ ಸಂಘದ ಮುಂಬರುವ ಕಾರ್ಯಕ್ರಮಗಳು

**16 ಜುಲೈ 2016 ಶನಿವಾರ ರಾತ್ರಿ 8.30 ಗಂಟೆಯಿಂದ**

ಶ್ರೀಗುರುಪ್ರಸಾದಿತ ಯಕ್ಷಗಾನ ಮಂಡಳಿ, ಸಾಲಿಗ್ರಾಮ ಮೇಳ ಇವರಿಂದ 'ಭೀಷ್ಮ ವಿಜಯ' ಹಾಗೂ 'ನಾಗಶ್ರೀ' ಆಹೋರಾತ್ರಿ ಬಿಡುಗುತಿಟ್ಟು ಯಕ್ಷಗಾನ ಪ್ರದರ್ಶನ

**24 ಜುಲೈ 2016 ಭಾನುವಾರ ಸಂಜೆ 5.30 ಗಂಟೆಗೆ**

ಸ್ಥಳೀಯ ಪ್ರತಿಭೆಗಳಿಂದ ಕನ್ನಡ ರಸಮಂಜರಿ ಕಾರ್ಯಕ್ರಮ

**13 ಮತ್ತು 14 ಅಗಸ್ಟ್ 2016 ಶನಿವಾರ ಮತ್ತು ಭಾನುವಾರ ಸಂಜೆ 5.30 ಗಂಟೆಗೆ**

ರಂಗಮಂಟಪ ಟ್ರಸ್ಟ್ ಬೆಂಗಳೂರು ಕಲಾವಿದರಿಂದ– ವೈದೇಹಿ ಅವರ 'ಅಕ್ಕು' ಮತ್ತು ಕೆ.ವೈ. ನಾರಾಯಣ ಸ್ವಾಮಿ ಅವರ 'ಮಲ್ಲಿಗೆ' ಎರಡು ನಾಟಕಗಳ ಪ್ರದರ್ಶನ

**20 ಅಗಸ್ಟ್ 2016 ಶನಿವಾರ ಸಂಜೆ 5.30 ಗಂಟೆಗೆ**

ಸ್ಥಳೀಯ ಪ್ರತಿಭೆಗಳಿಂದ ಕನ್ನಡ ರಸಮಂಜರಿ ಕಾರ್ಯಕ್ರಮ

**28 ಅಗಸ್ಟ್ 2016 ಭಾನುವಾರ ಸಂಜೆ 5.30 ಗಂಟೆಗೆ**

ರಾಣಿ ಅಬ್ಬಕ್ಕ ಕುರಿತ ಕಾರ್ಯಕ್ರಮ

**11 ಸೆಪ್ಟೆಂಬರ್ 2016 ಭಾನುವಾರ ಸಂಜೆ 5.30 ಗಂಟೆಗೆ**

ರನ್ನ ಪ್ರತಿಷ್ಠಾನದ ಸಹಯೋಗದೊಂದಿಗೆ "ಮಹಾ ಕವಿ ರನ್ನ"ನ ಸಾಹಿತ್ಯ ಕಾರ್ಯಕ್ರಮ

**18 ಸೆಪ್ಟೆಂಬರ್ 2016 ಭಾನುವಾರ**

ತುಳು ಸಂಭ್ರಮ ಕಾರ್ಯಕ್ರಮ

**25 ಸೆಪ್ಟೆಂಬರ್ 2016 ಭಾನುವಾರ**

ಸ್ಥಳೀಯ ಪ್ರತಿಭೆಗಳಿಂದ ಕನ್ನಡ ರಸಮಂಜರಿ ಕಾರ್ಯಕ್ರಮ

**8 ಮತ್ತು 9 ಅಕ್ಟೋಬರ್ 2016 ಶನಿವಾರ ಮತ್ತು ಭಾನುವಾರ**

ಕನ್ನಡ ಸಾಹಿತ್ಯ ಪರಿಷತ್ತಿನ ಸಹಕಾರದಿಂದ ಹೊರನಾಡ ಕನ್ನಡಿಗರ ಸಮಾವೇಶ

### ದಿನಾಂಕ ನಿಗದಿಯಾಗದ ಕಾರ್ಯಕ್ರಮಗಳು

**ಸಾಹಿತಿ ನಿರಂಜನ ನೆನಪು**

**ನೃತ್ಯ ಮತ್ತು ಹಾಡು**

ಸ್ಥಳೀಯ ಪ್ರತಿಭೆಗಳಿಂದ ಬಹುಭಾಷಾ ನೃತ್ಯ ಮತ್ತು ಬಹುಭಾಷಾ ಹಾಡುಗಳ ಕಾರ್ಯಕ್ರಮ

**ಸಾಹಿತ್ಯ ಕಾರ್ಯಕ್ರಮ**

ಕವಿ ರತ್ನಾಕರ ವರ್ಣಿ ಸಾಹಿತ್ಯ ಕಾರ್ಯಕ್ರಮ

**ನಾಟಕ ಪ್ರದರ್ಶನ**

ಪ್ರೊ. ಎಚ್.ಎಸ್. ಶಿವಪ್ರಕಾಶ್ ನಿರ್ದೇಶನದಲ್ಲಿ ನಾಟಕ ಪ್ರದರ್ಶನ

ದೆಹಲಿ ಕರ್ನಾಟಕ ಸಂಘದ ಸುಸಜ್ಜಿತವಾದ ಆರ್ಟ್ ಗ್ಯಾಲರಿ ಕಲಾ ಪ್ರದರ್ಶನಕ್ಕಾಗಿ ಸಿದ್ಧವಿದೆ. ಹೆಚ್ಚಿನ ಮಾಹಿತಿಗಾಗಿ ದೆಹಲಿ ಕರ್ನಾಟಕ ಸಂಘದ ಕಾರ್ಯಾಲಯವನ್ನು ಸಂಪರ್ಕಿಸಿರಿ. ಫೋನ್ : 8860848585 – 011-26109615, 011-26104818

ಅಭಿಮತ

ಸಂಪುಟ 26 ಸಂಚಿಕೆ 10
ಜುಲೈ 2016

**ಅಭಿಮತ ಪ್ರಧಾನ ಸಂಪಾದಕರು**

ಬಾಲಕೃಷ್ಣ ನಾಯ್ಕ್ ಡಿ.

**ಅಭಿಮತ ಸಂಪಾದಕ ಮಂಡಳಿ**

ಸಖಾರಾಮ ಉಪ್ಪೂರು
ಚಂದ್ರಶೇಖರ್ ಎನ್.ಪಿ.
ಎಸ್. ಕುಮಾರ್

**ಮುಖಪುಟ ಚಿತ್ರ**
ಆನಂದ ಈಶ್ವರಪ್ಪ ಮುರಗೋಡ

## ಸಂಪಾದಕೀಯ

# ಒಕ್ಕೂಟದಿಂದ ಹೊರಗೆ

ಕಳೆದ ಶತಮಾನದಲ್ಲಿ ಎರಡು ಜಾಗತಿಕ ಮಹಾಯುದ್ಧಗಳು ನಡೆದಿವೆ. ವಿಶ್ವದ ಮಹಾನ್ ರಾಷ್ಟ್ರಗಳು ಯುದ್ಧಗಳಿಂದ ಕಷ್ಟನಷ್ಟಗಳನ್ನು ಅನುಭವಿಸಿವೆ. ಇನ್ನು ಮೂರನೇ ಮಹಾಯುದ್ಧವನ್ನು ತಪ್ಪಿಸುವ ಆಶಯದೊಂದಿಗೆ ಐದು ದಶಕಗಳ ಹಿಂದೆ ಐರೋಪ್ಯ ಒಕ್ಕೂಟವು ಅಸ್ತಿತ್ವಕ್ಕೆ ಬಂತು. ಬಹುವಂಶೀಯ, ಬಹುಸಂಸ್ಕೃತಿಯ ಮತ್ತು ಬಹುಭಾಷೆಗಳ ಐರೋಪ್ಯ ಒಕ್ಕೂಟವನ್ನು ಪ್ರಜಾತಂತ್ರದಲ್ಲಿ ಅಪಾರ ನಂಬಿಕೆಯಿಟ್ಟು, ವೈವಿಧ್ಯತೆಯನ್ನು ಆರಾಧಿಸುವ ಭಾರತವು ಆರಂಭದಿಂದಲೇ ನಿರಾಳವಾಗಿ ಒಪ್ಪಿಕೊಂಡಿತ್ತು. ಆದರೆ ಐರೋಪ್ಯ ಒಕ್ಕೂಟದಿಂದ ಬ್ರಿಟನ್ ಹೊರನಡೆಯಬೇಕು ಎಂದು ಇತ್ತೀಚೆಗೆ ನಡೆದ ಜನಮತಗಣನೆಯಲ್ಲಿ ಬಹುಮತದ ತೀರ್ಪು ಹೊರಬಿದ್ದ ನಂತರ ಜಗತ್ತಿನಾದ್ಯಂತ ಬೇರೆ ಬೇರೆ ರೀತಿಯ ಪ್ರತಿಕ್ರಿಯೆಗಳು ವ್ಯಕ್ತವಾಗುತ್ತಿವೆ. ಇದೊಂದು ರಾಜಕೀಯ ಮತ್ತು ಆರ್ಥಿಕ ವಲಯಗಳಲ್ಲಿ ಮಾತ್ರ ಸಂಚಲನ ಮಾಡುವ ಘಟನೆ ಎಂದುಕೊಳ್ಳಲು ಸಾಧ್ಯವಿಲ್ಲ. ಇಲ್ಲಿ ಸಾಮಾಜಿಕ, ಸಾಂಸ್ಕೃತಿಕ, ಜನಾಂಗೀಯ, ಮನೋವೈಜ್ಞಾನಿಕ ಮೊದಲಾದ ವಿವಿಧ ಆಯಾಮಗಳಲ್ಲಿ ತೆರೆದುಕೊಳ್ಳುವ ಪ್ರಶ್ನೆಗಳಿಗೆ ವಿಶ್ವದ ವಿವಿಧ ಕಡೆಗಳಿಂದ ಉತ್ತರಗಳನ್ನು ಕಂಡುಕೊಳ್ಳಬೇಕಾಗಿದೆ. ಯುರೋಪಿಯನ್ ಒಕ್ಕೂಟದಿಂದ ಬ್ರಿಟನ್ ಹೊರಹೋಗಲು, ಬ್ರಿಟನ್‌ನಲ್ಲಿ ನೆಲೆಸಿರುವ ಭಾರೀ ಪ್ರಮಾಣದ ವಿದೇಶಿ ಮೂಲದವರೇ ಕಾರಣ ಎಂಬ ಅನುಮಾನ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ.

ಜನಾಭಿಪ್ರಾಯ ಹೊರಬಿದ್ದ ಬೆನ್ನಲ್ಲೇ, ಬ್ರಿಟನ್ ರಾಜಧಾನಿ ಲಂಡನ್ ಸೇರಿದಂತೆ ಇಂಗ್ಲೆಂಡ್‌ನ ವಿವಿಧ ಭಾಗಗಳಲ್ಲಿ ವಲಸಿಗರ ವಿರುದ್ಧ ತೀವ್ರ ಆಕ್ರೋಶ ವ್ಯಕ್ತವಾಗಿದೆ. ವಲಸಿಗರ ವಿರುದ್ಧ ಸಾರ್ವಜನಿಕವಾಗಿ ಅವಹೇಳನಕಾರಿ ಟೀಕೆ, ಮಾನಸಿಕ ಮತ್ತು ದೈಹಿಕ ಹಲ್ಲೆಯಂತಹ ಘಟನೆಗಳು ದಾಖಲಾಗಿವೆ. ಬ್ರಿಟನ್‌ನಲ್ಲಿ ನಡೆಯುತ್ತಿರುವಂತೆ ಅಟ್ಲಾಂಟಿಕ್ ಸಾಗರದಾಚೆ ಅಮೇರಿಕಾದಲ್ಲೂ, ಅಲ್ಲಿ ನಡೆಯುತ್ತಿರುವ ಅಧ್ಯಕ್ಷೀಯ ಚುನಾವಣೆಯಲ್ಲಿ ವಲಸಿಗರನ್ನು ಬೆಂಬಲಿಸುವ ಅಭ್ಯರ್ಥಿಗೆ ಮತದಾರರ ಬೆಂಬಲ ಯಾವ ರೀತಿ ಇರುವುದು ಎಂಬ ಚರ್ಚೆ ನಡೆಯುತ್ತಿದೆ. ಇನ್ನು ಮುಂದಿನ ಎರಡು ದಶಕಗಳಲ್ಲಿ ವಲಸಿಗರು ಎದುರಿಸಬೇಕಾಗುವ ಸಮಸ್ಯೆಗಳ ಜತೆಗೆ ವಲಸಿಗರಿಂದಾಗಿ ವಿವಿಧ ನಗರಗಳಲ್ಲಿ ಜನರು ಅನುಭವಿಸಬೇಕಾಗುವ ತೊಂದರೆಗಳ ಕುರಿತು ಜನಸಂಖ್ಯಾಶಾಸ್ತ್ರಜ್ಞರು ತುಂಬಾ ಚಿಂತಿತರಾಗಿದ್ದಾರೆ. ಜಾಗತೀಕರಣದಿಂದ ಒಂದು ವರ್ಗದ ಜನರು ಸುದೃಢರಾದರೆ, ಉಳಿದ ಬಹುವರ್ಗದ ಜನರು ಮೂಲೆಗುಂಪಾಗುತ್ತಿದ್ದಾರೆ. ಜಗತ್ತಿನ ಎಲ್ಲಾ ಕಡೆ ಸಾಮಾಜಿಕ ಭದ್ರತೆಯು ಕ್ಷೀಣಿಸುತ್ತಿರುವ ಸಂದರ್ಭದಲ್ಲಿ ತಮ್ಮ ಆರ್ಥಿಕ ನೀತಿಗಳು ಬೀರುವ ಸಾಮಾಜಿಕ ಪರಿಣಾಮಗಳ ಕುರಿತು ಸರಕಾರಗಳು ನಿರ್ಲಿಪ್ತವಾಗಿವೆ. ಅಂತೆಯೇ ಬ್ರೆಕ್ಸಿಟ್‌ನಂತಹ ಐತಿಹಾಸಿಕ ಘಟನೆಗಳು ಭಾರತದ ಆರ್ಥಿಕ ಮತ್ತು ಸಾಮಾಜಿಕ ಬದುಕಿನಲ್ಲಿಯೂ ಪರಿಣಾಮಗಳನ್ನು ಬೀರುತ್ತವೆ.

ವಲಸಿಗರ ಸಮಸ್ಯೆ ಯುರೋಪ್, ಅಮೇರಿಕಾದಂತಹ ಮುಂದುವರಿದ ದೇಶಗಳದ್ದು ಮಾತ್ರ ಎಂದು ನಾವು ಕಣ್ಣು ಮುಚ್ಚಿ ಕುಳಿತುಕೊಳ್ಳುವಂತಿಲ್ಲ. ನಮ್ಮ ನಾಡಿನಲ್ಲೂ ವಲಸಿಗರು, ಮುಖ್ಯವಾಗಿ ಆಫ್ರಿಕಾ ಖಂಡದ ಮತ್ತು ಈಶಾನ್ಯ ಭಾರತದ ಜನರು, ಅನುಭವಿಸುವ ತೊಂದರೆಗಳು ದೇಶಾದ್ಯಂತ ಸುದ್ದಿ ಮಾಡುತ್ತಿವೆ. ನೆರೆಯ ಕೇರಳದಲ್ಲಿ ಮಾತ್ರವಲ್ಲದೇ ನಮ್ಮದೇ ನಾಡಿನ ಕೆಲವು ಜಿಲ್ಲೆಗಳಲ್ಲಿ ಹೊರನಾಡಿನಿಂದ ಕೆಲಸಗಳಿಗೆ ಬರುವವರು ಸ್ಥಳೀಯವಾಗಿ ಬಹಳಷ್ಟು ಸಂಕಷ್ಟಗಳನ್ನು ಅನುಭವಿಸುತ್ತಿದ್ದಾರೆ. ಸ್ಥಳೀಯ ಜನರ ಆಕಾಂಕ್ಷೆಗಳಿಗೆ ವಲಸಿಗರು ತೊಂದರೆ ನೀಡುತ್ತಾರೆ ಎಂಬುದು ದೂರು. ಆದರೆ ಜಾಗತೀಕರಣದ ಪರಿಣಾಮವಾಗಿ ಒಂದು ಕಡೆಯ ಜನರು ಇನ್ನೊಂದು ಕಡೆ, ಇನ್ನೊಂದು ಕಡೆಯ ಜನರು ಮತ್ತೊಂದು ಕಡೆಗೆ ಹೋಗುವುದು ಸಾಮಾನ್ಯವಾಗಿ ಬಿಟ್ಟಿದೆ. ದೂರದ ನಮ್ಮ ನಾಡಿನಿಂದ ಹೊರಬಂದು ದೆಹಲಿಯಲ್ಲಿ ವಾಸಿಸುವ ನಾವೆಲ್ಲರೂ ಒಂದು ರೀತಿಯ ವಲಸಿಗರೇ ಆಗಿರುವುದರಿಂದ ನಮ್ಮ ಆರ್ಥಿಕ ಮತ್ತು ಸಾಮಾಜಿಕ ಬದುಕಿನಲ್ಲಿ ಜಾಗತೀಕರಣದ ಪರಿಣಾಮಗಳ ಕುರಿತು ಆಲೋಚಿಸುವ ಅಗತ್ಯವಿದೆ. ಇಂತಹ ಸಂದರ್ಭಗಳಲ್ಲಿ ದೆಹಲಿ ಕರ್ನಾಟಕ ಸಂಘವು ಉನ್ನತ ಮಟ್ಟದ ಚರ್ಚೆಗಳನ್ನು ನಡೆಸಿ ಸಾಮಾಜಿಕ ಸ್ಥೈರ್ಯವನ್ನು ಎಲ್ಲರಿಗೂ ನೀಡಬೇಕಾಗಿದೆ. ಅ

*ಬಾಲಕೃಷ್ಣ ನಾಯ್ಕ್ ಡಿ.*




# ಡುಂಡಿರಾಜರೊಡನೆ ಪರಸ್ಪರ

ಕರ್ನಾಟಕದ ಸುಪ್ರಸಿದ್ಧ ಚುಟುಕು ಕವಿ ಎಚ್. ಡುಂಡಿರಾಜ್ ಅವರು ಇದೇ ಜೂನ್ 21ರಂದು ದೆಹಲಿಯ ಕನ್ನಡಿಗರೊಡನೆ ಸುಮಾರು ಎರಡು ಗಂಟೆಗಳ ಕಾಲ ಅತ್ಯಂತ ಆತ್ಮೀಯವಾಗಿ 'ಪರಸ್ಪರ' ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಸೆಕೆಯ ದಗೆಯಲ್ಲೂ ಮತ್ತು ರಜಾದಿನವಲ್ಲದಿದ್ದರೂ ಸುಮಾರು 80 ಮಂದಿ ಕನ್ನಡಿಗರು ದೆಹಲಿಯ ನಾನಾ ಮೂಲೆಗಳಿಂದ ಬಂದು ಡುಂಡಿರಾಜರ ಅತ್ಯಂತ ಅರ್ಥಗರ್ಭಿತ ಹಾಗೂ ವ್ಯಂಗ್ಯ ಹಾಸ್ಯದಿಂದ ಕೂಡಿದ ನೂರಾರು ಚುಟುಕುಗಳನ್ನು ಕೇಳಿ ಆನಂದಿಸಿದರು. ವೃತ್ತಿಯಿಂದ ಕಾರ್ಪೋರೇಷನ್ ಬ್ಯಾಂಕಿನಲ್ಲಿ ಒಬ್ಬ ಡೆಪ್ಯುಟಿ ಜನರಲ್ ಮ್ಯಾನೇಜರ್ ಆಗಿ ಕರ್ನಾಟಕದ ಬೆಳಗಾವಿ, ಬೆಂಗಳೂರು ಹಾಗೂ ಪ್ರಧಾನ ಕಛೇರಿ ಮಂಗಳೂರು ಸೇರಿದಂತೆ ರಾಜ್ಯದ ಹಲವಾರು ಪ್ರದೇಶಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ತಮ್ಮ ವೈಯಕ್ತಿಕ ಕಾರ್ಯನಿಮಿತ್ತ ಮಡದಿಯೊಂದಿಗೆ ದೆಹಲಿಗೆ ಆಗಮಿಸಿದ್ದ ಡುಂಡಿರಾಜರು ಕಾರ್ಯಕ್ರಮದ ಆರಂಭದಿಂದಲೇ ನೆರೆದಿದ್ದ ದೆಹಲಿ ಕನ್ನಡಿಗರನ್ನು ನಗೆಗಡಲಲ್ಲಿ ಮುಳುಗಿಸಿದರು. ಪ್ರತಿ ಚುಟುಕಿನಲ್ಲೂ ಹಾಸ್ಯ ಜೊತೆ ಜೊತೆಗೆ ಮೊನಚಾದ ಚಟಾಕಿಯಂತಹ ಪಂಚು ಎಲ್ಲ ರಸಿಕರನ್ನು ರಂಜಿಸಿದವು.

ತಮ್ಮ ವೃತ್ತಿ ಜೀವನದ ಅನುಭವಗಳ ಜೊತೆ ಜೊತೆಗೆ ಸಮಾಜದ ಎಲ್ಲಾ ಆಗುಹೋಗುಗಳನ್ನು ಹಾಗೂ ದೇಶ ವಿದೇಶಗಳಲ್ಲಿ ನಡೆಯುವ ವಿವಿಧ ಘಟನೆ ಪ್ರಸಂಗಗಳನ್ನು ಡುಂಡಿರಾಜರು ತಮ್ಮ ಚುಟುಕು ಹಾಗೂ ಕವನಗಳ ವಸ್ತುವನ್ನಾಗಿ ಮಾಡಿಕೊಂಡಿದ್ದಾರೆ. ಉಡುಪಿ ಜಿಲ್ಲೆಯ ಕುಂದಾಪುರದ ಸಮೀಪದ ಹಟ್ಟಿಕುದ್ರಿನಲ್ಲಿ 1956ರಲ್ಲಿ ಜನಿಸಿದ ಡುಂಡಿರಾಜರು ತಮ್ಮ ಬಾಲ್ಯ ದಿನದಿಂದಲೇ ಹನಿಗವನಗಳನ್ನು ಬರೆಯಲು ಪ್ರಾರಂಭಿಸಿದ್ದರು. ಮುಂದೆ ಹಲವಾರು ಕವನ ಸಂಕಲನಗಳು, ಹಾಸ್ಯ ನಾಟಕಗಳನ್ನು ಬರೆದಿದ್ದಾರೆ. ಅಲ್ಲದೇ ವಿಜಯ ಕರ್ನಾಟಕದ ಅಂಕಣಕಾರರಾಗಿ ಕೂಡ ಅವರು ಬೆಳೆದು ಬಂದಿದ್ದಾರೆ. ದಿನಕ್ಕೊಂದು ಚುಟುಕು ಎಂಬ ಶೀರ್ಷಿಕೆಯಡಿ ಉದಯವಾಣಿಯಲ್ಲಿ ಪ್ರತಿನಿತ್ಯ ಒಂದು ಚುಟುಕನ್ನು ಪ್ರಕಟಿಸುತ್ತಿದ್ದಾರೆ. ಹೀಗೆ ಅಂದಿನಿಂದ ಇಂದಿನವರೆಗೆ ಸುಮಾರು 3000ಕ್ಕಿಂತ ಹೆಚ್ಚು ಚುಟುಕುಗಳನ್ನು ಬರೆಯುತ್ತಾ ಬಂದಿರುವ ಡುಂಡಿರಾಜರು ಈಗಲೂ ಬಹಳ ಸಕ್ರಿಯವಾಗಿ ಕನ್ನಡ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಚುಟುಕುಗಳನ್ನು ಹೇಳುವ ಮಧ್ಯೆ ಮಧ್ಯೆ ಅವರು ತಮ್ಮ ಹಲವಾರು ಅನಿಸಿಕೆ ಮತ್ತು ಅನುಭವಗಳನ್ನೂ ಕೂಡಾ ನೆರೆದವರೊಡನೆ ಹಂಚಿಕೊಂಡರು. ತಾವು ಅಮೇರಿಕದ ಅಕ್ಕಾ ಸಮ್ಮೇಳನಕ್ಕೆ ಹೋಗಿದ್ದು ಅಲ್ಲಿ ಚುಟುಕುಗಳನ್ನು ಓದಿದ್ದು ಮತ್ತು ಹಲವಾರು ರೇಡಿಯೋ ಮತ್ತು ದೂರದರ್ಶನ ಕಾರ್ಯಕ್ರಮಗಳಲ್ಲಿ ಚುಟುಕುಗಳನ್ನು ಪ್ರಸ್ತುತಪಡಿಸಿದ್ದು ಮತ್ತು ಅಲ್ಲಿ ನಡೆದ ರಸಮಯ ಅನುಭವಗಳನ್ನು ಸಹ ಅವರು ಹಂಚಿಕೊಂಡರು. ಮಡದಿ ಭಾರತಿ ಅವರನ್ನೇ ಹಲವಾರು ಚುಟುಕುಗಳಲ್ಲಿ ತಮ್ಮ ಸ್ಫೂರ್ತಿಯನ್ನಾಗಿ ಬಳಸಿಕೊಂಡಿರುವ ಕವಿ ಮಡದಿಯ ಸಮ್ಮುಖದಲ್ಲೇ ಹಲವಾರು ಸುಂದರ ಚುಟುಕುಗಳನ್ನು ಪ್ರಸ್ತುತಪಡಿಸಿದರು.

'ದೀಪಾವಳಿಯ ಪ್ರಯುಕ್ತ ಒಳ ಉಡುಪುಗಳ ಮೇಲೆ ಬಾರಿ ಕಡಿತ ಕೊಂಡು ಬಳಸಿದ ಮೇಲೆ ನಮಗೂ ಸ್ವಲ್ಪ ಒಳಗೊಳಗೆ ಕಡಿತ', ಕಂಬಳಿ ಹೇಗೆ ತಡೆಯಲಿ ಮೈ ನಡುಗುವ ಚಳಿ ಇಲ್ಲ ನನ್ನ ಬಳಿ ಹೊದೆಯಲು ಕಂಬಳಿ ಆದ್ದರಿಂದ ಪ್ರಿಯೆ ನೀನೆ COME ಬಳಿ, 'ಓ ಪ್ರಿಯೆ ನಾನು ಹೃದಯ ಶ್ರೀಮಂತಿಕೆಯಲ್ಲಿ ಟಾಟಾ ಬಿರ್ಲಾರಷ್ಟೇ ಶ್ರೀಮಂತ ಎಂದಾಗ ಹುಡುಗಿ ಎಂದಳು ಹಾಗಾದರೆ ಟಾಟಾ ಇನ್ನು ಬರ್ಲಾ' 'ಕ್ಯಾಶ್ ಕೌಂಟರ್‌ನಲ್ಲಿ ಕುಳಿತ ಸುಂದರಿ ನಗಳು ಏಕೆಂದರೆ ನಾವು ಆಗಲೇ ಹಾಕಿದ್ದೇವೆ ಅಲ್ಲಿ ಫಲಕ 'ನಗದು'.

ಕಾರ್ಯಕ್ರಮದಲ್ಲಿ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರು, ಪದಾಧಿಕಾರಿಗಳು ಮತ್ತು ಕಾರ್ಯಕಾರಿ ಸಮಿತಿಯ ಸದಸ್ಯರ ಜೊತೆಗೆ ಸಂಘದ ಮಾಜಿ ಅಧ್ಯಕ್ಷರು ಹಾಗೂ ಜೆಎನ್‌ಯು ಕನ್ನಡ ಪೀಠದ ಪ್ರಾಧ್ಯಾಪಕರಾಗಿರುವ ಡಾ. ಪುರುಷೋತ್ತಮ ಬಿಳಿಮಲೆ, ಕಾರ್ಪೋರೇಷನ್ ಬ್ಯಾಂಕಿನ ದೆಹಲಿಯ ವಿವಿಧ ಶಾಖೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಹಿರಿಯ ಅಧಿಕಾರಿಗಳು, ದೆಹಲಿಯ ವಿವಿಧ ಕನ್ನಡ ಸಂಘ ಸಂಸ್ಥೆಗಳ ಅಧ್ಯಕ್ಷರು ಮತ್ತು ಪದಾಧಿಕಾರಿಗಳು ಹಾಗೂ ಕನ್ನಡ ಸಾಹಿತ್ಯ ರಸಿಕರು ಬಂದು ನೆರೆದಿದ್ದರು. ಕಾರ್ಯಕ್ರಮದ ಮೊದಲಲ್ಲಿ ಶ್ರೀ ಸಖಾರಾಮ ಉಪ್ಪೂರು ಅವರು ಡುಂಡಿರಾಜರನ್ನು ಸಭೆಗೆ ಪರಿಚಯಿಸುತ್ತಾ ಅವರು ಕರ್ನಾಟಕ ಸಾರಸ್ವತ ಲೋಕಕ್ಕೆ ತಮ್ಮದೇ ಆದ ವಿಶಿಷ್ಟ ಕೊಡುಗೆ ನೀಡಿ ಕನ್ನಡ ಸಂಸ್ಕೃತಿ ಮತ್ತು ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ ಎಂದು ನುಡಿದರು. ಡಾ. ಪುರುಷೋತ್ತಮ ಬಿಳಿಮಲೆ ಅವರು ಡುಂಡಿರಾಜರು ಹಾಗೂ ತಮ್ಮ ನಡುವಿನ ಕಳೆದ ಸುಮಾರು 30ವರ್ಷಗಳ ಸಾಹಿತ್ಯಕ ಸಂಬಂಧವನ್ನು ನೆನಪಿಸಿಕೊಂಡರು. ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಡುಂಡಿರಾಜರು ದೆಹಲಿಗೆ ಬರುತ್ತಿದ್ದಾರೆ ಎಂಬ ಸುದ್ದಿ ಕಾರ್ಪೋರೇಷನ್ ಬ್ಯಾಂಕ್‌ನ ಡೆಪ್ಯುಟಿ ಜನರಲ್ ಮ್ಯಾನೇಜರ್ ಶ್ರೀ ರತ್ನಾಕರ್ ಅವರಿಂದ ತಿಳಿದ ತಕ್ಷಣ ಅತ್ಯಂತ ಮುತುವರ್ಜಿಯಿಂದಸುಂದರ ಚುಟುಕು, ಹನಿಗವನಗಳ ಈ ಕಾರ್ಯಕ್ರಮವನ್ನು ಏರ್ಪಡಿಸಲಾಯಿತು ಎಂದರು.

ಕಾರ್ಯಕ್ರಮದ ಕೊನೆಯಲ್ಲಿ ಜಂಟಿ ಕಾರ್ಯದರ್ಶಿ ಶ್ರೀ ಟಿ.ಪಿ. ಬೆಳ್ಳಿಯಪ್ಪ ಅವರು ಡುಂಡಿರಾಜ್ ದಂಪತಿ ಮತ್ತು ಕಾರ್ಯಕ್ರಮಕ್ಕೆ ಆಗಮಿಸಿದ ಎಲ್ಲರಿಗೂ ಹೃತ್ಪೂರ್ವಕ ಧನ್ಯವಾದಗಳನ್ನರ್ಪಿಸಿದರು. ನೆರೆದವರೆಲ್ಲರೂ ಜೊತೆಗೂಡಿ ಊಟವನ್ನು ಸವಿಯುತ್ತಾ ಡುಂಡಿರಾಜರೊಡನೆ ಇನ್ನೂ ಸುಮಾರು ಒಂದು ಗಂಟೆ ಕಾಲ ಹರ್ಷೋಲ್ಲಾಸದಿಂದ ಕಳೆದರು. ಅ

*ಸಖಾರಾಮ ಉಪ್ಪೂರು*




# ಕಯ್ಯಾರ ಕಿಞ್ಞಣ್ಣ ರೈ ನೆನಪು

ದೆಹಲಿ ಕರ್ನಾಟಕ ಸಂಘದಲ್ಲಿ ಶತಮಾನ ಕಂಡ ಕನ್ನಡದ ಕಯ್ಯಾರ–'ಕಯ್ಯಾರ ಕಿಞ್ಞಣ್ಣ ರೈ ನೆನಪು' ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಇದೇ ಜೂನ್ 5ರಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ಹಮ್ಮಿಕೊಳ್ಳಲಾಗಿತ್ತು. ವಿಶೇಷ ಉಪನ್ಯಾಸಕರಾಗಿ ಹಿರಿಯ ಪತ್ರಕರ್ತರು ಹಾಗೂ ಅಂಕಣಕಾರರಾದ ಎಂ.ಕೆ. ಭಾಸ್ಕರ ರಾವ್ ಮತ್ತು ಖ್ಯಾತ ಸಾಹಿತಿಗಳು ಹಾಗೂ ರಂಗಕರ್ಮಿಗಳಾದ ಡಾ. ನಾ. ದಾಮೋದರ ಶೆಟ್ಟಿ ಅವರು ಭಾಗವಹಿಸಿದ್ದರು.

ಕಾಸರಗೋಡು ಕರ್ನಾಟಕದಲ್ಲಿ ವಿಲೀನಗೊಳ್ಳಬೇಕು ಎಂಬುದು ಕಯ್ಯಾರ ಕಿಞ್ಞಣ್ಣ ರೈಗಳ ಕನಸು, ಕನವರಿಕೆ ಆಗಿಯೇ ಉಳಿಯಿತು ಎಂದು ಹಿರಿಯ ಪತ್ರಕರ್ತ ಭಾಸ್ಕರ್ ರಾವ್ ಹೇಳಿದರು. ಕಾಸರಗೋಡನ್ನು ಕನ್ನಡಮಯಗೊಳಿಸಲು ರೈಗಳು ಪಟ್ಟ ಶ್ರಮ ಅಷ್ಟಿಷ್ಟಲ್ಲ. ಇತ್ತೀಚೆಗೆ ನಡೆದ ಕೇರಳ ವಿಧಾನ ಸಭಾ ಚುನಾವಣೆ ಸಂದರ್ಭದಲ್ಲಿ ಮಂಜೇಶ್ವರ ಕ್ಷೇತ್ರದಿಂದ ಗೆದ್ದ ಮುಸ್ಲಿಂ ಲೀಗ್ ಅಭ್ಯರ್ಥಿ ಕನ್ನಡದಲ್ಲಿ ಪ್ರಮಾಣ ವಚನ ಸ್ವೀಕಾರ ನಡೆಸಲು ರೈಗಳ ಪ್ರಯತ್ನವೇ ಕಾರಣ ಎಂದು ಭಾಸ್ಕರ್ ರಾವ್ ಅಭಿಪ್ರಾಯ ಪಟ್ಟರು.

ಕನ್ನಡವೇ ಮಾತನಾಡುವ ಕಾಸರಗೋಡನ್ನು ಕರ್ನಾಟಕಕ್ಕೆ ಸೇರಿಸಲು ಹೋರಾಟ ಸಂಘಟಿಸಿದವರೇ ರೈಗಳು. ಆದರೆ ಆವರ ಹೋರಾಟಕ್ಕೆ ಕಾಸರಗೋಡಿನಿಂದ ಹೊರಗಿನ ಕನ್ನಡಿಗರಿಂದ ಸೂಕ್ತ ಬೆಂಬಲ ಸಿಗಲಿಲ್ಲ ಎಂದು ಅವರು ಹೇಳಿದರು.

ಮಹಾಜನ್ ವರದಿ ಪ್ರಕಾರ ಕಾಸರಗೋಡಿನ ಅನೇಕ ಭಾಗಗಳು ಕರ್ನಾಟಕಕ್ಕೆ ಸೇರಬೇಕಿತ್ತು. ಆದರೆ ಆ ವರದಿ ಅನುಷ್ಠಾನಗೊಳ್ಳದಿರಲು ಕರ್ನಾಟಕದ ರಾಜಕೀಯವೇ ಕಾರಣ. ಕೇಂದ್ರ ಸರ್ಕಾರದ ವಿರುದ್ಧ ಹೋಗಬಾರದು ಎಂಬ ದಾಸ್ಯ ಮನೋಭಾವ ಕರ್ನಾಟಕದ ರಾಜಕಾರಣಿಗಳಲ್ಲಿದೆ. ಇದನ್ನು ಪ್ರತಿಭಟಿಸಿದವರು ರೈಗಳು ಎಂದು ವಿವರಿಸಿದರು.

ರೈ ಅವರ ಹೋರಾಟಕ್ಕೆ ಕರ್ನಾಟಕದಿಂದ ಸೂಕ್ತ ಸ್ಪಂದನೆ ಸಿಗಲಿಲ್ಲ. ಕಾಸರಗೋಡಿನ ಒಬ್ಬ ರಾಜಕಾರಣಿ ಕನ್ನಡದಲ್ಲಿ ಪ್ರಮಾಣ ವಚನ ತೆಗೆದುಕೊಳ್ಳುತ್ತಾನೆ ಎಂದರೆ ಆ ಭಾಗದಲ್ಲಿ ಕನ್ನಡದ ಕಿಡಿ ಇದೆ ಎಂದೇ ಅರ್ಥ. ಆ ಕಿಡಿಯ ಮೇಲಿನ ಬೂದಿ ತೆಗೆಯುವ ಕೆಲಸ ಆಗಬೇಕಿದೆ. ಕಾಸರಗೋಡು ಕರ್ನಾಟಕದಲ್ಲಿ ವಿಲೀನವಾಗದೆ ರೈಗಳ ಆತ್ಮಕ್ಕೆ ಶಾಂತಿ ಸಿಗಲು ಸಾಧ್ಯವೇ? ಎಂದು ರಾವ್ ಪ್ರಶ್ನಿಸಿದರು. ಖಡ್ಗವಾಗಲಿ ಕಾವ್ಯ ಎಂಬುದನ್ನು ಎಷ್ಟೋ ದಶಕಗಳ ಹಿಂದೆ ಯೋಚಿಸಿದವರು ರೈಗಳು. ಅವರ ಕಾವ್ಯ ಎಂದರೆ ಪ್ರತಿಭಟನಾ ಅಸ್ತ್ರ ಎಂದು ರಾವ್ ಬಣ್ಣಿಸಿದರು.

ಕಿಞ್ಞಣ್ಣ ರೈಗಳು ಗಡಿನಾಡ ಗಾಂಧಿ ಆಗಿದ್ದರು. ಮಂಗಳೂರಿನಲ್ಲಿ ಪತ್ರಕರ್ತರಾಗಿದ್ದ ರೈಗಳು ಗಾಂಧಿಯ ಕರೆಗೆ ಓಗೊಟ್ಟು ಹಳ್ಳಿಗೆ ಹಿಂತಿರುಗಿದರು ಎಂದು ಖ್ಯಾತ ಸಾಹಿತಿ ನಾ. ದಾಮೋದರ ಶೆಟ್ಟಿ ಹೇಳಿದರು.

ರೈ ಅವರ ಭಾಷೆಗೆ ಅವರೇ ಸಾಟಿ. ಇನ್ನೊಬ್ಬರು ಯಾರೇ ಅವರ ಭಾಷೆಯನ್ನು ಬಳಸಿಲ್ಲ. ಇವರ ರೀತಿ ಘರ್ಜನೆಯ ಭಾಷೆ ಇಟ್ಟುಕೊಂಡು ಬರೆಯಲು ಯಾರಿಗೂ ಸಾಧ್ಯವಾಗಿಲ್ಲ ಎಂದು ದಾಮೋದರ ಶೆಟ್ಟಿ ಅಭಿಪ್ರಾಯ ಪಟ್ಟರು.

ಅವರ ಕಂಠದಲ್ಲಿಯೂ ಇದೇ ರೀತಿಯ ಧಮ್ ಇತ್ತು. ರೈಗಳು ಒಂದು ರೀತಿಯಲ್ಲಿ ಪಂಪನ ಹಾಗೆ. ಕಲಿಯೂ ಹೌದು, ಕವಿಯೂ ಹೌದು ಎಂದು ದಾಮೋದರ ಶೆಟ್ಟಿ ಬಣ್ಣಿಸಿದರು.

ಕಾಸರಗೋಡಿನ ಮೂಲೆಯ ಹಳ್ಳಿಯಲ್ಲೇ ಉಳಿದ ಕಿಞ್ಞಣ್ಣ ರೈಗಳನ್ನು ಕರ್ನಾಟಕದ ಮುಖ್ಯವಾಹಿನಿಗೆ ಕರೆ ತರುವ ಪ್ರಯತ್ನವನ್ನು ಕರ್ನಾಟಕ ಮಾಡಲೇ ಇಲ್ಲ ಎಂದು ದಾಮೋದರ ಶೆಟ್ಟಿ ವಿಷಾದಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸಂಘದ ಅಧ್ಯಕ್ಷ ವಸಂತ ಶೆಟ್ಟಿ ಬೆಳ್ಳಾರೆ ಅವರು ಮಾತನಾಡುತ್ತ ರಾಜ್ಯದ ರಾಜಧಾನಿ ಬೆಂಗಳೂರಿನಲ್ಲಿ ಕೈಯಾರ ಕಿಞ್ಞಣ್ಣ ರೈ ಅವರ ನೆನಪಿನಲ್ಲಿ ಯಾವುದಾದರೊಂದು ಮೆಟ್ರೋ ನಿಲ್ದಾಣಕ್ಕೆ ಅವರ ಹೆಸರನ್ನಿಡಬೇಕೆಂದು ಆಗ್ರಹಿಸಿದರು ಹಾಗೂ ಕಾಸರಗೋಡಿನಲ್ಲಿ ಕನ್ನಡ ಶಾಲೆಗಳನ್ನು ಮುಚ್ಚುವ ಬಗ್ಗೆ ತೀವ್ರ ವಿರೋಧವನ್ನು ವ್ಯಕ್ತಪಡಿಸಿದರು.

ಕಾರ್ಯಕ್ರಮದ ಮೊದಲು ಎಸ್. ಕುಮಾರ್ ಮತ್ತು ತಂಡವು ಕಿಞ್ಞಣ್ಣ ರೈಗಳ ಕವನಗಳನ್ನು ಹಾಡಿದರು. ಡಾ. ಅವನೀಂದ್ರನಾಥ್ ರಾವ್ ಕಾರ್ಯಕ್ರಮ ನಿರೂಪಿಸಿದರು, ಖಜಾಂಚಿ ಕೆ.ಎಸ್.ಜಿ. ಶೆಟ್ಟಿ ಅವರು ವಂದನಾರ್ಪನೆ ಸಲ್ಲಿಸಿದರು. ಅ

*ಅಭಿಮತ ವರದಿ*

# ಹೋರಾಟದ ಕೆಚ್ಚನ್ನು ತೋರಿಸುವ ಕಾವ್ಯ-ಡಾ. ನಾ.ದಾ. ಶೆಟ್ಟಿ



ಕಾಸರಗೋಡಿನ ಪೆರಡಾಲದ ತಮ್ಮ 'ಕವಿತಾ ಕುಟೀರ'ದಲ್ಲಿ ಕನ್ನಡ ಮಂತ್ರವ ಜಪಿಸುತ್ತಾ ಶತಾಯುಷಿಯಾಗಿ ಬದುಕಿದ ಕಯ್ಯಾರ ಕಿಞ್ಞಣ್ಣ ರೈಯವರದು ಹೋರಾಟದ ಬದುಕು. ಗಡಿನಾಡ ಮತ್ತೊಬ್ಬ ಗಾಂಧಿ ಅವರು. ರೈತ ಕುಟುಂಬದಲ್ಲಿ ಜನಿಸಿದ ಕಯ್ಯಾರರಿಗೆ ಬಾಲ್ಯದಲ್ಲೇ ಕನ್ನಡ ಹಾಗೂ ಸಂಸ್ಕೃತವನ್ನು ಏಕಸಮಾನವಾಗಿ ಕಲಿಯುವ ಅವಕಾಶ ಒದಗಿಬಂತು. ಮಲಯಾಳ-ಸಂಸ್ಕೃತ ಮಿಶ್ರಗೊಂಡ ಭಾಷೆಯನ್ನು ಕೇರಳೀಯರು ಮಣಿಪ್ರವಾಳ ಎಂಬುದಾಗಿ ಕರೆದರು. ಕೈಯಾರರು ಬಳಸಿದ್ದೂ ಅದೇ ಬಗೆಯ ಭಾಷೆಯನ್ನು, ಸಂಸ್ಕೃತ ಭೂಯಿಷ್ಠ ಕನ್ನಡವನ್ನು. ಮಾತೃಭಾಷೆ ಪಂಚದ್ರಾವಿಡ ಭಾಷೆಗಳಲ್ಲಿ ಒಂದಾದ ತುಳು. ತುಳುನಾಡಿನಲ್ಲಿ ತುಳು ತಮ್ಮನಾದರೆ ಕನ್ನಡ ಅಣ್ಣ. ಅವು ಪರಸ್ಪರ ಒಂದನ್ನೊಂದು ಬಿಟ್ಟಿಲ್ಲ. ಅವೆರೆರಡರ ಕೂಸಾಗಿ ಬೆಳೆದ ಕಯ್ಯಾರರು, ಕಾಸರಗೋಡನ್ನು 1956ರಲ್ಲಿ ಕನ್ನಡ ನಾಡಿನಿಂದ ಬೇರ್ಪಡಿಸಿ ಕೇರಳದೊಂದಿಗೆ ವಿಲೀನಗೊಳಿಸಿದಾಗ ಬಹಳಷ್ಟು ಅಸ್ವಸ್ಥರಾದರು. ಕಾಸರಗೋಡು-ಕನ್ನಡನಾಡು ಎಂಬುದನ್ನು ಘೋಷವಾಕ್ಯ ಮಾಡಿ ಹೋರಾಟಕ್ಕೆ ಧುಮುಕಿದರು. ಹೋರಾಟದ ನಾಯಕತ್ವ ವಹಿಸಿದರು.

ಹೋರಾಟ ಅನೇಕ ಬಗೆಯಲ್ಲಿ ನಡೆಯಬಹುದು. ಕಯ್ಯಾರರು ತಮ್ಮ ಲೇಖನಿಯ ಮೂಲಕ ಹೋರಾಟಕ್ಕೆ ಮುಂದಾದರು. ಪದವಿ ವಿದ್ಯಾಭ್ಯಾಸವನ್ನು ಮಂಗಳೂರಿನಲ್ಲಿ ಮುಗಿಸಿದ ಕಯ್ಯಾರರು ಪತ್ರಿಕೋದ್ಯಮವನ್ನು ವೃತ್ತಿಯನ್ನಾಗಿ ಆಯ್ದುಕೊಂಡು ಮಂಗಳೂರಿನಲ್ಲಿ ಆ ಕಾಲದಲ್ಲಿ ಜನಪ್ರಿಯವಾಗಿದ್ದ 'ಸ್ವದೇಶಾಭಿಮಾನಿ' ಪತ್ರಿಕೆಯಲ್ಲಿ ಕೆಲಸಮಾಡತೊಡಗಿದರು. ಪತ್ರಿಕೆಯನ್ನು ಅವರು ಬೆಳೆಸಿದ ಪರಿಯನ್ನು ಎಲ್ಲರೂ ಮೆಚ್ಚಿಕೊಂಡಿದ್ದರು. ಅದೇ ಕಾಲದಲ್ಲಿ ಅವರ ಬರವಣಿಗೆಯ ಭಾಷೆ, ಶೈಲಿ ಗಟ್ಟಿಗೊಂಡಿತು. ಜೊತೆಗೆ ಕಾವ್ಯದ ಕಡೆಗೆ ಒಲವನ್ನೂ ಬೆಳೆಸಿಕೊಂಡರು.

ಅದು ಸ್ವಾತಂತ್ರ್ಯ ಹೋರಾಟದ ಪರಾಕಾಷ್ಠೆಯ ಕಾಲಘಟ್ಟ. 'ನಿಮಗೆ ದೇಶಸೇವೆ ಮಾಡಬೇಕೆಂದಿದ್ದರೆ ಹಳ್ಳಿಗೆ ಹೋಗಿ' ಎಂಬುದಾಗಿ ಗಾಂಧೀಜಿಯವರು ಹೇಳಿದ ಮಾತು ಕಯ್ಯಾರರನ್ನು ಬಹುವಾಗಿ ಆಕರ್ಷಿಸಿತ್ತು. ಹಲವರು ಅದೇ ದಾರಿಯಲ್ಲಿ ಸಾಗಿದರು ಕೂಡ. ಕಯ್ಯಾರರು ಮಂಗಳೂರನ್ನು ಬಿಟ್ಟುಬಿಡುವುದಾಗಿ ತೀರ್ಮಾನಿಸಿದರು. ತಮ್ಮ ಹಳ್ಳಿಗೆ ವಾಪಾಸು ಹೋದರು.

1956ರ ತನಕದ ಅವರ ಕಾವ್ಯ ಜಗತ್ತಿನಲ್ಲಿ ವಿಶೇಷ ಹೋರಾಟ ಇರಲಿಲ್ಲ. ಮುಖ್ಯವಾಗಿ ದುಡಿಮೆಯ ಬಗ್ಗೆ, ರೈತಾಪಿ ಜನರ ಬಗ್ಗೆ, ಪ್ರಕೃತಿಯ ಬಗ್ಗೆ ಕವನಗಳನ್ನು ಬರೆಯುತ್ತಿದ್ದರು. ದುಡಿಮೆ ಅವರ ಬಾಳಿನ ಬೀಜ ಮಂತ್ರವಾಗಿತ್ತು. ಯಾವಾಗ ಕಾಸರಗೋಡು ಕೇರಳಕ್ಕೆ ಸೇರಿತೋ ಕೈಯಾರರ ಬರವಣಿಗೆಯ ಶೈಲಿಯೇ ಬದಲಾಯಿತು. ಅದಕ್ಕೊಂದು ಹೋರಾಟದ ಲೇಪನ ಬಂತು. 'ನಾಡು, ನುಡಿಗಳಿವೆರೆಡೆ ನನ್ನೆದೆಯನರಳಿಸಿವೆ' ಎನ್ನುವುದಾಗಿ ಹೇಳುವ ಮೂಲಕ ಅವರಲ್ಲಿ ಉಂಟಾದ ಪಲ್ಲಟವನ್ನು ತಮ್ಮ ಬರಹಗಳ ಮೂಲಕ ತೆರೆದಿಟ್ಟರು. ಅವರ ಲೇಖನಿಯಿಂದ-

*'ಬೆಂಕಿಬಿದ್ದಿದೆ ಮನೆಗೆ ಓ ಬೇಗಬನ್ನಿ*
*ಎಲ್ಲರೂ ಎದ್ದೆದ್ದು ಓಡಿಬನ್ನಿ*
*ಕನ್ನಡದ ಗಡಿಕಾಯೆ ಗುಡಿಕಾಯೆ*
*ನುಡಿಕಾಯೆ- ಕಾಯಲಾರೆವೆ ಸಾಯೆ*
*ಓ ಬನ್ನಿ ಬನ್ನಿ'*

ಎಂಬ ಬಗೆಯ ಹಾಡುಗಳು ಹೊಮ್ಮತೊಡಗಿದುವು. ಈ ಕವನದಲ್ಲಿ ತುರ್ತನ್ನು ಗಮನಿಸಬೇಕು. ಬೆಂಕಿ ಎಷ್ಟು ತೀವ್ರವಾಗಿ ಹರಡುತ್ತದೆ, ಅದನ್ನು ಎಷ್ಟು ಶೀಘ್ರವಾಗಿ ನಂದಿಸಬೇಕು, ನಂದಿಸುವುದು ಸಾಧ್ಯವಾಗದೆ ಹೋದಲ್ಲಿ ಸಾವು ಕಟ್ಟಿಟ್ಟ ಬುತ್ತಿ ಎಂಬ ಎಚ್ಚರಿಕೆ ಕೂಡ ಅಲ್ಲಿದೆ.

ಇನ್ನೊಂದು ಕವನದಲ್ಲಿ ಗಡಿನಾಡಲ್ಲಿ ಹುಟ್ಟುವುದು ನಮ್ಮ ಕೈಯಲ್ಲಿಲ್ಲ, ಹುಟ್ಟೆ ಆಯಿತು, ಆದ ಮೇಲೆ ಇಲ್ಲಿ ಹೇಗೆ ಬದುಕಬೇಕೋ ಹಾಗೆ ಬದುಕಬೇಕು ಎನ್ನುತ್ತಾರೆ ಕಯ್ಯಾರರು:

*'ಕನ್ನಡದ ನಾಡಲ್ಲಿ ನಾ ಹುಟ್ಟಿರಲು*
*ಹೇಡಿಯೆನಿಸದೆ ಯೋಧನಾಗಬೇಕು (ಸ್ವಗತ)*

ಭಾರತ-ಪಾಕ್ ಗಡಿಯಲ್ಲಿ ಹುಟ್ಟಿದ ಭಾರತೀಯರನ್ನು ನೆನೆಯುತ್ತ ಕಯ್ಯಾರರು ಈ ಕವನವನ್ನು ಬರೆದಂತಿದೆ. ಇದು ಕೂಡ ಅಂತಹದೇ ಗಡಿಯ ಪ್ರದೇಶ ಎಂಬುದು ಅವರ ಅನಿಸಿಕೆ. ನಮ್ಮದಲ್ಲದ ಭಾಷೆಯ, ಸಂಸ್ಕೃತಿಯ ಕಡೆಗೆ ನಮ್ಮನ್ನು ಒತ್ತಾಯಪೂರ್ವಕ ದೂಡಿದಾಗ ಅದನ್ನು ಎದುರಿಸುವ ಕೆಚ್ಚನ್ನು ನಾವು ಅರಿತುಕೊಳ್ಳಬೇಕೆಂಬ ಗಂಭೀರ ಎಚ್ಚರಿಕೆಯನ್ನವರು ಗಡಿನಾಡ ಕನ್ನಡಿಗರಿಗೆ ನೀಡುತ್ತಾರೆ. ಇವೆಲ್ಲ ಹೋರಾಟದ ಕೆಚ್ಚನ್ನು ತೋರಿಸುವ ಕವನಗಳು. ಅವರಿಗೆ ಹೋರಾಟದ ಕವನಗಳು ಹೇಗೆ ಇಷ್ಟವೋ ಹಾಗೇನೇ ಹೋರಾಟ ಕೂಡ ಇಷ್ಟ.

ಸುಮಾರು ಐವತ್ತರಷ್ಟು ಕೃತಿಗಳನ್ನು ಬರೆದಿರುವ ಕೈಯಾರರ ಮುಖ್ಯ ಆಸಕ್ತಿ ಕವನಗಳು. ಶ್ರೀಮುಖ, ಐಕ್ಯಗಾನ, ಚೇತನ, ಕೊರಗ, ಪುನರ್ನವ, ಶತಮಾನದ ಗಾನ, ಪಂಚಮೀ -ಹೀಗೆ ಹಲವು ಕವನ ಸಂಕಲನಗಳೂ ಅನ್ನದೇವರು ಮತ್ತು ಇತರ ಕತೆಗಳು ಎಂಬ ಕಥಾಸಂಕಲನವೂ ಲಕ್ಷ್ಮೀಶನ ಕತೆಗಳು ಎಂಬ ಜೈಮಿನಿಭಾರತದಿಂದ ಆಯ್ದ ಕಥಾ ಗುಚ್ಛವೂ, ಸಾಹಿತ್ಯ ದೃಷ್ಟಿ-ವಿಮರ್ಶೆ ಎಂಬ ಲೇಖನಗಳ ಸಂಕಲನವೂ ಅವರ ಲೇಖನಿಯಿಂದ ಹೊಮ್ಮಿದ ಮುಖ್ಯವಾದ ಕೃತಿಗಳು. ಮಕ್ಕಳಿಗಾಗಿ ಪರಶುರಾಮ-ಮೊದಲಾದ ಕಿರುಹೊತ್ತಗೆಗಳನ್ನು ಬರೆದಿದ್ದಾರೆ. ಹಲವಾರು ಪಠ್ಯಪುಸ್ತಕಗಳನ್ನು ಮಕ್ಕಳಿಗಾಗಿ ಅವರು ರಚಿಸಿ ಕೊಟ್ಟಿದ್ದಾರೆ. ಎ.ಬಿ. ಶೆಟ್ಟರ ಆತ್ಮ ಚರಿತ್ರೆಯನ್ನು ಬರೆದ ಕಯ್ಯಾರರು 'ಮಲಯಾಳ ಸಾಹಿತ್ಯ ಚರಿತ್ರೆ'ಯನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಇಪ್ಪತ್ತೆರಡು ಮಂದಿ ವಿಶೇಷ ವ್ಯಕ್ತಿಗಳ ಜೀವನ ಚರಿತ್ರೆಯನ್ನು 'ರತ್ನರಾಶಿ' ಎಂಬ ಕೃತಿಯಲ್ಲಿ ಕಯ್ಯಾರರು ಬಣ್ಣಿಸಿದ್ದಾರೆ.

'ದುಡಿತವೇ ನನ್ನ ದೇವರು' ಎಂಬ ಅವರ ಆತ್ಮ ಕಥನದಲ್ಲಿ ಅವರು ಬಳಸಿದ್ದು ಹೋರಾಟದ ಭಾಷೆಯನ್ನೆ. ಹಾಗೆ ಬಳಸಲು ಕಾರಣವೂ ಇದೆ. ಅವರ ಆತ್ಮಕಥನವು ಕಾಸರಗೊಡಿನ ಹೋರಾಟದ ಕತೆಯನ್ನೂ ಒಳಗೊಂಡ ಕೃತಿಯಾದ್ದರಿಂದ ಸಹಜವಾಗಿಯೇ ಅಲ್ಲಿ ಬಳಕೆಯಾದದ್ದು ಹೋರಾಟದ ಗಂಡುಭಾಷೆಯೇ.

ಪೆರಡಾಲ ನವಜೀವನ ಹೈಸ್ಕೂಲ್‌ನಲ್ಲಿ ಅಧ್ಯಾಪಕರಾಗಿದ್ದ ವೇಳೆಯಲ್ಲಿ ತನ್ನ ಹಳ್ಳಿಗಾಗಿ ಕೆಲಸ ಮಾಡಬೇಕೆಂಬ ತುಡಿತ ಅವರಲ್ಲಿ ಸಾಕಷ್ಟು ಪ್ರಮಾಣದಲ್ಲಿ ಇತ್ತು. ಹಾಗಾಗಿಯೇ ಅವರು ಅಲ್ಲಿನ ಪಂಚಾಯತ್ ಸದಸ್ಯರಾಗಿ, ಅಧ್ಯಕ್ಷರಾಗಿ ಒಂದು ದಶಕಕ್ಕೂ ಹೆಚ್ಚುಕಾಲ ಸೇವೆ ಸಲ್ಲಿಸಿದರು. ಶಾಲೆಗಳನ್ನು ಅಭಿವೃದ್ಧಿಗೊಳಿಸಿದರು, ರಸ್ತೆಗಳನ್ನು ನಿರ್ಮಿಸಿದರು. ಆಸ್ಪತ್ರೆಗಳ ಸೌಕರ್ಯಗಳನ್ನು ಅಭಿವೃದ್ಧಿ ಪಡಿಸಿದರು ಹೀಗೆ ಸಾಮಾನ್ಯ ಜನರಿಗೆ ಅನುಕೂಲವಾಗುವ ಹತ್ತು ಹಲವು ಬಗೆಯ ಕಾಯಕವನ್ನು ಅವರು ಕೈಗೊಂಡಿದ್ದರು.

ಅಧ್ಯಾಪಕರಾಗಿ ರಾಷ್ಟ್ರ ಪ್ರಶಸ್ತಿಗೆ ಭಾಜನರಾದ ಕೈಯಾರರು ತಾವು ಕೈ ಹಾಕಿದ ಯಾವುದೇ ಕೆಲಸವಾದರೂ ಅದನ್ನು ಉನ್ನತ ಮಟ್ಟಕ್ಕೆ ತಲುಪಿಸುವ ನಿಷ್ಠೆಯನ್ನು ತೋರಿಸುತ್ತಿದ್ದರು. ಅವರದು ಬಸವಣ್ಣನ ಕಾಯಕ ನಿಷ್ಠೆ. ತಾನು ಕೈಗೆತ್ತಿಕೊಂಡ ಕೆಲಸದ ಮಧ್ಯೆ ಮೃತ್ಯುದೇವತೆ ಬಂದರೆ ಆತನನ್ನೂ ನೇರವಾಗಿ ತರಾಟೆಗೆ ತೆಗೆದುಕೊಳ್ಳುವ ಛಾತಿ ಅವರದು.-

*'ದುಡಿತವಿಲ್ಲದೆ ಬದುಕೆಯಿಲ್ಲ*
*ಕೈಗೆತ್ತಿರುವ ಕರ್ತವ್ಯವುಂಟು-ಶ್ರಮಿಸುವೆನು*
*ನೀ ಬರುವುದಕ್ಕೆ ಮುನ್ನ ಪೂರೈಸುವೆನು ಎನ್ನ*
*ಕೆಲಸಗಳನ್ನೆಲ್ಲ, ಸಿದ್ಧನಹೆನು (ಅತಿಥಿ)*

ಎಂಬುದಾಗಿ ತನ್ನ ಕರ್ತವ್ಯನಿಷ್ಠೆಯನ್ನು



ಮೃತ್ಯುದೇವತೆಗೂ ಸ್ಪಷ್ಟಪಡಿಸುವರು.

ಯುವ ತಲೆಮಾರಿನ ಆಶಯಕ್ಕಿಂತ ತುಸು ಭಿನ್ನ ಹಾದಿಯಲ್ಲಿ ಕಯ್ಯಾರರು ಸಾಗುತ್ತಿದ್ದಾರೆಂಬ ಭಾವನೆ ಕೆಲ ಹೊಸಬರಲ್ಲಿ ಕಾಣಿಸಿಕೊಂಡಾಗ ಅಂಥವರ ಪರವಾಗಿ ಸಾಹಿತಿಯೊಬ್ಬರು ಪತ್ರಿಕೆಯಲ್ಲಿ 'ರೈಯಿನ್ನು ಬರೆಯಬೇಕಾಗಿಲ್ಲ–' ಎಂಬುದಾಗಿ ಲೇಖನವೊಂದನ್ನು ಬರೆದರು. ಅದರಿಂದ ವಿಚಲಿತರಾಗದ ಕಯ್ಯಾರರು 'ನೇಗಿಲು ಹಿಡಿದ ಕೈ ಲೇಖನಿಯನ್ನೂ ಹಿಡಿದೀತು' ಎಂಬುದಾಗಿ ಖಾರವಾಗಿಯೇ ಉತ್ತರ ಕೊಟ್ಟರು. 'ಕೆಸರು ಚೆಲ್ಲುವ ಕೆಲರ ನಡುವೆ' ಎಂಬ ಒಂದು ಕವನದಲ್ಲಿ ತಪ್ಪುದಾರಿಯಲ್ಲಿ ನಡೆಯುವವರಿಗೆ ಕಯ್ಯಾರರು ಕೆಲವು ಉಪದೇಶದ ಮಾತುಗಳನ್ನು ಹೇಳುತ್ತಾರೆ:

*'ಸುತ್ತ ಲೋಕವ ನೋಡಿ, ಹತ್ತು ಜನರೊಡಗೂಡಿ*
*ಗುಣವಂತ ಘನವಂತನೆನಿಸಿಕೊಂಡಿರುವೆ*
*ಹಿಗ್ಗದಿರು ಚೆಂಡಿನೊಲು, ತಗ್ಗದೆಯೆ ನೀ ಬಾಳು*
*ಕೆಸರು ಚೆಲ್ಲುವ ಕೆಲರ ನಡುವೆ ನಿಂತಿರುವೆ'*

ಈ ಸಾಲುಗಳು ಉಪದೇಶದಂತೆ ಕಂಡರೂ ಇವು ಎಚ್ಚರಿಕೆ ಗಂಟೆಯ ಪಾತ್ರ ನಿರ್ವಹಿಸುತ್ತವೆ. ಹಲ್ಲುಗಳ ಮಧ್ಯೆ ಇರುವ ನಾಲಗೆಯ ಬದುಕನ್ನು ನಾವು ಬದುಕಬೇಕೆನ್ನುವ ಎಚ್ಚರಿಕೆಯನ್ನು ಕೊಡುವ ಕವನವಿದ. 'ಮುಟ್ಟಿದಲ್ಲೆಲ್ಲ ಸಿಡಿಯಬಲ್ಲ ಗುಣ ಅವರ ಕಾವ್ಯಕ್ಕಿದೆ' ಎನ್ನುವುದಾಗಿ ಕವಿ ಸುಬ್ರಾಯ ಚೊಕ್ಕಾಡಿಯವರು ರೈ ಅವರ ಬಗ್ಗೆ ಹೇಳಿದ ಮಾತು ಅಕ್ಷರಶಃ ನಿಜ.

ಹಾಗೆ ದಿಟ್ಟತನದ ಕವನಗಳನ್ನು ಬರೆಯುವುದರಲ್ಲಿ ಕೈಯ್ಯಾರರದು ಎತ್ತಿದ ಕೈ. ತಾನು ಕುದಿಯುವುದು ಮಾತ್ರವಲ್ಲ ಇತರರನ್ನು ಕುದಿಯುವಂತೆ ಮಾಡುವ ಶಕ್ತಿ ಅವರ ಕಂಠಕ್ಕೂ ಇದೆ, ಅವರ ಕಾವ್ಯಕ್ಕೂ ಇದೆ.

*'ಎನ್ನೆದೆಯ ಬಿಸಿರಕ್ತ*
*ಕುದಿಕುದಿಸಿ ಮಸಿ ಮಾಡಿ*
*ನಾ ಬರೆಯ ಬಲ್ಲೆನೆ –ನಾನು ಕವಿಯು'*

ಎನ್ನುವ ಕವಿ ಮುಂದಿನ ಸಾಲುಗಳಲ್ಲಿ, 'ಇರಿವ ಲೇಖನಿ ಬೇಕು, ರಕ್ತವದಕೆ ಮಸಿ' ಎಂತಲೂ 'ತಿವಿವ ಲೇಖನಿ ಬೇಕು, ರಕ್ತವದಕೆ ಮಸಿ' ಎಂತಲೂ ಕ್ರಾಂತಿಯ ಪರಾಕಾಷ್ಠೆಯ ಮಾತನ್ನಾಡುತ್ತಾರೆ. 'ರಕ್ತವನ್ನೇ ಶಾಯಿ ಮಾಡಿ ಬರೆಯಬೇಕಾದ ತುರ್ತು ಕಯ್ಯಾರರಿಗೇನು ಬಂತು ಎಂಬುದಾಗಿ ಒಂದುಕ್ಷಣ ಅವರ ಸ್ಥಾನದಲ್ಲಿ ನಿಂತು ಯೋಚಿಸಿದರೆ ಅದು ಕೇವಲ ಕ್ರಾಂತಿಯಲ್ಲ; ಅವರು ಅಸಹಾಯಕತೆಯನ್ನು ವ್ಯಕ್ತಪಡಿಸಲು ಕಂಡುಕೊಂಡ ದಾರಿ ಎಂದು ಕೂಡ ವಿಶ್ಲೇಷಿಸಬಹುದು. ಯಾವಾಗ ಕಾಸರಗೋಡು ಕನ್ನಡ ನಾಡಿಗೆ ಸೇರಬೇಕೆಂಬ ಎದೆಯಾಳದ ತುಡಿತ ಈಡೇರಿದದ್ದು ಕಾಣುವುದಿಲ್ಲವೋ ಆವಾಗ ರೈಯವರು ಅಸಹಾಯಕರಾಗುತ್ತಾರೆ. ಅವರ ಕೈಯ ಲೇಖನಿಯೇ ಕೊಡಲಿಯಾಗುತ್ತದೆ.

ಗಾಂಧೀಜೀಯವರ ಅಹಿಂಸಾ ಚಳುವಳಿಯನ್ನು ಅವರು ಒಪ್ಪಿದ್ದೇನೋ ನಿಜ, ಆ ಮೂಲಕವೂ ಆಶೋತ್ತರಗಳು ಈಡೇರಲಿಲ್ಲವೆಂದಾಗ ಅವರು ಸುಭಾಶ್ಚಂದ್ರ ಬೋಸರ ಹೋರಾಟದ ಹಾದಿಯ ಕುರಿತೂ ಒಲವು ತೋರುತ್ತಾರೆ. ಸಂದರ್ಭೋಚಿತವಾಗಿ 'ಹಾಗಲ್ಲದಿದ್ದರೆ ಹೀಗೆ' ಎಂಬ ಧೋರಣೆಯನ್ನು ಸ್ವಲ್ಪಮಟ್ಟಿಗೆ ಅವರು ತಳೆದರೆಂದಾದರೆ ಅದರಲ್ಲಿ ಅಚ್ಚರಿ ಪಡಬೇಕಾದ ಕಾರಣವಿಲ್ಲ. ಹಾಗಾಗಿ ಕಯ್ಯಾರರ ಕಾವ್ಯದ ಅಧ್ಯಯನದ ಸಂದರ್ಭದಲ್ಲಿ ಕಾಲಪ್ರಜ್ಞೆಯನ್ನಿಟ್ಟುಕೊಂಡು ಅವುಗಳನ್ನು ತೂಗಿ ನೋಡಬೇಕೆಂಬುದು ಕೂಡ ಮುಖ್ಯವಾಗುತ್ತದೆ.

ಅದರರ್ಥ ಗಾಂಧೀಜಿಯವರ ಅಹಿಂಸಾಮಾರ್ಗದಿಂದ ಹಿಂಜರಿದರು ಎಂಬುದು ಹೋರಾಟದ ಹಾದಿಯ ಚರ್ಯೆಗಳು ಮೇಲಿಂದ ಮೇಲೆ ಬದಲಾಗುವುದು ಸಾಮಾನ್ಯ ಮನುಷ್ಯರ ದೃಷ್ಟಿಯಲ್ಲಿ ಸಹಜವಾದದ್ದೆ. ಹಾಗೆಂದು ವಿಶಾಲ ಭಾವನೆಯ ಕವನಗಳಿಗೂ ಕೈಯಾರರಲ್ಲಿ ಕೊರತೆಯಿಲ್ಲ. ಒಂದೆಡೆಯಲ್ಲಿ–

*'ಆರ್ಯರೋ ಮೊಗಲರೋ ಕ್ರೈಸ್ತರೋ*
*ತಡೆಯೇನು*
*ಎಲ್ಲರೂ ಬರಲೆಂದು ಸ್ವಾಗತಿಸಿದೆ,*
*ಜಾತಿಮತ ಬೇರೆನದೆ ಬಣ್ಣ ನುಡಿ ಬದಲೆನದೆ*
*ಭೇದವೆಣಿಸಿದೆ ತಾಯೆ ನೀ ಸಲಹಿದೆ'*

ಎಂಬುದಾಗಿಯೂ ಇನ್ನೊಂದೆಡೆ–

*'ಐಕ್ಯವೊಂದೇ ಮಂತ್ರ ಐಕ್ಯದಿಂದೆ ಸ್ವತಂತ್ರ*
*ಐಖ್ಯಗಾನದಿ ರಾಷ್ಟ್ರ ತೇಲುತಿರಲಿ'*

ಎಂಬುದಾಗಿಯೂ ಎಲ್ಲರನ್ನು ಒಳಗೊಳ್ಳುವ ಮಾತನ್ನು ಹೇಳುತ್ತಾರೆ.

ಅದು ಸರಿಯೆ. ಅದೇ ಹೊತ್ತಿಗೆ ಕೇರಳ ಹಾಗೂ ಕರ್ನಾಟಕದ ನಡುವೆ ಸಿಕ್ಕಿ ಬಿದ್ದು ಎಡೆಬಿಡಂಗಿಯಾದ ಕಾಸರಗೋಡಿನ ಪಾಡೇನು ಎಂಬುದನ್ನು ಅವರು 'ಐಕ್ಯ'ದ ಮಾತನ್ನು, 'ಭೇದ'ದ ಮಾತನ್ನು ಬದಿಗಿಟ್ಟು ನುಡಿಯುತ್ತಾರೆ. ನಾವೀಗ ನಮ್ಮ ಪುಟ್ಟ ಪರಿಧಿಯೊಳಗಿನ ವಿಚಾರ ಮಾತಾಡುತ್ತಿದ್ದೇವೆ ಎಂಬುದನ್ನು ಕಯ್ಯಾರರು ಬೇರೆಯೇ ಧ್ವನಿಯಲ್ಲಿ ತಮ್ಮ ಹೋರಾಟದ ಹಾಡುಗಳ ಮೂಲಕ ಹೇಳುತ್ತಾರೆ.

ಲಹರಿಭರಿತ ಹಾಡುಗಳ ಮೂಲಕ ಸಾಗುವಾಗ ಅವರ ಗುರುಗಳಾದ ಪಂಜೆಯವರು ನೆನಪಿಗೆ ಬಂದುಬಿಡುತ್ತಾರೆ: ಉದಾಹರಣೆಗೆ ಪಂಜೆಯವರು 'ತೆಂಕಣಗಾಳಿಯಾಟ' ಬರೆದರೆ ಕಯ್ಯಾರರು 'ಸುಂಟರಗಾಳಿ' ಬರೆಯುತ್ತಾರೆ. ಪಂಜೆಯವರು,

'ಬರುತಿದೆ ಆಹಾ ದೂರದಿ
ಬರುತಿದೆ
ಬುಸುಗುಟ್ಟುವ ಪಾತಾಳದ
ಹಾವೋ' ಎಂದು ತೆಂಕಣ ಗಾಳಿಯ ಆಟವನ್ನು ವಿವರಿಸಿದರೆ–

ಕಯ್ಯಾರರು–

*'ಏನಿದು ಧೂಳಿ? ಓಹೋ ಗಾಳಿ*
*ಸುಳಿಯುತ ಬಂತೈ ಸುಂಟರಗಾಳಿ'*–ಎನ್ನುತ್ತಾರೆ.

ಹಾಗೇನೇ ಪಂಜೆಯವರು ಕಾರ್ಗಾಲದ ವೈಭವವನ್ನು ಬಣ್ಣಿಸುತ್ತಾ–

*'ಪಡುವಣ ತೀರದ ಕನ್ನಡ ನಾಡಿನ*
*ಕಾರ್ಗಾಲದ ವೈಭವವೇನು'*

ಎನ್ನುತ್ತಾ ಸಾಗಿದರೆ ಕಯ್ಯಾರರು ಅದೇ ಹಾದಿಯಲ್ಲಿ, ಆದರೆ ಇನ್ನಷ್ಟು ವಿವರಣಾತ್ಮಕವಾಗಿ–

*ಪಡುವಣ ಬೆಟ್ಟದ ಬುಡದಲಿ ಹುಟ್ಟಿ*
*ಕುದುರೆ ಮುಖದ ಬಂಡೆಯ ತಲೆಮೆಟ್ಟಿ*
*ಹಾರುತ ಬೀಳುತ ಕುಣಿಯುತ ಮಣಿಯುತ*
*ಹರಿವಳು ನದಿನೇತ್ರಾವತಿಯು*
*ಸಮುದ್ರಾಜನ ಪ್ರಿಯಸತಿಯು*

ಎಂಬುದಾಗಿ ಕನ್ನಡತಿ ನೇತ್ರಾವತಿಯನ್ನು ಕೊಂಡಾಡುತ್ತಾರೆ. ಒಟ್ಟಾರೆಯಾಗಿ ಕಯ್ಯಾರರ ಪ್ರಕೃತಿಪ್ರೇಮದ ಹಾಡುಗಳಿಗೆ ಪಂಜೆಯವರು ಪರೋಕ್ಷ ಪ್ರೇರಣೆ ನೀಡಿದರು ಎಂದುಕೊಂಡರೆ ಅಚ್ಚರಿಯಿಲ್ಲ.

ಕಯ್ಯಾರರ ಗದ್ಯಬರಹ ಪದ್ಯಕ್ಕೆ ಹೋಲಿಸಿದರೆ ಕಡಿಮೆ ಪ್ರಮಾಣದಲ್ಲಿದ್ದರೂ ಭಾಷೆ ಅಷ್ಟೇ ಸತ್ವಯುಕ್ತವಾಗಿದೆ. ಅವರ 'ಅನ್ನದೇವರು ಮತ್ತು ಇತರ ಕತೆಗಳು' ಸಂಕಲನದಲ್ಲಿ ಹದಿನಾಲ್ಕು ಕತೆಗಳಿವೆ. ಒಟ್ಟಾರೆಯಾಗಿ ಅವರ ಕತೆಗಳನ್ನು ಗಮನಿಸುವಾಗ ಮಾತೃ ಪ್ರಧಾನ ವ್ಯವಸ್ಥೆಯನ್ನು ಪ್ರತಿಪಾದಿಸುವ, ಸ್ತ್ರೀಯರ ಮಹತ್ವವನ್ನು ಸಾರುವ ಕತೆಗಳು ಹೆಚ್ಚಿನ ಪ್ರಮಾಣದಲ್ಲಿ ಕಯ್ಯಾರರಲ್ಲಿ ಕಾಣಿಸಿಕೊಳ್ಳುತ್ತದೆ. 'ವೀರನಾರಿ' ಎಂಬ ಕತೆಯಲ್ಲಿ ಚಾಂದ್‌ಬೀಬಿಯು ಬ್ರಿಟಿಷರ ವಿರುದ್ಧ ಹೋರಾಡುವ ದಿಟ್ಟ ಮಹಿಳೆಯಾಗಿ ಕಾಣಿಸಿಕೊಳ್ಳುವಳು. 'ಒಂದು ನಿಟ್ಟುಸಿರು' ಎಂಬ ಕತೆಯಲ್ಲಿ ಶಾಂತಿ ವಿವಾಹವನ್ನೇ ತಿರಸ್ಕರಿಸಿ ಸಮಾಜಕ್ಕಾಗಿ ಬದುಕನ್ನು ಮುಡಿಪಾಗಿರಿಸುವ ದಿಟ್ಟ ನಾರಿಯ ಕತೆಯಿದೆ. 'ಆಯೇಷಾ' ಎಂಬ ಕತೆಯಲ್ಲಿ ಆಯೇಷಾ ಕೇರಳದಲ್ಲಿ ನಡೆದ ಮಾಪ್ಪಿಳ ದಂಗೆಯಲ್ಲಿ ಪಾಲುಗೊಳ್ಳುವ ವೀರನಾರಿಯಾಗಿ ಕಾಣಿಸಿಕೊಳ್ಳುವಳು.

ಕಯ್ಯಾರರ ಕತೆಗಳಲ್ಲಿ 'ಅನ್ನದೇವರು' ತುಂಬ ವಿಶೇಷವಾದ ಕತೆ. ಕೆಲಸ ಕಳೆದುಕೊಂಡ ಅಪ್ಪ. ಮನೆಯಲ್ಲಿ ತಾಪತ್ರಯ. ಅಮ್ಮ ಮತ್ತು ಇತರರು ಸೇರಿ ಮಗನನ್ನು ಕಳ್ಳತನಕ್ಕೆ ಪ್ರೇರೇಪಿಸುತ್ತಾರೆ. ಅಪ್ಪ ವಿರೋಧಿಸುತ್ತಾನೆ. ಕೊನೆಗೂ ಮಗ ಕಳ್ಳತನ ಮಾಡುತ್ತಾನೆ. ಬಂಗ್ಲೆಯಿಂದ ಹಣ್ಣುಗಳನ್ನು ಕದ್ದು ತರುತ್ತಾನೆ. ಎಲ್ಲರೂ ಅಪ್ಪನನ್ನು ಗೇಲಿ ಮಾಡುತ್ತಾ ಹಣ್ಣುಗಳನ್ನು ತಿನ್ನುತ್ತಾರೆ. ಅಪ್ಪನಿಗೆ ತಡೆಯಲಾರದ ಹಸಿವು. ಅನಿವಾರ್ಯವಾಗಿ ಅನ್ಯ ದಾರಿ ಕಾಣದೆ ಅಪ್ಪನೂ ಹಣ್ಣುಗಳನ್ನು ತೆಗೆದುಕೊಳ್ಳುತ್ತಾನೆ. 'ಎಂಥ ಮರ್ಯಾದೆಗೆಟ್ಟ ಕೆಲಸ' ಎಂಬುದಾಗಿ ಮನೆಯವರು ಗೇಲಿ ಮಾಡುತ್ತಾರೆ. ಅದನ್ನು ಸಹಿಸಿಕೊಂಡ ಅಪ್ಪ ಹಣ್ಣು ತಿಂದು ಹಸಿವು ಹಿಂಗಿಸಿಕೊಳ್ಳುತ್ತಾನೆ. 'ಹಸಿವು ಅನ್ನುವುದು ಯಾರನ್ನಾದರೂ ಎಲ್ಲಿಗೆ ತಳ್ಳಿಬಿಡುತ್ತದೆ' ಎನ್ನುವ ಪ್ರಶ್ನೆಯನ್ನು ಕಯ್ಯಾರರು ವಿಭಿನ್ನ ರೀತಿಯಲ್ಲಿ ವಿವರಿಸಿದ್ದಾರೆ.

ತಮ್ಮ ಮಾತೃಭಾಷೆಯಾದ ತುಳುವಿನಲ್ಲಿ ಕಯ್ಯಾರರು ಕೇವಲ ಎರಡು ಕೃತಿಗಳನ್ನು ರಚಿಸಿದ್ದಾರೆ. ಇದು ಯಾಕೆ ಹೀಗೆ ಎಂದು ಯಾರಾದರೂ ಸಂದೇಹಿಸಬಹುದು. ತುಳು ಆಡು ಭಾಷೆಯಾಗಿ ಜನಪ್ರಿಯವಾದ ಹಾಗೆ ಓದು ಭಾಷೆಯಾಗಿ ಜನಪ್ರಿಯವಾಗಿಲ್ಲ. ಶಾಲಾ ಶಿಕ್ಷಣದ ಭಾಷೆ ಕನ್ನಡವೇ ಆಗಿದ್ದುದರಿಂದ



ತುಳುವನ್ನು ಓದುವ ಅನಿವಾರ್ಯತೆ ಸಾಮಾನ್ಯವಾಗಿ ಯಾರಿಗೂ ಬರುತ್ತಿರಲಿಲ್ಲ. ಅವರೆಲ್ಲ ಕನ್ನಡದಲ್ಲೇ ಓದುತ್ತಿದ್ದರು. 'ಎನ್ನಪ್ಪೆ ತುಳುವಪ್ಪೆ' ಎಂಬ ಕವನ ಸಂಕಲನವನ್ನೂ 'ನಾರಾಯಣ ಕಿಲ್ಲೆ' ಎಂಬ ಮಹಾನ್ ವ್ಯಕ್ತಿಯೊಬ್ಬರ ಬದುಕು ಬರಹ ಹಾಗೂ ವ್ಯಕ್ತಿತ್ವದ ಬಗೆಗಿನ ಕೃತಿಯನ್ನೂ ಅವರು ತುಳುವಿನಲ್ಲಿ ಬರೆದಿದ್ದಾರೆ. 'ಎನ್ನಪ್ಪೆ ತುಳುವಪ್ಪೆ' ಕವನ ಸಂಕಲನದಲ್ಲಿ ತುಳುನಾಡಿನ ಕುರಿತಾದ ಕವನಗಳಿವೆ. ತುಳು ಭಾಷೆಯ ಕುರಿತಾದ ಕವನವೊಂದರಲ್ಲಿ 'ಏತ್ ಪೊರ್ಲುದ ಬಾಸೆ ನಮ ತುಳು, ಸಾರ ಎಸಳ್‌ದ ತಾಮರೆ' ಎಂಬುದಾಗಿ ತುಳುವನ್ನು ಕೊಂಡಾಡುತ್ತಾರೆ.

*'ಅಂಚಿ ತೆಲುಗೆರ್, ಇಂಚಿ ಕನಡೆರ್,*
*ಎಂಚ ತಮಿಳೆರ್ ಮೆರೆಪೆರ್*
*ಕಣ್ಣೆದುರೆ ಕೇರಳಲ ಕೆಲೆಪುಂಡು*
*ಎನ್ನ ತುಳುನಾಡ್ ಬುಲಿಪುಂಡ್'*

ಎಂಬುದಾಗಿ ತುಳುತಾಯಿಯ ದುರವಸ್ಥೆಯ ಕುರಿತು ಮರುಗುತ್ತಾರೆ. ತುಳುನಾಡ್, ತುಳುವಪ್ಪೆ ಮುಂತಾದ ವಿಷಯಗಳನ್ನಿಟ್ಟುಕೊಂಡು ಕಯ್ಯಾರರು ಬರೆದ ಹಾಡುಗಳನ್ನು ಅವರ ಕಂಚಿನ ಕಂಠದ ಸಹಾಯದಿಂದ ತುಳುನಾಡಿಗೆ ತಲುಪಿಸುತ್ತಿದ್ದರು. ಪರಿಣಾಮವಾಗಿ ತುಳುವಿನಲ್ಲಿ ಬರೆಯುತ್ತಿರುವ ಹಾಗೂ ಬರೆಯುತ್ತಿದ್ದ ಕವಿಗಳೆಲ್ಲರೂ ಅಂದಿನಿಂದ ಇಂದಿನ ವರೆಗೆ ತುಳುವಪ್ಪೆ ಹಾಗೂ ತುಳುನಾಡಿನ ಬಗ್ಗೆ ಬರೆದೇ ಬರೆದಿದ್ದಾರೆ. ಯಾವ ಹೊಸ ಕವಿಗೂ ತುಳುನಾಡು, ತುಳುವಪ್ಪೆ ಹೊರತಲ್ಲ.

'ಸಾಹಿತ್ಯ ದೃಷ್ಟಿ' ಎಂಬ ಲೇಖನಗಳ ಸಂಕಲನದಲ್ಲಿ ಜನಪರ ಬರಹಗಳು, ಭಾಷಣಗಳು, ಜಿಜ್ಞಾಸೆಗಳು ಒಳಗೊಂಡಿವೆ. ಯಕ್ಷಗಾನದ ಕುರಿತ ಲೇಖನವೊಂದರಲ್ಲಿ ಕೇರಳದ ಕಥಕ್ಕಳಿಯು ಯಕ್ಷಗಾನದ ಬಳುವಳಿಯಾಗಿದೆ ಎಂಬ ದಿಟ್ಟ ಮಾತೊಂದನ್ನು ಆಡುತ್ತಾರೆ. ಅದಕ್ಕೆ ಪೂರಕವಾಗಿ ಕನ್ನಡದ ಯಕ್ಷಗಾನದ ಮೂಲಪುರುಷ ಪಾರ್ತಿಸುಬ್ಬನ ಮನೆಯಲ್ಲಿ ಕೇರಳದ ಒಬ್ಬಾತ ಬಹುಕಾಲ ಇದ್ದನೆಂದೂ ಯಕ್ಷಗಾನ ಕಲಿತು ಆತ ಕೇರಳಕ್ಕೆ ಹಿಂದಿರುಗಿ ಪ್ರಕ್ಷಿಪ್ತದೊಂದಿಗೆ ಕಥಕ್ಕಳಿಯನ್ನು ರೂಪಿಸಿದನೆಂದೂ ಮಲಯಾಳದ ವಿದ್ವಾಂಸರೊಬ್ಬರು ಹೇಳಿದ ಮಾತನ್ನು ಮುಂದಿಡುತ್ತಾರೆ. ಈ ಕುರಿತ ಹೆಚ್ಚಿನ ಸಂಶೋಧನೆಗಳು ನಡೆಯದ ಕಾರಣ ಕಯ್ಯಾರರ ಮಾತುಗಳನ್ನು ಒಪ್ಪಿಕೊಳ್ಳುವುದು ತುಸು ಕಷ್ಟಸಾಧ್ಯ ಎಂಬ ಅಭಿಪ್ರಾಯ ಹೆಚ್ಚಿನೆಡೆ ಕೇಳಿಬರುತ್ತಿದೆ. ಆದರೆ ಹೀಗೊಂದು ವಾದವನ್ನು ಮುಂದಿರಿಸುವ ಧೈರ್ಯವನ್ನು ಅವರು ಮಾಡಿದರು ಎಂಬುದು ಮುಖ್ಯ.

ಒಟ್ಟಾರೆಯಾಗಿ ಅವರ ಗದ್ಯ ಪದ್ಯಗಳನ್ನು ಅವಲೋಕಿಸಿದಾಗ ಕೆಚ್ಚು, ದೇಶಪ್ರೇಮ, ಪ್ರಕೃತಿಯ ವರ್ಣನೆ ಮುಂತಾದುವುಗಳು ಕಣ್ಣಿಗೆ ರಾಚುವಷ್ಟು ಕಾಣಿಸಿಕೊಳ್ಳುತ್ತವೆ. 'ಕೊರಗ' ಕವನದಲ್ಲಿನ ದಲಿತ ಕಾಳಜಿಯನ್ನೂ, 'ಪೊಸಡಿಗುಂಪೆ'ಯಲ್ಲಿನ ಪ್ರಕೃತಿಯ ವರ್ಣನೆಯನ್ನೂ, 'ಐಕ್ಯಗಾನ'ದಲ್ಲಿ ಸಮಸ್ತ ಏಕತೆಯನ್ನೂ ಕುರಿತು ಬರೆಯುವುದನ್ನು ಕಂಡಾಗ ಗೌರೀಶ ಕಾಯ್ಕಿಣಿಯವರು ಹೇಳಿದ 'ಕರಾವಳಿಯ ಆಧುನಿಕ ಮಹಾಕವಿ' ಎಂಬ ಮಾತು ಅವರಿಗೆ ಅನ್ವಯಿಸುತ್ತದೆ ಎಂಬುದರಲ್ಲಿ ಯಾವ ಅತಿಶಯವೂ ಇಲ್ಲ.

*'ಹಾಡು ಕವಿಯೇ ಹಾಡು*
*ಹೊಸತೊಂದು ಹಾಡು*
*ಜನದ ಕಲ್ಯಾಣಕ್ಕೆ*
*ಮನದ ಕಲ್ಯಾಣಕ್ಕೆ*
*ಯುಗಯುಗದ ಜಗದ ಕಲ್ಯಾಣಕ್ಕೆ ಹಾಡು'* ಅ

# ಕಯ್ಯಾರರ ನನಸಾಗದ ಕನಸು

## -ಭಾಸ್ಕರ ರಾವ್



ಕಯ್ಯಾರ ಕಿಯ್ಯಣ್ಣ ರೈ ಅವರಿಗೆ ನೂರು ತುಂಬಿದ ಹಂತದಲ್ಲಿ ಶತಾಬ್ದಿ ಸಂತಸ ಸಡಗರದ ಇರಾದೆ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರು ಪದಾಧಿಕಾರಿಗಳು ಮತ್ತಿತರ ಸದಸ್ಯರಲ್ಲಿ ಇತ್ತೆಂದು ಭಾವಿಸುವೆ. ಆದರೆ ಸಂಭ್ರಮ ನಡೆಯಲಿಲ್ಲ, ಬದಲಿಗೆ ಸ್ಮರಣೆ ಸಾಗಿದೆ. ಸ್ಮರಣೆಯೊಂದೇ ಸಾಲದೇ..? ಎಂದರೆ ರೈ ನಡೆಸಿದ ಅಹರ್ನಿಶಿ ಹೋರಾಟದ ಹಿನ್ನೆಲೆಯಲ್ಲಿ ಅಷ್ಟೇ ಸಾಲದು ಎನಿಸುತ್ತದೆ.

ಸ್ವಾತಂತ್ರ್ಯ ಹೋರಾಟ, ಮಹಾತ್ಮ ಗಾಂಧಿ ಮಾರ್ಗಾನ್ವೇಷಣೆ, ಭಾಷಾವಾರು ಪ್ರಾಂತ್ಯ ರಚನೆ, ಕರ್ನಾಟಕ ಏಕೀಕರಣ, ಅದರಲ್ಲಿ ಕಾಸರಗೋಡು ತಾಲ್ಲೂಕಿನ ವಿಲೀನ ಅವರು ಕಾಣುತ್ತ ಬಂದ ಕನಸುಗಳು. ಕಾಸರಗೋಡಿನ ವಿಲೀನ ಹೊರತಾಗಿ ಅವರು ಕಂಡ ಇತರೆಲ್ಲ ಕನಸು ವಿಶಾಲಾರ್ಥದಲ್ಲಿ ನನಸಾಗಿವೆ ಎನ್ನಬಹುದು. ಆದರೆ ಅವರ ಹೃದಯಕ್ಕೆ ಅತ್ಯಂತ ಹತ್ತಿರವಾಗಿದ್ದ ಕಾಸರಗೋಡು ವಿಲೀನ ಆಗಲೇ ಇಲ್ಲ. ತಮ್ಮ ಕೊನೆ ಉಸಿರಿನವರೆಗೂ ಅವರು ಜಪಿಸಿದ ಮಂತ್ರ ಕಾಸರಗೋಡಿನ ವಿಲೀನ. ಆ ಮೂಲಕ ಕನ್ನಡದ ನೆಲದ ಮಣ್ಣಲ್ಲಿ ತಮ್ಮ ದೇಹ ಮಣ್ಣಾಗಿ ಹೋಗಲೆಂಬ ಅವರ ಕನಸು ಈಡೇರಲೇ ಇಲ್ಲ. ಹಿರಿಯ ಜೀವದಿಂದ ಬಿಡುಗಡೆಗೊಂಡ ಅವರ ಆತ್ಮಕ್ಕೆ ಹೇಗೆ ಸಿಕ್ಕೀತು ಶಾಂತಿ.. ಇದು ನಮ್ಮೊಳಗೆ ಇರುವ ಶಂಕೆ.

ಸಂದರ್ಭಗಳು ಅನಿವಾರ್ಯ ಸೃಷ್ಟಿಸಿದಾಗ ಬಹುತೇಕರು ಹೋರಾಟಗಾರರಾಗುತ್ತಾರೆ. ಆದರೆ ಕಯ್ಯಾರರು ಹುಟ್ಟಾ ಹೋರಾಟಗಾರ. ಅವರ ವಿಚಾರದಲ್ಲಿ ಲಭ್ಯವಿರುವ ಆಕರಗಳನ್ನು ನೋಡುತ್ತ ಹೋದರೆ ಅವರ ಹೋರಾಟದ ಮಜಲುಗಳು ನಮ್ಮ ಕಣ್ಣೆದುರು ತೆರೆದುಕೊಳ್ಳುತ್ತಾ ಹೋಗುತ್ತವೆ.

ಕಯ್ಯಾರರದು ಅವಿರತ ಹೋರಾಟ ಎಂದೆ. ಹೌದು, ಅವರು ಪ್ರಾಥಮಿಕ ಶಾಲಾ ಶಿಕ್ಷಣ ಪೂರೈಸಿ ಮುಂದಿನ ಓದಿಗೆ ಕಾಲಿಡುವುದರೊಂದಿಗೇ ಹೋರಾಟದ ಬದುಕಿನಲ್ಲಿ ಅವರ ಪದಾರ್ಪಣವಾಯಿತು. ಮಧ್ಯಮ ವರ್ಗದ ಕೃಷಿ ಕುಟುಂಬದಿಂದ ಬಂದ ಕಯ್ಯಾರರ ಬದುಕಿನಲ್ಲಿ ಕೃಷಿ ಒಂದು ಮುಖ. ಸಾಹಿತ್ಯ ಕೃಷಿ ಇನ್ನೊಂದು ಮುಖ. ಹೋರಾಟ ಅವರ ಬದುಕಿನ ಮಹತ್ವದ ಮೂರನೇ ಮುಖ. ತ್ರಿಮುಖ ನೆಲೆಯಲ್ಲಿ ಅವರು ನಡೆಸಿದ ಹೋರಾಟ ಕನ್ನಡ ಸಾಹಿತ್ಯ ಚರಿತ್ರೆಯಲ್ಲೂ, ಸ್ವಾತಂತ್ರ್ಯ ಹೋರಾಟದಲ್ಲೂ, ಏಕೀಕರಣ ಆಂದೋಲನದಲ್ಲೂ, ಕಾಸರಗೋಡನ್ನು ಕರ್ನಾಟಕದಲ್ಲಿ ವಿಲೀನಗೊಳಿಸಿಯೇ ಸಿದ್ಧ ಎಂದು ಬದ್ಧತೆ ಮೆರೆದ ರೀತಿಯಲ್ಲೂ ಅನನ್ಯ ಎನ್ನಬಹುದಾದ ದಾಖಲೆ.

ಕಯ್ಯಾರರದು ತುಳು ಮಾತೃಭಾಷೆ. ಕನ್ನಡ ಅವರ ಹೃದಯದ ಭಾಷೆ. ಎಂದೇ ಅವರು ತಮ್ಮ ಹೋರಾಟದ ಒಂದು ಘಟ್ಟದಲ್ಲಿ ತುಳುನಾಡು ಬೇಕೆಂದು ಪ್ರತಿಪಾದಿಸಿದ್ದರು. ತುಳು ಮಾತನಾಡುವ ಒಂದರ ಪಕ್ಕದಲ್ಲಿ ಒಂದರಂತಿರುವ ಜಿಲ್ಲೆ, ಊರು, ಗ್ರಾಮಗಳನ್ನೆಲ್ಲ ಸೇರಿಸಿ ತುಳುನಾಡು ಅಸ್ತಿತ್ವ ತಾಳಬೇಕೆನ್ನುವುದು ಅವರು ಕಂಡ ಕನಸುಗಳಲ್ಲಿ ಒಂದು. ಬಹುಷಃ ಅವರ ಬಯಕೆಯ ತುಳು ನಾಡು ಅಸ್ತಿತ್ವಕ್ಕೆ ಬಂದಿದ್ದಲ್ಲಿ ಆ ಭಾಷೆಯದೇ ಆದೊಂದು ಲಿಪಿಯೂ ಈ ಹೊತ್ತಿಗೆ ರೂಪುಗೊಳ್ಳುತ್ತಿತ್ತೋ ಏನೋ, ಯಾರು ಬಲ್ಲರು. ಆದರೆ ಆಗಲಿಲ್ಲ. ರೈ ಅವರಿಗೆ ಆದ ನಷ್ಟಕ್ಕಿಂತ ತುಳುಭಾಷೆಗೆ ಆದ ಹೆಚ್ಚಿನ ನಷ್ಟ ಇದು. ಕ್ರಮೇಣ ರೈಯವರು ಒತ್ತು ಕೊಟ್ಟಿದ್ದು ಏಕೀಕರಣ ಮತ್ತು ಕಾಸರಗೋಡು ವಿಲೀನಕ್ಕೆ.

ಸ್ವಾತಂತ್ರ್ಯ ಹೋರಾಟದ ಕಾವು ಹೆಚ್ಚುತ್ತಿದ್ದ ದಿನಗಳಲ್ಲಿ, ಓದಿನ ನಡುನಡುವೆಯೇ ಫರಂಗಿಗಳಿಂದ ಬಿಡುಗಡೆಯ ಓಟದಲ್ಲಿ ರೈ ಒಂದಾಗಿದ್ದರು. ಮುಂದೆ ಕಾಸರಗೋಡು ವಿಲೀನ ಆಂದೋಲನವನ್ನು ಕೈಗೆತ್ತಿಕೊಂಡು ಮುಂದುವರಿಸಲು ಸ್ವಾತಂತ್ರ್ಯ ಚಳವಳಿ ಅವರಿಗೆ ಅನುಭವದ ಮಾರ್ಗ ಕಲ್ಪಿಸಿತು ಎನ್ನಬಹುದು. ವ್ಯತ್ಯಾಸವೆಂದರೆ ಅದು ಪರಕೀಯರ ಶೋಷಣೆ ವಿರುದ್ಧದ ಹೋರಾಟವಾದರೆ ಇದು ಸ್ವಕೀಯರ ನಿರ್ಲಜ್ಜ ಧೋರಣೆಗೆ ಕನ್ನಡಿ ಹಿಡಿದು ನಡೆಸಿದ ಚಳವಳಿಯಾಯಿತು.

ಮೊದಲೇ ಹೇಳಿದಂತೆ ಕಯ್ಯಾರರು ಗಾಂಧೀವಾದಿ. ಜೊತೆಗೆ ಪತ್ರಕರ್ತರಾಗಿ ಕೆಲಸ ಮಾಡಿದವರು. ವಿಧಾಯಕ ಕಾರ್ಯಕ್ರಮಗಳಲ್ಲಿ ವಿಶ್ವಾಸವಿರಿಸಿಕೊಂಡಿದ್ದವರು. ಹಾಗಾಗಿ ಕೈಯ್ಯಾರರ ಕಾಸರಗೋಡು ವಿಮೋಚನಾ ಆಂದೋಲನ ಎಂದೂ ಯಾವತ್ತೂ ಅಹಿಂಸೆಯ ಚೌಕಟ್ಟನ್ನು ದಾಟಲಿಲ್ಲ. "ಅವರದು ಸೌಮ್ಯ ಹೋರಾಟವಾಗಿತ್ತು" ಎಂಬ ಟೀಕಾಕಾರರು ಹಿಂಸೆ ಹಾಗೂ ಅಹಿಂಸೆ ನಡುವಿನ ವ್ಯತ್ಯಾಸವನ್ನು ಗ್ರಹಿಸಲಿಲ್ಲ ಎಂದು ವಿಷಾದದಲ್ಲಿ ಹೇಳಬೇಕಿದೆ.

ಸಾಹಿತ್ಯಕ ದೃಷ್ಟಿಯಿಂದ ನೋಡಿದರೆ ಕಯ್ಯಾರರು ರಮ್ಯ ಸುಮನೋಹರ ಕವಿಯೇನೂ ಅಲ್ಲ. ಅವರ ಕವನಗಳಲ್ಲಿ ಉದ್ದಕ್ಕೂ ಹೋರಾಟದ ಹೆಜ್ಜೆಗುರುತುಗಳನ್ನು ಕಾಣಬಹುದು. ಕಾಸರಗೋಡು ಕೇರಳದಲ್ಲಿ ಸೇರಿಹೋದಾಗ ಹಾಗೂ ಇನ್ನು ಕಾಸರಗೋಡು ಕರ್ನಾಟಕದಲ್ಲಿ ವಿಲೀನ ಆಗುವುದು ಕಷ್ಟ ಎನಿಸಿದಾಗ ಅವರು ಬರೆಯುವುದು ಹೀಗೆ:

*"ಬೆಂಕಿ ಬಿದ್ದಿದೆ ಮನೆಗೆ*
*ಓ ಬೇಗ ಬನ್ನಿ, ಎಲ್ಲರೂ ಎದ್ದೆದ್ದು ಓಡಿ ಬನ್ನಿ*
*ಅಕ್ಕದಿರೆ ಅಣ್ಣದಿರೆ, ತಂಗಿಯರೆ ತಮ್ಮದಿರೆ*
*ಬೇಗೆಯನ್ನಾರಿಸಲು ಬೇಗ ಬನ್ನಿ"*

ಸಿದ್ದಲಿಂಗಯ್ಯನವರು ಬರೆಯುವುದಕ್ಕೆ ವರ್ಷಗಳ ಮೊದಲೇ ಖಡ್ಗವಾಗಲಿ ಕಾವ್ಯ ಎಂಬ ಜೋರು ಧ್ವನಿ ಕಯ್ಯಾರರ ಕವನಗಳಲ್ಲಿ ಗುಟುರು ಹಾಕಿದ್ದು ಕಣ್ಮುಂದಿರುವ ವಾಸ್ತವ.

ಸಾಮಾಜಿಕ ವೈಪರೀತ್ಯಗಳ ವಿಚಾರದಲ್ಲಿ ಕೂಡಾ ಅವರ ನಿಲುವು ಕುವೆಂಪು, ಜಿಎಸ್ಸೆಸ್‌ರಿಗೆ ಸಮಸಮ ನೆಲೆಯಲ್ಲಿ ನಿಲ್ಲುತ್ತದೆ. ಅವರು ಬರೆದ

*"ಪೂಜಾರಿ, ಇದೋ ಸಾರಿ ಹೇಳುತಿಹೆನು;*
*ನೂರಾರು ದೂರುಗಳ ಕೇಳುತಿಹೆನು*
*ಬಾ ಹೊರಗೆ ಪೂಜಾರಿ, ಸಾಕು ಸುಲಿಗೆ*
*ಬಾರದಿರೆ ಗತಿಯಿಲ್ಲ; ಜನರ ಬಳಿಗೆ...."*

ಇದರ ಅರ್ಥವನ್ನು ಬಿಡಿಸಿ ಹೇಳುವ ಅಗತ್ಯ ನನಗೆ ಕಾಣುತ್ತಿಲ್ಲ. ಅದು ಸ್ವಯಂವೇದ್ಯ. ಆದರೆ

ವಿಮರ್ಶಕ ನ್ಯಾಯ ಅನೇಕರಿಗೆ ಅನ್ಯಾಯ ಮಾಡಿದಂತೆ ಕಯ್ಯಾರರಿಗೂ ಮಾಡಿತು. ಕಯ್ಯಾರರು, ಪುತಿನ ಮುಂತಾದವರು ಈ ಮಾತಿಗೆ ನಿದರ್ಶನ. ಲಂಕೇಶರು ಒಮ್ಮೆ ತಮ್ಮ ಪತ್ರಿಕೆಯ ಪ್ರಶ್ನೋತ್ತರದಲ್ಲಿ ಓದುಗ ಕೇಳಿದ "ಪುತಿನ ಎಂದರೆ ಏನು?" ಎಂಬ ಪ್ರಶ್ನೆಗೆ "ಪುಟ–ತಿರುಗಿಸಿ–ನಡೆ" ಎಂದು ಉತ್ತರ ಕೊಟ್ಟರು. ನವ್ಯದವರಲ್ಲದವರು ಕೆಲಸಕ್ಕೆ ಬಾರದವರು ಎಂಬ ಧೋರಣೆ ಆ ಕಾಲದಲ್ಲಿ ಜೋರಾಗಿತ್ತು. ಇಂಥದೇ ತಾತ್ಸಾರಕ್ಕೆ ಕಯ್ಯಾರರ ಕಾವ್ಯವೂ ಆಹುತಿಯಾಯಿತು.

ಕಯ್ಯಾರರು ಸ್ವತಃ ಪತ್ರಕರ್ತರಾಗಿದ್ದವರು. ಪತ್ರಕರ್ತನೊಬ್ಬ ಸಾಹಿತ್ಯಕ್ಕೆ ಹೊರಳಿದರೆ ಗದ್ಯ ಆತನ ಸಾಮಾನ್ಯ ಆಯ್ಕೆಯಾಗಿರುತ್ತದೆ. ಆದರೆ ಕಯ್ಯಾರರು ಆರಿಸಿಕೊಂಡಿದ್ದು ಕಾವ್ಯವನ್ನು. ಕಾವ್ಯದ ಕಸುವು ಗದ್ಯದಲ್ಲಿ ಕಡಿಮೆ. ಹೇಳುವುದನ್ನು ನಿರ್ದುಷ್ಟಗೊಳಿಸುವ ಶಕ್ತಿ ಕಾವ್ಯಕ್ಕೆ ಇರುವಷ್ಟು ಗದ್ಯಕ್ಕೆ ಇಲ್ಲ ಎನ್ನುತ್ತಾರೆ ಎರಡನ್ನೂ ಬಲ್ಲವರು. ಇದು ಕಯ್ಯಾರರ ಕಾವ್ಯದ ಒಲವಿಗೆ ಕಾರಣವಾಗಿರಬಹುದು.

ಅವರ ಕವನದ ಈ ಎರಡು ತುಣುಕುಗಳನ್ನು ಇಲ್ಲಿ ಪ್ರಸ್ತಾಪಿಸಿದ್ದಕ್ಕೆ ಕಾರಣ, ಕಯ್ಯಾರರ ಸಾಹಿತ್ಯ ಅವರು ನಡೆಸಿದ ಹೋರಾಟದ ಭಾಗವೇ ಆಗಿತ್ತೆನ್ನುವುದನ್ನು ಹೇಳುವುದಕ್ಕೆ ಮಾತ್ರ. ಕಾಸರಗೋಡಿನ ವಿಚಾರದಲ್ಲಿ ಕೇರಳೀಯರದು ಅಂಥ ಹಟಮಾರೀ ಧೋರಣೆಯಾಗಿರಲಿಲ್ಲ ಎನ್ನುವುದನ್ನು ಇತಿಹಾಸ ಹೇಳುತ್ತದೆ. ಮಹಾಜನ್ ವರದಿ ಪ್ರಕಾರ, ಈಗಿನ ಕೇರಳದಲ್ಲಿರುವ ಚಂದ್ರಗಿರಿ ನದಿಯ ಉತ್ತರ ಭಾಗ ಕರ್ನಾಟಕಕ್ಕೆ ಸೇರಬೇಕಿತ್ತು. ಆ ನದಿಯ ದಕ್ಷಿಣ ಭಾಗದಲ್ಲಿರುವ ಐದು ನೂರು ಚದರ ಮೈಲು ಪ್ರದೇಶವನ್ನು ಕೇರಳಕ್ಕೆ ಹಾಗೂ ನದಿಯ ಉತ್ತರ ಭಾಗದ ಮೂರು ನೂರು ಚದರ ಮೈಲು ಪ್ರದೇಶವನ್ನು ಕರ್ನಾಟಕಕ್ಕೆ ಸೇರಿಸುವುದು ವರದಿಯ ತಿರುಳು. ಕಯ್ಯಾರರಿಗೆ ಇದು ಸಮ್ಮತವಿರಲಿಲ್ಲ. ಫಜಲಲ್ ಅಲಿ ಆಯೋಗದ ಸದಸ್ಯರಲ್ಲಿ ಒಬ್ಬರಾಗಿದ್ದ ಪಣಿಕ್ಕರ್, ಸಿಹಿ ಸಿಹಿ ಮಾತನಾಡುತ್ತಲೇ ಕೇರಳದ ಪರವಾಗಿ ಕರ್ನಾಟಕಕ್ಕೆ ಅನ್ಯಾಯ ಬಗೆದುದನ್ನು ಅರಿತಿದ್ದ ಕಯ್ಯಾರರು ಮಹಾಜನ್ ಆಯೋಗದ ವರದಿಯನ್ನು ಒಪ್ಪಿದ್ದಕ್ಕೆ ಕಾರಣ, ಒಂದು ಸೂತ್ರಕ್ಕೆ ಒಳಗಾಗುವ ದೃಷ್ಟಿಯಿಂದ. ಒಂದು ಇತ್ಯರ್ಥವಾಗಲೀ ಎಂಬ ಉದಾರಾಶಯದಿಂದ.

ಮಹಾಜನ್ ವರದಿ ಕಾರಣವಾಗಿ ಕನ್ನಡದ ಅನೇಕ ಹಳ್ಳಿ, ಗ್ರಾಮಗಳು ಮಹಾರಾಷ್ಟ್ರದ ಪಾಲಾದವು. ಹಳ್ಳಿಗಳನ್ನು ಘಟಕವಾಗಿ ನೋಡದೆ ತಾಲ್ಲೂಕನ್ನು ಘಟಕವಾಗಿ ಗ್ರಹಿಸಿದ್ದು ಈ ಅನ್ಯಾಯಕ್ಕೆ ಕಾರಣವಾಯಿತು. ಈ ಅನ್ಯಾಯ ಕಾಸರಗೋಡಿನ ವಿಚಾರದಲ್ಲೂ ನಿಜವಾಯಿತು. ಕೇರಳದ ನಾಯಕರಾದ ಇ.ಎಂ.ಎಸ್. ನಂಬೂದರಿಪಾಡ್, ಪಟ್ಟಂಥಾನು ಪಿಳ್ಳೈ, ಅಚ್ಯುತ ಮೆನನ್ ಮುಂತಾದವರು ಮಹಾಜನ್ ಸೂತ್ರದಂತೆ 300 ಚದರ ಮೈಲು ಪ್ರದೇಶವನ್ನು ಕರ್ನಾಟಕಕ್ಕೆ ಕೊಡಲು ಸಹಮತ ತಾಳಿದ್ದರೂ ಕರ್ನಾಟಕದ ರಾಜಕಾರಣಿಗಳ "ದೆಹಲಿ ಕಾಲೊತ್ತುವ ಸ್ವಾಮಿನಿಷ್ಠೆ" ಕಾರಣವಾಗಿ ಆಸೆ ಕೈಗೂಡಲೇ ಇಲ್ಲ.

ಕೆಂಡಾಮಂಡಲರಾದ ಕಯ್ಯಾರರು ಜ್ವಾಲಾಮುಖಿಯಂತೆ ಕುದಿದರು. ಕಾಸರಗೋಡಿನಲ್ಲಿ ಕನ್ನಡ ಪರ ಹೋರಾಟ ಶುರುಮಾಡಿದರು. ಕನ್ನಡ ಸೇನೆಯೂ ಸಜ್ಜಾಯಿತು. ಮೂರು ಮೂರು ಕನ್ನಡ ಸಮ್ಮೇಳನ ನಡೆಸಿದರು. ಈ ಕಾವು ಕೆಲಸ ಮಾಡಿತು. ಕಾಸರಗೋಡು ಪ್ರದೇಶದಲ್ಲಿ ನಡೆದ ಮೂರು ಮೂರು ವಿಧಾನ ಸಭಾ ಚುನಾವಣೆಗಳಲ್ಲೂ ಕರ್ನಾಟಕದಲ್ಲಿ ಕಾಸರಗೋಡಿನ ವಿಲೀನ ಪರ ಅಭ್ಯರ್ಥಿಗಳು ಕೇರಳ ವಿಧಾನ ಸಭೆಗೆ ಆಯ್ಕೆಯಾದರು. ಮಹಾಜನ ಆಯೋಗದ ವರದಿ ಸ್ಪಷ್ಟವಾಗಿತ್ತು. ಚುನಾವಣೆ ಮೂಲಕ ಜನಮನ ಏನೆನ್ನುವುದು ಬಹಿರಂಗವಾಗಿತ್ತು. ಈ ಆಯ್ಕೆಯ ಹಿಂದೆ ಧೀಶಕ್ತಿಯಾಗಿ ಕಯ್ಯಾರರು ಕೆಲಸ ಮಾಡಿದ್ದರು ಎಂದು ಪ್ರತ್ಯೇಕವಾಗಿ ಹೇಳುವ ಅಗತ್ಯವಿಲ್ಲ. ಆದರೆ ಈ ಜನಮನ ಯಾರ ಕಣ್ಣನ್ನು ತೆರೆಸಬೇಕಿತ್ತೋ ಅದು ಆಗಲಿಲ್ಲ.

ಕೂಸು ಅಳದಿದ್ದರೆ ತಾಯಿಯೂ ಹಾಲೂಡಿಸುವುದಿಲ್ಲ ಎಂಬ ಮಾತಿದೆ. ಕಾಸರಗೋಡಿನ ವಿಚಾರದಲ್ಲಿ ಕರ್ನಾಟಕದ ಕಡೆಯಿಂದ ಇದೇ ಆಗಿ ಹೋಯಿತು. ಕರ್ನಾಟಕದ ಅಂದಿನ ನಾಯಕರು ಕಾಸರಗೋಡನ್ನು ಬಿಟ್ಟುಕೊಡಿ ಎನ್ನಲಿಲ್ಲ; ಕೇರಳದ ನಾಯಕತ್ವ ತಾನಾಗಿ ಆ ಔದಾರ್ಯ ತೋರಲಿಲ್ಲ. 1997ರಲ್ಲಿ ಮಂಗಳೂರಿನಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರಾಗಿದ್ದ ಕಯ್ಯಾರರು, ಕಾಸರಗೋಡಿನ ವಿಚಾರದಲ್ಲಿ ಕೊನೆಯ ಬಾಣ ಎಂಬಂತೆ ತಮ್ಮೆಲ್ಲ ದುಗುಡ ದುಮ್ಮಾನಗಳನ್ನೂ ಅಧ್ಯಕ್ಷೀಯ ಭಾಷಣದಲ್ಲಿ ತೋಡಿಕೊಂಡರು. ನಮ್ಮ ರಾಜಕಾರಣದಲ್ಲಿ ಕೇಳುವ ಕಿವಿಯೇ ಇಲ್ಲವಾದ ಮೇಲೆ ಇಂಥದ್ದೆಲ್ಲ ಅರಣ್ಯರೋದನವಾಗುತ್ತದೆ.

ಕಾಸರಗೋಡು ಕೇರಳದಲ್ಲಿ ಸೇರಿಹೋದ ಮಾತ್ರಕ್ಕೆ ಅಲ್ಲಿ ಕನ್ನಡ ಸತ್ತು ಹೋಗಿದೆ ಎಂದೇನೂ ಅಲ್ಲ. ಕೇರಳ ಸರ್ಕಾರ ಕಾಸರಗೋಡಿನಲ್ಲಿ ಕನ್ನಡದ ಅಗ್ನಿಗೆ ನೀರು ಹಾಕುವ ಯತ್ನ ಮಾಡುತ್ತಿದೆ, ನಿಜ. ಆದರೆ ಅಲ್ಲಿ ಕನ್ನಡ ಬೂದಿಮುಚ್ಚಿದ ಕೆಂಡವಾಗೇ ಇದೆ ಎನ್ನುವುದೂ ನಿಜ. ಈ ಮಾತಿಗೆ ಸಾಕ್ಷಿ ಕೇರಳ ವಿಧಾನ ಸಭೆಗೆ ಇತ್ತೀಚೆಗೆ ನಡೆದ ಚುನಾವಣೆ.



ಮಂಜೇಶ್ವರ ಕ್ಷೇತ್ರದಿಂದ ಈ ಬಾರಿ ಗೆದ್ದವರು ಇಂಡಿಯನ್ ಮುಸ್ಲಿಂ ಲೀಗಿನ ಅಭ್ಯರ್ಥಿ ಪಿ.ಬಿ. ಅಬ್ದುಲ್ ರಜಾಕ್. ಅವರು ವಿಧಾನ ಸಭೆಯಲ್ಲಿ ಪ್ರಮಾಣ ವಚನ ಸ್ವೀಕರಿಸಿದ್ದು ಕನ್ನಡದಲ್ಲಿ ಎನ್ನುವುದು ಗಮನಾರ್ಹ. "ಎಲ್ಲಾದರು ಇರು ಎಂತಾದರು ಇರು ಎಂದೆಂದಿಗು ನೀ ಕನ್ನಡವಾಗಿರು" ಎಂಬ ಕುವೆಂಪು ಮಾತಿನಂತೆ ಕಯ್ಯಾರರು ಬಿತ್ತಿದ ಕನ್ನಡದ ಬೀಜ ಕಾಸರಗೋಡಿನ ಅಲ್ಲಲ್ಲಿ ವಟವೃಕ್ಷವಾಗುವ ಇಂಗಿತ ತೋರಿದೆ.

1932 ರಷ್ಟು ಹಿಂದೆಯೇ ಮಡಿಕೇರಿಯಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರಾಗಿದ್ದ ಡಿವಿಜಿಯವರು,

*ಕವಿಯೆನಲೆ–ಕವಿಯೀತ।*
*ಕಲಿಯೆನಲೆ–ಕಲಿಯೀತ।*
*ಕವಿದು ಒಳಹೊರಗೆಲ್ಲ ನಿಲುವನೀತ॥*
*ಕವಿದ ಕತ್ತಲಗಡಿಗೆ, ನುಡಿಗೆ ಕಾವಲುಯೀತ।*
*ಕವನ ಕಿಡಿಯುಗುಳುತಿಹ ಬೆಂಕಿಯೀತ॥*

ಎಂದು ಹಾಡಿದರು. ಆಗ ಕಯ್ಯಾರರು ಇನ್ನೂ ಹೋರಾಟದ ಮುಂಚೂಣಿಗೆ ಬಂದಿರಲಿಲ್ಲ. ಆದರೇನಂತೆ ಕನ್ನಡದ ಕುಸುಮವೊಂದು ಇಂದಲ್ಲ ನಾಳೆ ಇಂಥ ಶೌರ್ಯ ಮೆರೆದೀತೆಂಬ ಕವಿ ದೃಷ್ಟಿ ಡಿವಿಜಿಯವರಲ್ಲಿ ಕೆಲಸ ಮಾಡಿತ್ತು. ಕಯ್ಯಾರರು ಎಲ್ಲ ದೃಷ್ಟಿಯಿಂದಲೂ ಡಿವಿಜಿ ಕವನಕ್ಕೆ ಮರ್ಯಾದೆ ಸಲ್ಲುವಂತೆ, ಕವಿವಾಣಿ ಸತ್ಯವಾಗುವಂತೆ ಹೋರಾಟ ನಡೆಸಿದರು.

ಆದರೆ ನಾವು...? ಈ ಪ್ರಶ್ನೆ ನನ್ನಲ್ಲಿ ಉದ್ಭವಿಸಿದ್ದು ಕನ್ನಡದ ಪ್ರಾತಿನಿಧಿಕ ಸಂಸ್ಥೆ ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿರುವ "ಐಕ್ಯಗಾನದ ಶ್ರೀಮುಖ ಕಯ್ಯಾರ ಕಿಞ್ಞಣ್ಣ ರೈ" ಎಂಬ ಕಿರು ಹೊತ್ತಿಗೆಯನ್ನು ಓದಿದಾಗ.

ಈ ಕೃತಿಯಲ್ಲಿ ಕಯ್ಯಾರರ ಸಾಹಿತ್ಯ, ಸ್ವಾತಂತ್ರ್ಯ ಹೋರಾಟ, ಪತ್ರಕರ್ತನಾಗಿ ಬದುಕು.. ಹೀಗೆ ಸಾದ್ಯಂತ ವಿವರಗಳಿವೆ. ಅಚ್ಚರಿ ಎಂದರೆ ಅವರು ನಡೆಸಿದ ಕರ್ನಾಟಕದಲ್ಲಿ ಕಾಸರಗೋಡು ವಿಲೀನ ಹೋರಾಟದ ಕಥೆಯನ್ನು ಹೇಳುವ ಒಂದೇ ಒಂದು ವಾಕ್ಯವೂ ಅದರಲ್ಲಿ ದಾಖಲಾಗಿಲ್ಲ ಎನ್ನುವುದು. ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿದ್ದು ಎಂಬ ಕಾರಣಕ್ಕಾಗಿಯೇ ಈ ಕಿರುಹೊತ್ತಗೆ ಮುಂದೆಂದೋ ಆಕರವಾಗುವ ಸಾಧ್ಯತೆ ಇದ್ದೇ ಇದೆ. ಆಗ ಕಯ್ಯಾರರ ಹೋರಾಟ ಯಾರಿಗೂ ನೆನಪೇ ಆಗದಿರುವ ಅಪಾಯವೂ ಇದೆ. ಅಂಬಾತನಯ ಮುದ್ರಾಡಿಯವರಿಂದ ಕಸಾಪ, ನಲ್ಲೂರು ಪ್ರಸಾದ್ ಅವರು ಅಧ್ಯಕ್ಷರಾಗಿದ್ದ ಸಮಯದಲ್ಲಿ ಈ ಕಿರುಹೊತ್ತಗೆಯನ್ನು ಬರೆಸಿ ಪ್ರಕಟಿಸಿದೆ. ಮುದ್ರಾಡಿಯವರು ಕಯ್ಯಾರರ ಹೋರಾಟವನ್ನು ಪ್ರತ್ಯೇಕ ಅಧ್ಯಾಯವಾಗಿ ಬರೆದು ಮುದ್ರಣ ಹಂತದಲ್ಲಿ ಅದು ಕೈಬಿಟ್ಟು ಹೋಗಿರಬಹುದೇ ಅಥವಾ ಸಂಪಾದಕೀಯ ಮಂಡಲಿಯ ಕಣ್ತಪ್ಪಿನಿಂದ ಆಗಿರಬಹುದೇ ಅಥವಾ ಮುದ್ರಾಡಿಯವರೇ ಮರೆತುಹೋಗಿರಬಹುದೇ ಎಂಬಿತ್ಯಾದಿ ಅನುಮಾನವಿದೆ. ಏನೇ ಆದರೂ, ಈ ಗಂಭೀರ ಲೋಪವನ್ನು ಕಸಾಪ ಸರಿಪಡಿಸಬೇಕಿದೆ. ದೆಹಲಿ ಕರ್ನಾಟಕ ಸಂಘ ಈ ವಿಚಾರವನ್ನು ಕಸಾಪದ ಈಗಿನ ಅಧ್ಯಕ್ಷ ಮನು ಬಳಿಗಾರರೊಂದಿಗೆ ಚರ್ಚಿಸಿ ಕಾಲವಾಗಿರುವ ಹೋರಾಟಗಾರನಿಗೆ ನ್ಯಾಯ ದೊರಕಿಸುವ ಕೆಲಸವನ್ನು ಮಾಡುತ್ತದೆಂಬ ವಿಶ್ವಾಸ ನನಗೆ ಇದೆ. ಅ


**ಅಭಿಮತದಲ್ಲಿ ಪ್ರಕಟವಾಗುವ ಅಭಿಪ್ರಾಯಗಳು ಲೇಖಕರ ಸ್ವಂತ ಅಭಿಪ್ರಾಯಗಳಾಗಿವೆ. ಅವುಗಳನ್ನು ಸಂಘದ ಅಭಿಪ್ರಾಯಗಳೆಂದು ಭಾವಿಸಬೇಕಾಗಿಲ್ಲ.**

*ಸಂ.*

# ಬಸವ, ಅಕ್ಕ, ಅಲ್ಲಮ–ಆತ್ಮಜ್ಞಾನದ ಮಾರ್ಗದರ್ಶಕರು

*ದೆಹಲಿ ಕರ್ನಾಟಕ ಸಂಘವು ಮೇ 14ರಂದು ಆಯೋಜಿಸಿದ **ಬಸವ ಮತ್ತು ಅಕ್ಕ ಮಹಾದೇವಿ ಜಯಂತಿ ಆಚರಣೆ**ಯಲ್ಲಿ **ಡಾ. ವಿ. ಚಂದ್ರಶೇಖರ ನಂಗಲಿ** ಅವರು ಮಾಡಿದ ಉಪನ್ಯಾಸದ ಆಯ್ದ ಭಾಗ ಅಭಿಮತದ ಓದುಗರಿಗಾಗಿ.*

ಚಾಂದ್ರಮಾನ ಸಂವತ್ಸರದ ಪಂಚಾಂಗವನ್ನು ಬಲಿಕೊಟ್ಟು ಅಥವಾ ಸಮೀಕರಿಸಿ, ನಾವಿಂದು ಅನುಸರಿಸುತ್ತಿರುವ ಪಾಶ್ಚಾತ್ಯ ಕ್ಯಾಲೆಂಡರ್ ಅನ್ನು ಕ್ರಿ.ಪೂ. 46ರಲ್ಲಿ ಜೂಲಿಯಸ್ ಸೀಸರ್ ಸ್ಥಾಪಿಸಿದ್ದು, ಮೊದಲಿಗೆ ಇದು 'ಜೂಲಿಯನ್ ಕ್ಯಾಲೆಂಡರ್' ಎಂದೇ ಹೆಸರಾಗಿತ್ತು. ನಂತರ ಪೋಪ್ 14ನೇ ಗ್ರೆಗೊರಿ ಎಂಬಾತ ಈ ಕ್ಯಾಲೆಂಡರ್ ಅನ್ನು ಕ್ರಿ.ಶ. 1582ರಲ್ಲಿ ಪರಿಷ್ಕರಿಸಿ ಚಾಲ್ತಿಗೆ ತಂದಿದ್ದರಿಂದ, ಇಂದಿಗೂ 'ಗ್ರೆಗೊರಿಯನ್ ಕ್ಯಾಲೆಂಡರ್' ಎಂದು ಹೆಸರಾಗಿದೆ. ಈ ಪುರುಷ ನಿರ್ಮಿತ ಕ್ಯಾಲೆಂಡರಿನಲ್ಲಿ ವರ್ಷಪೂರ್ತಿ ಪುರುಷ ಜಯಂತಿಗಳ ಮಹಾಸರಣಿಯನ್ನೇ ಕಾಣಬಹುದು. ಪುರಾಣ ಪುರುಷರು, ಐತಿಹಾಸಿಕ ಪುರುಷರು, ಮಹಾಪುರುಷರ ಜಯಂತಿಗಳಿಂದ ತುಂಬಿಹೋಗಿರುವ ಈ ಕ್ಯಾಲೆಂಡರಿನಲ್ಲಿ ಒಬ್ಬ ಮಹಿಳೆಗೆ ಅಂದರೆ 'ಅಕ್ಕಮಹಾದೇವಿ ಜಯಂತಿ'ಗೆ ಅವಕಾಶ ಸಿಕ್ಕಿರುವುದೊಂದು ಸೋಜಿಗ. ಆದರೆ ಇದನ್ನು ಆಚರಿಸುವ ಉತ್ಸಾಹ ಯಾರಿಗೂ ಇಲ್ಲ.



ದೆಹಲಿಯ ಕರ್ನಾಟಕ ಸಂಘವು ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ನಾಗರಾಜ್ ಸಿ.ಎಂ. ಮತ್ತು ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಇವರ ಸಾರಥ್ಯದಲ್ಲಿ 'ಬಸವ ಜಯಂತಿ' ಮತ್ತು ಅಕ್ಕಮಹಾದೇವಿ ಜಯಂತಿಗಳನ್ನು ಸಂಯೋಜಿಸಿ, ಜಂಟಿಯಾಗಿ ಆಚರಿಸುತ್ತಾ ಬಂದಿರುವುದು ಉತ್ತಮವಾದ ಮೇಲ್ಪಂಕ್ತಿಯಾಗಿರುವುದರಿಂದ, ಈ ಸಂದರ್ಭದಲ್ಲಿ ದೆಹಲಿ ಕರ್ನಾಟಕ ಸಂಘವನ್ನು ಮತ್ತು ಇದರ ಪದಾಧಿಕಾರಿಗಳನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ.

ಪ್ರಭುತ್ವ ಪೋಷಿತವಾದ ಸಾಮಾಜಿಕ, ಧಾರ್ಮಿಕ, ಸಾಹಿತ್ಯಿಕ, ಪತ್ರಿಕಾ, ಡಿಜಿಟಲ್ ಮುಂತಾದ ಮಾಧ್ಯಮಗಳ ಪ್ರಭಾವದಿಂದ ಬಸವಣ್ಣ ಮತ್ತು ಅಕ್ಕಮಹಾದೇವಿ ಎಂದೊಡನೆ ಪೂರ್ವಸಿದ್ಧವಾದ ರೂಪಕಲ್ಪನೆ ಮನಸ್ಸಿನಲ್ಲಿ ಮೂಡುತ್ತದೆ. ಜನತೆಯ ಮನಸ್ಸುಗಳಲ್ಲಿ ಇಂಥ ರೂಪಕಲ್ಪನೆಯ ಮುದ್ರೆಗಳನ್ನು ಅಚ್ಚೊತ್ತುವ ವ್ಯವಸ್ಥೆಯ ದಿಗ್ವಿಜಯ ಇಲ್ಲಿದೆ. ಹಿಂದೊಮ್ಮೆ ನಾನು ಮಠವೊಂದರಲ್ಲಿ 'ವಚನಸಾಹಿತ್ಯ' ಕುರಿತು ಮಾತನಾಡಿದಾಗ ನೆನಪಿನ ಕಾಣಿಕೆಯಾಗಿ ಅವರು ಕೊಟ್ಟ ಸ್ಮರಣಿಕೆಯ ಲೋಹಫಲಕದಲ್ಲಿ ಕಿರೀಟಧಾರಿಯಾದ ಬಸವಣ್ಣನ ಕಾರ್ವಿಂಗ್ ಇತ್ತು. ಇದನ್ನು ನಾನು ಸಹಜವಾಗಿಯೇ ನಮ್ಮ ಮನೆಯ ಶೋಕೇಸಿನಲ್ಲಿಟ್ಟಿದ್ದೆ. ನನ್ನ ಸಹೋದ್ಯೋಗಿಯ ಮಗಳು, ಪ್ರೈಮರಿ ಶಾಲೆಯವಳು ಬಸವಣ್ಣನ

> ***ಉಳಿ ಮುಟ್ಟಿದ ಲಿಂಗ***
> ***ಮನಮುಟ್ಟ ಬಲ್ಲುದೆ, ಗುಹೇಶ್ವರ?***
> ***ಘನತರ ಚಿತ್ರದ ರೂಹ***
> ***ಬರೆಯಬಹುದಲ್ಲದೆ,***
> ***ಪ್ರಾಣವ ಬರೆಯಬಹುದೆ ಅಯ್ಯ?***

ಚಿತ್ರವನ್ನು ಕಂಡು ಸಂತಸದಿಂದ 'ಲಾರ್ಡ್ ಬಸವೇಶ್ವರ' ಎಂದು ಉದ್ಗರಿಸಿದಳು. ಒಬ್ಬ ಪುಟ್ಟ ಬಾಲಕಿ ಲೋಹ ಫಲಕದ ಮೇಲೆ ಕೊರೆದ ರೇಖಾಚಿತ್ರವನ್ನು ಕಂಡೊಡನೆ, ಬಸವಣ್ಣನನ್ನು ಗುರುತಿಸಿ ಹೇಳಿದ್ದು ಇದೇ ಮಾಧ್ಯಮಗಳ ಪ್ರಭಾವದಿಂದ. ಯಾವುದೇ ಒಂದು ನಾಗರಿಕತೆ ತನ್ನ ಪ್ರಜೆಗಳನ್ನು ತೀಡಿ ತಿದ್ದುವ ಬಗೆಯಿದು. ನಾವು ಏನನ್ನು ಆಲೋಚಿಸಬೇಕು? ಹೇಗೆ ಮಾತನಾಡಬೇಕು? ಏನನ್ನು ತಿನ್ನಬೇಕು? ಹೇಗೆ ಬದುಕ ಬೇಕು? ಮುಂತಾದ ಗುಣ–ದೋಷಗಳ ಪಾಠವನ್ನು ಒಂದು ನಾಗರಿಕತೆ ಚಿಕ್ಕಂದಿನಿಂದ ಕಲಿಸುತ್ತಾ ಬರುತ್ತದೆ. ನಾವು ದೊಡ್ಡವರಾಗುವಷ್ಟರಲ್ಲಿ ಆ ನಾಗರಿಕತೆ ತಕ್ಕ ಪ್ರಜೆಗಳಾಗಿ ನಮಗೆ ತಿಳಿಯದಂತೆ ರೂಪುಗೊಂಡಿರುತ್ತೇವೆ. ನಿಸರ್ಗ ಸಹಜವಾದ ಭಾವನೆಗಳು ಮತ್ತು ಗ್ರಾಮೀಣ ಸಂಸ್ಕಾರಗಳು ಇತ್ಯಾದಿಗಳನ್ನೆಲ್ಲ ಕಳೆದುಕೊಂಡು ಆಯಾ ನಾಗರಿಕತೆಗಳಿಗೆ ತಕ್ಕ ನಾಗರಿಕರಾಗಿ ಬದಲಾಗಿ ಬಿಡುತ್ತೇವೆ.

ನಾವು ಬದುಕುತ್ತಿರುವ ನಾಗರಿಕತೆಯ ನಿಯಂತ್ರಕ ಶಕ್ತಿಗಳಿಂದ ಪಾರಾಗಿ ಸ್ವತಂತ್ರವಾಗಿ ಆಲೋಚನೆ ಮಾಡುವುದು ಕಷ್ಟಸಾಧ್ಯ. ಬಸವಣ್ಣ ಮತ್ತು ಅಕ್ಕಮಹಾದೇವಿಯ ಚಿತ್ರಗಳು ಈ ಸಮಾರಂಭದ ಆಹ್ವಾನ ಪತ್ರಿಕೆಯಲ್ಲೂ ಮುದ್ರಿತವಾಗಿವೆ. ಜನ್ನನ 'ಯಶೋಧರ ಚರಿತೆ'ಯಲ್ಲಿ "ರೂಪದ ಕೋಟಲೆ ಏವುದೋ?"–ಎಂಬ ನುಡಿಯಿದೆ. 'ಕೋಟಲೆ'– ಎಂದರೆ ತೊಂದರೆ, ಕಾಟ, ಕೇಡು, ಹಿಂಸೆ ಎಂಬರ್ಥಗಳಿವೆ. ಹನ್ನೆರಡನೇ ಶತಮಾನದ ಶರಣರ ಚಿತ್ರಗಳನ್ನು ನಾನು 'ರೂಪದ ಕೋಟಲೆ' ಎಂದೇ ಕರೆಯಲಿಚ್ಛಿಸುತ್ತೇನೆ. ಇವು ನೈಜವಾದ ಛಾಯಾಚಿತ್ರಗಳಲ್ಲ. ಈ ಎಲ್ಲ ಹುಸಿಚಿತ್ರಗಳು (ಸ್ಯೂಡೋ ಪ್ರೊಫೈಲ್ಸ್) ಇಪ್ಪತ್ತನೇ ಶತಮಾನದ ಸುಳ್ಳು ಸೃಷ್ಟಿಗಳು ಎಂಬುದನ್ನು ಮೊದಲಿಗೆ ಅರಿತುಕೊಳ್ಳಬೇಕು. ಈ ದೃಷ್ಟಿಯಿಂದ ರಾಜಾ ರವಿವರ್ಮ ಬರೆದ ಹಿಂದೂ ದೇವತೆಗಳ ಚಿತ್ರಗಳು ಮತ್ತು ಶರಣರ ಚಿತ್ರಗಳು ಒಂದೇ ಆಗಿದ್ದು ಸ್ವಕಪೋಲಕಲ್ಪಿತವಾಗಿವೆ. ಸಹಸ್ರಮಾನವನ್ನು ಮೀರಿದ ಕನ್ನಡ ಸಾಹಿತ್ಯ ಚರಿತ್ರೆಯ ಇತಿಹಾಸದಲ್ಲಿ 'ವಚನಸಾಹಿತ್ಯ'ವನ್ನು ಸಮಾವೇಶಗೊಳಿಸಿದ್ದು ಇಪ್ಪತ್ತನೇ ಶತಮಾನದಲ್ಲಿ, ಎಂದರೆ ವಚನಗಳು ಸೃಷ್ಟಿಯಾದ ಎಂಟುನೂರು ವರ್ಷಗಳ ನಂತರ. ಹಳಗನ್ನಡ ಸಾಹಿತ್ಯವನ್ನು ಸಂಪಾದಿಸಿ, ಪ್ರಕಟಿಸುವ ಸಂದರ್ಭದಲ್ಲಿ ಕ್ರೈಸ್ತಮಿಷನರಿಗಳು ಪ್ರಜ್ಞಾಪೂರ್ವಕವಾಗಿಯೇ ವಚನಸಾಹಿತ್ಯ ಸಂಪಾದನೆಗೆ ಕೈಹಾಕದೆ, ಒಂದು ಬಗೆಯ 'ಮಾನಸಿಕ ದೂರ' (ಸೈಕಿಕಲ್ ಡಿಸ್‌ಟೆನ್ಸ್)ವನ್ನು ಕಾಯ್ದುಗೊಂಡಿರುವುದನ್ನು ಡಾ. ಎಂ.ಎಂ. ಕಲಬುರ್ಗಿಯವರು ತಮ್ಮ ಸಂಶೋಧನಾತ್ಮಕ ಲೇಖನಗಳಲ್ಲಿ ಪ್ರಸ್ತಾಪಿಸಿದ್ದಾರೆ. ಬಸವಣ್ಣ ತಾನು ಪ್ರತ್ಯಕ್ಷವಾಗಿ ಅನುಭವಿಸಿದ್ದ ಹುಸಿ ಸಂಸ್ಕೃತಿಯ ಸಂಚು ಮತ್ತು ವಿಜೃಂಭಣೆಯನ್ನು ತನ್ನ ವಚನಗಳಲ್ಲಿ ಹುಸಿ ನುಸುಳೂ (27) ಮತ್ತು ಹುಸಿಯ ಮಸಕ (192) ಎಂದು ಸ್ಪಷ್ಟವಾಗಿ ಗುರುತಿಸಿದ್ದಾನೆ. ಇಂಥ ಹುಸಿತನದ ಸಂಚು ಮತ್ತು ವಂಚನೆ ಇಂದಿಗೂ ವಿಜೃಂಭಿಸುತ್ತಿದೆ.

ಹನ್ನೆರಡನೇ ಶತಮಾನದ ಬಸವಣ್ಣ, ಅಕ್ಕಮಹಾದೇವಿ ಮುಂತಾದ ಶರಣರು ಇಪ್ಪತ್ತನೆ ಶತಮಾನದಲ್ಲಿ ಸ್ವೀಕಾರವಾಗುತ್ತಿರುವ ಬಗೆ ಚಿಂತನಯೋಗ್ಯವಾಗಿದೆ. ಚಿತ್ರದುರ್ಗ ಮತ್ತು ಬೆಂಗಳೂರಿನಲ್ಲಿ ಬಸವಣ್ಣನ ಬೃಹತ್ ಪ್ರತಿಮೆಗಳು ಸಿದ್ಧವಾಗುತ್ತಿವೆ. ಇತ್ತೀಚೆಗೆ ಲಂಡನ್ನಿನ ಥೇಮ್ಸ್ ನದಿಯ ದಂಡೆಯ ಮೇಲೆ ಬಸವಣ್ಣನ ಪುತ್ಥಳಿಯನ್ನು ಪ್ರಧಾನಿ ನರೇಂದ್ರ ಮೋದಿಯವರು ಅನಾವರಣಗೊಳಿಸಿದ್ದಾರೆ. ಬೆಂಗಳೂರಿನ ಬಸವ ಭವನದ ಬಳಿ ಅಶ್ವಾರೋಹಿಯಾದ ಕತ್ತಿ ಕಿರೀಟದ ಬಸವಣ್ಣನ ಪ್ರತಿಮೆಯಿದೆ. ಬಸವಣ್ಣನ ಪ್ರತಿಮೆ ಮತ್ತು ಚಿತ್ರಗಳಲ್ಲಿ ಸುಪ್ರಸಿದ್ಧವಾದವುಗಳೆಂದರೆ, 1. ಕತ್ತಿ ಕಿರೀಟದ ಬಸವಣ್ಣ 2. ಇಷ್ಟಲಿಂಗಧಾರಿ ಬಸವಣ್ಣ 3. ತಾಳೆಗರಿ ಕಟ್ಟನ್ನು ಕೈಯಲ್ಲಿ ಹಿಡಿದ ಬಸವಣ್ಣ. ಚಾಲ್ತಿಯಲ್ಲಿರುವ ಅಕ್ಕಮಹಾದೇವಿಯ ಚಿತ್ರಗಳೆಂದರೆ, 1. ದಿಗಂಬರಿ 2. ಕೇಶಾಂಬರಿ 3. ವಸ್ತ್ರಾಂಬರಿ. ಇದೇ ರೀತಿಯಲ್ಲಿ ಜಟಾಜೂಟದ ಗಡ್ಡಮೀಸೆಯ ಕಷಾಯ ವಸ್ತ್ರಗಳ ಅಲ್ಲಮಪ್ರಭುವಿನ ಚಿತ್ರವೂ ಪ್ರಸಾರದಲ್ಲಿದೆ. ನನ್ನ ಪ್ರಕಾರ ಇಂಥ ಪ್ರತಿಮೆಗಳೂ ಮತ್ತು ಚಿತ್ರಗಳೆಲ್ಲವೂ 'ರೂಪದ ಕೋಟಲೆ'ಯೇ ಆಗಿದೆ. ಇಲ್ಲಿ ಶರಣರು ಕಲ್ಲಾಗುವುದು ಮತ್ತು ಚಿತ್ರವಾಗುವುದು ಎಂಬುದು 'ಹುಸಿ ನುಸುಳು' ಮತ್ತು 'ಹುಸಿಯ ಮಸಕ'ದ ಪ್ರತಿಫಲ. ಇಂಥ ಹುಸಿತನವನ್ನು ತನ್ನ ಕಾಲಕ್ಕೆ



***ಅಕ್ಷರವ ಬಲ್ಲೆವೆಂದು
ಅಹಂಕಾರವೆಡೆಗೊಂಡು ಲೆಕ್ಕಗೊಳ್ಳರಯ್ಯ
ಗುರು ಹಿರಿಯರು ತೋರಿದ
ಉಪದೇಶದಿಂದ
ವಾಗದ್ವೈತವ ಕಲಿತು ವಾದಿಪರಲ್ಲದೆ
ಆಗು–ಹೋಗೆಂಬುದನರಿಯರು. . . 47***

ಮನಗಂಡಿದ್ದ ಅಲ್ಲಮಪ್ರಭು ಹೀಗೆ ಹೇಳಿದ್ದಾನೆ.

1. ಉಳಿ ಮುಟ್ಟಿದ ಲಿಂಗ ಮನಮುಟ್ಟ ಬಲ್ಲುದೆ, ಗುಹೇಶ್ವರ?
2. ಘನತರ ಚಿತ್ರದ ರೂಹ ಬರೆಯಬಹುದಲ್ಲದೆ, ಪ್ರಾಣವ ಬರೆಯಬಹುದೆ ಅಯ್ಯ?

ಅಲ್ಲಮ ಪ್ರಭುವಿನ ಮಾತುಗಳೆಂಬ ಜ್ಯೋತಿರ್ಲಿಂಗದಲ್ಲಿ ಕಲ್ಲುಗಳಾಗುವ ಮತ್ತು ಚಿತ್ರಗಳಾಗುವ ಯಾಂತ್ರಿಕತೆಯ ನಿರಾಕರಣೆಯಿದೆ.

ಎರಡನೆಯದಾಗಿ, ಹನ್ನೆರಡನೆ ಶತಮಾನದ ಶರಣರು ಇಪ್ಪತ್ತನೇ ಶತಮಾನದಲ್ಲಿ ಅಕ್ಷರಗಳಾಗುವುದು ಮತ್ತು ಗ್ರಂಥಸ್ಥವಾಗುವುದು ಗಮನಾರ್ಹ. ಇದಕ್ಕೆ ವಚನಸಾಹಿತ್ಯ ಸಂಪಾದನೆಗಳು, ವಿಮರ್ಶೆಗಳು–ಸಂಶೋಧನೆಗಳು ಮುಂತಾದ ಅಧ್ಯಯನಗಳನ್ನು ಉದಾಹರಿಸಬಹುದು. ಶರಣರ ಬದುಕು ಮತ್ತು ಸಾಧನೆಗಳನ್ನು ಕುರಿತು ಹರಿಹರ, ಶಿವಗಣ ಪ್ರಸಾದಿಮಹಾದೇವಯ್ಯ, ರಾಘವಾಂಕ, ಭೀಮಕವಿ, ಚಾಮರಸ ಮುಂತಾದವರ ಕೃತಿಗಳು ಗ್ರಂಥ ಸಂಪಾದನೆಯ ಮೂಲಕ ಪ್ರಕಟಗೊಂಡಿವೆ. ಇಂಥ ಕೃತಿಗಳನ್ನು ಮೂಡಿಬಂದಿರುವ ವಿಮರ್ಶೆಗಳು, ಸಂಶೋಧನೆಗಳು ಅಗಾಧವಾಗಿವೆ. ಹನ್ನೆರಡನೆ ಶತಮಾನದ ವಚನ ಸಾಹಿತ್ಯವನ್ನು ಫ.ಗು. ಹಳಕಟ್ಟಿ, ಶಿ.ಶಿ. ಬಸವನಾಳ ಅವರುಗಳಿಂದ ಹಿಡಿದು ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಂಪುಟಗಳವರೆಗೆ ಬಹುಮಂದಿ ವಿದ್ವಾಂಸರು ಪ್ರಕಟಿಸಿದ್ದಾರೆ. ಇಲ್ಲಿನ ಅಕ್ಷರಗಳು ಮತ್ತು ಗ್ರಂಥಮಾಲೆಯ ಹಿಂದೆ ಗುಪ್ತಗಾಮಿಯಾಗಿ ವೈದಿಕ ಪುರೋಹಿತ ಶಾಹಿ, ಶೈವ ಪುರೋಹಿತ ಶಾಹಿ, ವೀರಶೈವ ಪುರೋಹಿತ ಶಾಹಿಯ ಹಿತಾಸಕ್ತಿಗಳು ನಡೆಸಿರುವ ಕಾರ್ಯಾಚರಣೆಯನ್ನು ಗುರುತಿಸಬಹುದು. ಇದನ್ನು ಗ್ರಂಥ ಸಂಪಾದನೆಯ ರಾಜಕಾರಣ ಮತ್ತು ಅಧ್ಯಯನಾಂಕ್ಷೆಯ ಹಿತಾಸಕ್ತಿಗಳು ಎಂದು ಕರೆಯಬಹುದು. ಅಕ್ಷರದ ಅಹಂಕಾರ ಮತ್ತು ಗ್ರಂಥಸ್ಥ ಹಿತಾಸಕ್ತಿಗಳನ್ನು ಕುರಿತು ಅಲ್ಲಮಪ್ರಭುವಿನ ವಚನವೊಂದಿದೆ.

ಅಕ್ಷರವ ಬಲ್ಲೆವೆಂದು
ಅಹಂಕಾರವೆಡೆಗೊಂಡು
ಲೆಕ್ಕಗೊಳ್ಳರಯ್ಯ
ಗುರು ಹಿರಿಯರು ತೋರಿದ
ಉಪದೇಶದಿಂದ
ವಾಗದ್ವೈತವ ಕಲಿತು
ವಾದಿಪರಲ್ಲದೆ
ಆಗು–ಹೋಗೆಂಬುದನರಿಯರು.
. . 47

ಇಪ್ಪತ್ತನೆ ಶತಮಾನದಲ್ಲಿ ಸಿಗುವ ವಿವಿಧ ಬಗೆಯ ವಚನಸಾಹಿತ್ಯ ಸಂಪಾದನೆಗಳಲ್ಲಿ ನಾವಿಂದು ಯಾವುದನ್ನು 'ಅಧಿಕೃತ' ಎಂದು ಭಾವಿಸಬೇಕು? ವಚನಗಳು ಪ್ರಶ್ನೆ ಸಂಸ್ಕೃತಿಯ ಸಾಹಿತ್ಯ. ವಚನ ಸಾಹಿತ್ಯದ ಗುರಿಯೆಂದರೆ ಪ್ರಶ್ನಿಸುವುದನ್ನು ಕಲಿಸುವುದು. ಪ್ರಶ್ನಿಸುವಿಕೆ ಅಥವಾ ಕ್ವೆಶ್ಚನಿಂಗ್ ಜೀವಂತ ಮನಸ್ಸಿನ ಅಭಿವ್ಯಕ್ತಿ. ವಚನಗಳು ಮೂಲತಃ ಹೇಳಿದ್ದು; ಬರೆದದ್ದು ಅಲ್ಲ ! ವಚನ ಸಾಹಿತ್ಯವನ್ನು ಅನುಭವ ಮಂಟಪದ ಸಂವಾದ ಜ್ಞಾನವೆಂದು ಕರೆಯಬಹುದು. ಗ್ರಂಥ ಸಂಪಾದನೆಯಲ್ಲಿ ಬಹುಬಗೆಯ ಸಂವಾದಗಳನ್ನು ಸೂಚಿಸಲು ಪ್ರಶ್ನೆ ಚಿಹ್ನೆ, ವಿಸ್ಮಯ ಚಿಹ್ನೆ, ಉದ್ಗಾರ ಚಿಹ್ನೆ, ಉಲ್ಲೇಖ ಚಿಹ್ನೆ, ಅಲ್ಪವಿರಾಮ–ಪೂರ್ಣವಿರಾಮ, ವಿವರಣಾತ್ಮಕ ಚಿಹ್ನೆ ಇತ್ಯಾದಿಗಳಿವೆ. ಇವುಗಳನ್ನು ಬಳಸಿಕೊಂಡು ಮಾತಿನವರಸೆಗಳನ್ನು, ಚಹರೆಗಳನ್ನು ಸಮರ್ಪಕವಾಗಿ ಬಿಂಬಿಸಲು ಸಾಧ್ಯವಿದೆ. ಇಂಥ ಆಧುನಿಕ ಚಿಹ್ನೆಗಳನ್ನು ಅತ್ಯಧಿಕವಾಗಿ ಬಳಸಿಕೊಂಡಿರುವ ವಚನಸಾಹಿತ್ಯ ಸಂಪಾದನೆಗಳೆಂದರೆ, ಡಾ. ಎಲ್. ಬಸವರಾಜು ಅವರ ಗ್ರಂಥ ಸಂಪಾದನೆಗಳೂ. ಆದ್ದರಿಂದಲೇ, ನಾನೊಂದು ಲೇಖನವನ್ನು 'ಅಂದು ಕವಿರಾಜಮಾರ್ಗ ಇಂದು ಬಸವರಾಜಮಾರ್ಗ' ಎಂಬ ಶೀರ್ಷಿಕೆಯಲ್ಲಿ ಬರೆದು ಪ್ರಕಟಿಸಿದ್ದೇನೆ. ನನ್ನ ವಿದ್ಯಾಗುರುಗಳಾದ ಪ್ರೊ. ಕಿ.ರಂ. ನಾಗರಾಜ ಅವರು ಇದನ್ನು ಮೆಚ್ಚಿಕೊಂಡಿದ್ದು, ತಾವು ಸಂಪಾದಿಸಿದ ಡಾ. ಎಲ್. ಬಸವರಾಜು ಕುರಿತ ಪುಸ್ತಕಕ್ಕೆ 'ಬಸವರಾಜಮಾರ್ಗ' (ಲಂಕೇಶ್ ಪ್ರಕಾಶನ, ಬೆಂಗಳೂರು) ಎಂದು ಹೆಸರಿಟ್ಟಿದ್ದಾರೆ. ನಾನು ವಚನ ಸಾಹಿತ್ಯ ಅಧ್ಯಯನಕ್ಕೆ ಆಧರಿಸಿರುವುದು ಡಾ. ಎಲ್. ಬಸವರಾಜು ಅವರ ಸಂಪಾದನೆಗಳನ್ನೇ, ಇನ್ನಿತರರ ಸಂಪಾದನೆಗಳು ನನ್ನ ಪಾಲಿಗೆ ಕ್ರಾಸ್ ರೆಫರೆನ್ಸ್, ಅಷ್ಟೆ! ವಚನ ಸಾಹಿತ್ಯ ಸಂಪಾದನೆಗಳಿಗೆ ಸಂಬಂಧಪಟ್ಟ ಈ ಸತ್ಯವನ್ನು ಎಲ್ಲ ಕನ್ನಡಿಗರು ಮೊದಲಿಗೆ ಅರಿತುಕೊಳ್ಳಬೇಕು.

ಹನ್ನೆರಡನೆ ಶತಮಾನದ ಶರಣರು ಇಪ್ಪತ್ತನೇ ಶತಮಾನದಲ್ಲಿ (1) ಕಲ್ಲುಗಳಾಗುವುದು, ಚಿತ್ರವಾಗುವುದು (2) ಅಕ್ಷರವಾಗುವುದು, ಗ್ರಂಥಸ್ಥವಾಗುವುದು ಮುಂದುವರೆದಿರುವಂತೆಯೇ ಬಸವಣ್ಣ, ಅಕ್ಕಮಹಾದೇವಿ ಮುಂತಾದವರು ನಮ್ಮ ಜೀವನ ಶೈಲಿಯ ಭಾಗವೇ ಆಗಿ ವಿಶಿಷ್ಟವಾದ ಅನುಭವವಾಗುವ ಪ್ರಕ್ರಿಯೆಯೂ ಇದೆ. ಇದು ಕಲ್ಲು–ಚಿತ್ರ–ಅಕ್ಷರ–ಗ್ರಂಥ ಮುಂತಾದ ಸ್ಥಾವರಗಳನ್ನು ಮೀರಿದ ಜಂಗಮದ ನಡೆ–ನುಡಿ ಎನ್ನಬಹುದು. ಇಂಥ ಅನುಭವದ ಮಹಿಮೆಯನ್ನು ಸಾರುವ ನುಡಿಮುತ್ತಿನ ಹಾರವೊಂದನ್ನು ಡಾ. ಎಲ್. ಬಸವರಾಜು ತಮ್ಮ 'ಅಕ್ಕಮಹಾದೇವಿಯ ವಚನಗಳು' ಎಂಬ ಕೃತಿಯಲ್ಲಿ ಉಲ್ಲೇಖಿಸಿದ್ದಾರೆ;

ಅನುಭವವೆ ಭವಬಂಧ ಮೋಚನ (=ವಿಮೋಚನೆ)
ಅನುಭವವೆ ದುರಿತಚಲಾಶನಿ (ಅಶನಿ=ಸಿಡಿಲು, ವಜ್ರಾಯುಧ)
ಅನುಭವವೆ ತನುಗುಣಗಣಾಭ್ರ ಪ್ರಕರ ಪವಮಾನ (=ಬಿರುಗಾಳಿ)
ಅನುಭವವೆ ಭಕ್ತಿಯ ಸುಧಾನಿಧಿ (=ಕ್ಷೀರಸಾಗರ)
ಅನುಭವವೆ ಮುಕ್ತಿಯ ತವರ್ಮನೆ ಶರಣ ಸಂತತಿಯ.
347 LB

ಭವಬಂಧನದಿಂದ ವಿಮೋಚನೆಗೊಳಿಸುವುದು; ಅನುಭವ
ಪಾಪಗಳೆಂಬ ಬೆಟ್ಟಕ್ಕೆ ವಜ್ರಾಯುಧವಾಗಿರುವುದು; ಅನುಭವ
ತನುಗುಣಗಳೆಂಬ ಮೋಡಗಳಿಗೆ ಬಿರುಗಾಳಿಯಾಗುವುದು; ಅನುಭವ
ಭಕ್ತಿಗೆ ಸುಧಾಸಾಗರವಾಗಿರುವುದು; ಅನುಭವ
ಮುಕ್ತಿಗೆ ತವರ್ಮನೆಯಾಗಿರುವುದು; ಅನುಭವ
ಇದು ಶರಣ ಸಂತತಿಗೆ ಅನುಭವವೇದ್ಯ. . ..

ಅನುಭವದ ಪ್ರಕ್ರಿಯೆಯನ್ನು ಶರಣರು ನಿಜಾನುಭವ, ನಿಜದುದಯ ಎಂದು ಕರೆದಿದ್ದಾರೆ. ಇದನ್ನು ಕುರುಹುಗಳ ವಿಸರ್ಜನ ಮತ್ತು ಅರಿವಿನ ಮಹಾಸ್ಫೋಟ ಎನ್ನಬಹುದು. ವಿಶ್ವದ ಉಗಮಕ್ಕೆ ಬಿಗ್‌ಬ್ಯಾಂಗ್ ಇರುವಂತೆ, ಅಂತರಂಗದ ಅರಿವಿಗೆ ಇದು ಬಿಗ್ ಬ್ಯಾಂಗ್ ಆಗಿದೆ.

ಕುವೆಂಪು ಅವರು ತಮ್ಮ ಕಾದಂಬರಿಯ ಅರಿಕೆಯಲ್ಲಿ ಇದು ಓದುಗರ ಅನುಭವದಲ್ಲಿ ಪುನರ್‌ಸೃಷ್ಟಿಯಾಗಬೇಕೆಂದು ಹಾರೈಸಿದ್ದಾರೆ. ಕವಿಯ ಬರೆಹ ಸಹೃದಯನಲ್ಲಿ ಮರುಹುಟ್ಟು ಪಡೆಯಬೇಕು. 'ಅನುಭವಿಸಿ ಓದುವುದು' ವಿಚಾರವೆನಿಸಿಕೊಂಡರೆ 'ಸುಮ್ಮನೆ ಓದುವುದು'–ಆಚಾರ ಮಾತ್ರವಾಗುತ್ತದೆ. ಶರಣರ ವಚನಗಳು ನಮಗೆ ವಿಶಿಷ್ಟವಾದ ಅನುಭವವಾದರೆ, ಅವು ಪುನರ್‌ಸೃಷ್ಟಿ ಆದಂತೆಯೇ! ಇದು ಬೀಜ ಮೊಳೆತು ಗಿಡಮರಗಳಾಗುವ ಹಚ್ಚ ಹಸುರಿನ ಪ್ರಕ್ರಿಯೆ ಇದ್ದಂತೆ. ವಚನಗಳೆಂಬ ಬಹುಬೀಜಗಳು ಸಹೃದಯರ ಎದೆ ಹೊಲದಲ್ಲಿ ಬಿತ್ತನೆಗೊಂಡು ಹಚ್ಚಹಸುರಿನ ಗಿಡಮರಗಳಾಗಬೇಕು. ಹೀಗಾಗದೆ, ಶರಣರ ವಚನಗಳು ಹಿಂದೆ ಸರಿದು, ಶರಣರು ಕಲ್ಲು–ಚಿತ್ರ–ಅಕ್ಷರ–ಗ್ರಂಥಸ್ಥವಾಗುತ್ತಿರುವುದು ಒಂದು ದುರಂತ. ಅಲ್ಲಮಪ್ರಭು ಹೇಳಿರುವಂತೆ "ಕುರುಹುವಿಡಿದು ಕುರುಹುಗೆಡಬೇಕು"–ಎಂಬ ಮಾತು ಬಹುಮುಖ್ಯ! ವಿಚಾರದ ಆವೇಶದಲ್ಲಿ ಕುರುಹುಗಳನ್ನು ಸಾರಾಸಗಟಾಗಿ ಧಿಕ್ಕರಿಸಬಾರದು. 'ಕುರುಹುಗಳು' ನನ್ನ ದೃಷ್ಟಿಯಲ್ಲಿ ವರ್ಣಮಾಲೆ ಮತ್ತು ಕಾಗುಣಿತ ಇದ್ದಂತೆ. ಇವುಗಳನ್ನು ನಾವು ಚೆನ್ನಾಗಿ ಕಲಿಯಬೇಕು. ಆದರೆ ಜೀವಮಾನವೆಲ್ಲ ವರ್ಣಮಾಲೆ ಮತ್ತು ಕಾಗುಣಿತವನ್ನೇ ಅಭ್ಯಾಸ ಮಾಡುತ್ತಿರುವುದಿಲ್ಲ. ಬದಲಿಗೆ, ಪಂಪ–ರನ್ನ, ಶರಣರು, ಹರಿಹರ–ರಾಘವಾಂಕ, ಕುಮಾರವ್ಯಾಸ–ಚಾಮರಸ, ಕುವೆಂಪು–ಬೇಂದ್ರೆ ಮುಂತಾದವರ ಸಾಹಿತ್ಯದೊಡನೆ ಅನುಸಂಧಾನ ಮಾಡುತ್ತೇವೆ. ಜೀವಮಾನಪೂರ್ತಿ ಕುರುಹುಗಳನ್ನೇ ಅಭ್ಯಾಸಮಾಡುತ್ತಿದ್ದರೆ ಅರಿವು ಯಾವಾಗ? ಸಾವನ್ನಕ್ಕರ ಸರವ (ಶರ ಸಂಧಾನ) ಮಾಡುತ್ತಿದ್ದರೆ ಕಾದುವ ದಿನ ತಾನಾವುದು? ಇದನ್ನೇ 'ಕುರುಹುವಿಡಿದು ಕುರುಹುಗೆಡಿಬೇಕು' ಎಂದು ಹೇಳುವುದು. ಶರಣರ ಪ್ರತಿಮೆಗಳು–ಚಿತ್ರಗಳು–ಅಕ್ಷರಗಳು–ಗ್ರಂಥಗಳು ತಮ್ಮ ಪಾಡಿಗೆ ತಾವಿರಲಿ! ಶರಣರ ವಚನಗಳು ನಮ್ಮ ಜೀವನ ಶೈಲಿಯ ಭಾಗವಾಗಿ, ನಿಜವಾದ ಅನುಭವ ಆಗಲಿ!

ರಾಘವಾಂಕನ 'ಹರಿಶ್ಚಂದ್ರ ಚಾರಿತ್ರ್ಯ'ದಲ್ಲಿ 'ನಿಂದ ನೆಲದ ಗುಣ' ಎಂಬ ಮಾತಿದೆ. ಹೊಲತಿಯರು–ಹರಿಶ್ಚಂದ್ರ ಸಂವಾದದಲ್ಲಿ ಕೇಳಿ ಬರುವ ಈ ಮಾತು ಅರ್ಥಗರ್ಭಿತವಾಗಿದೆ. ಪಂಪನು ಕೂಡ 'ನಾಲಗೆ ಕಲಮಂ ತುಬ್ಬುವವೊಲ್' ಎಂದು ಹೇಳಿದ್ದಾನೆ. ನಿಂದ ನೆಲದ ಗುಣದ ಮತ್ತು ನುಡಿವ

ನಾಲಗೆಯ ಹಿಂದೆ, ಜಾತಿಪದ್ಧತಿಯ ಸಮಾಜದ ಪ್ರಭಾವಗಳನ್ನಿಲ್ಲಿ ಗುರುತಿಸಲಾಗಿದೆ. ಇದು ನಿಜ. ನಮ್ಮ ನಡೆ–ನುಡಿ–ಆಲೋಚನೆ–ಜೀವನಶೈಲಿಯಲ್ಲಿ ಜಾತಿಪದ್ಧತಿಯ ಸೂಕ್ಷ್ಮಗಳಿರುತ್ತವೆ. ಜಾತಿ ಸಮಾಜದ ಲಕ್ಷಣಗಳೆಂದರೆ, ವಿಂಗಡಣೆ (=ಡಿವಿಷನ್) ಮತ್ತು ಸ್ಥಿರತೆ (=ಸ್ಟ್ಯಾಗ್ನೇಷನ್) ವಿಂಗಡಣೆಯ ಬುದ್ಧಿಶಕ್ತಿಯಲ್ಲಿ 'ಡಿವೈಡ್ ಅಂಡ್ ರೂಲ್' ನೀತಿ ಇದ್ದರೆ, ಸ್ಥಿರತೆಯ ಭಾವದಲ್ಲಿ 'ಸ್ಟ್ಯಾಗ್ನೇಟ್ ಅಂಡ್ ಕಂಟ್ರೋಲ್' ಎಂಬ ನೀತಿ ಅಡಗಿರುತ್ತದೆ.

ಪ್ರತಿಯೊಂದು ವಸ್ತುವಿಷಯವನ್ನು ಬಿಡಿ ಬಿಡಿಯಾಗಿ ನೋಡುವುದು (=ವಿಂಗಡಣೆ) ಹಾಗೂ ಚಲನೆ ಇಲ್ಲದಂತೆ ಮಾಡುವುದು (=ಸ್ಥಿರತೆ). ಇವು ನಮ್ಮ ಆಲೋಚನಾಕ್ರಮ ಮತ್ತು ಜೀವನಶೈಲಿಯ ಅವಿಭಾಜ್ಯ ಅಂಗವಾಗಿ ಬಿಟ್ಟಿದೆ. ನಮ್ಮ ಸಮಾಜದಲ್ಲಿ ಬೇರೆಬೇರೆಯಾಗಿರುವುದನ್ನು ಮತ್ತು ಸ್ಥಿರವಾಗಿ ನೆಲೆಯೂರಿದ್ದನ್ನು ಒಂದು ಮಾಡಿ, ಚಲನಶೀಲವಾಗಿ ಅರಿತುಕೊಳ್ಳಬೇಕು. ಉದಾಹರಣೆಗೆ, ಧರ್ಮ–ಅರ್ಥ–ಕಾಮ–ಮೋಕ್ಷಗಳನ್ನು ಚತುರ್ವಿಧ ಪುರುಷಾರ್ಥಗಳು ಎಂದು ಕರೆಯುತ್ತಾರೆ. 'ಚತುರ್ವಿಧ' ಎಂದೊಡನೆ ನಾಲ್ಕುವಿಧವಾದ ಬೇರೆ ಬೇರೆ ಅವಸ್ಥೆಗಳು ಎಂಬರ್ಥ ಬರುತ್ತದೆ. ಇದನ್ನು ಚತುರ್ಮುಖ ಪುರುಷಾರ್ಥ ಎಂದು ಕರೆದಲ್ಲಿ ಒಂದೇ ದೇಹದ ನಾಲ್ಕು ಮುಖಗಳು ಎಂಬ ಅಖಂಡ ಗ್ರಹಿಕೆ ಸಾಧ್ಯವಾಗುತ್ತದೆ. ಧರ್ಮ–ಅರ್ಥ–ಕಾಮ–ಮೋಕ್ಷಗಳು ಒಂದರೊಳಗೊಂದು ಹೆಣೆದುಕೊಂಡ ಸಂಕೀರ್ಣ ಸಮುಚ್ಚಯ.

ಇದು ಧಾರ್ಮಿಕ, ಇದು ಆರ್ಥಿಕ, ಇದು ಕಾಮಿತ, ಇದು ಮೋಕ್ಷ ಎಂದು ವಿಂಗಡಿಸಿ–ಸ್ಥಿರಗೊಳಿಸಿ ನಿರೂಪಿಸಲು ಸಾಧ್ಯವಿಲ್ಲ. ಚತುರ್ಮುಖ ಪುರುಷಾರ್ಥಗಳು ಜೀವನದ ನಾಲ್ಕು ಸೋಪಾನಗಳು ಇವು ಒಂದನ್ನು ಬಿಟ್ಟು ಮತ್ತೊಂದಿರುವುದಿಲ್ಲ. ಇಂಥ ಅಖಂಡ ಗ್ರಹಿಕೆಗೆ ಮನೋಸಂಕಲ್ಪ ಬಹುಮುಖ್ಯ. ಜಾತಿ ಪದ್ಧತಿಯ ಸಮಾಜದಲ್ಲಿದ್ದುಕೊಂಡೇ ಪಂಪನು "ಮನುಷ್ಯಜಾತಿ ತಾನೊಂದೇ ವಲಂ" ಎಂಬ ಅಖಂಡ ಸತ್ಯವನ್ನು ಸಾರಿದ್ದಾನೆ.

ಕೋಲಾರ ಜಿಲ್ಲೆಗೆ ಪೂರ್ವದಲ್ಲಿ ಎರಡು ನದಿ ಕಣಿವೆಗಳಿವೆ. ಒಂದು ಮೊಗಿಲಿ ಕಣಿವೆ, ಇನ್ನೊಂದು ನಾಯಕನೇರಿ ಕಣಿವೆ; ಇವೆರಡು ಕಣಿವೆಗಳ ಮಧ್ಯೆ ಹಬ್ಬಿರುವ ಕುರುಚಲು ಕಾಡಿಗೆ 'ಕೌಂಡಿನ್ಯ ಮೀಸಲು ಅರಣ್ಯ' ಎಂದು ಹೆಸರಿದೆ. ಈ ಕಾಡಿನಲ್ಲಿ ಕಳೆದ ಇಪ್ಪತ್ತೈದು ವರ್ಷಗಳಿಂದ ಯಾನಾದುಲು ಅಥವಾ ಅಡವಿಪೂಜಾರ್ಲು ಎಂಬ ಗಿರಿಜನರ ಜೊತೆಗೂಡಿ ಕಾಲ್ನಡಿಗೆಯ ತಿರುಗಾಟಗಳನ್ನು ನಡೆಸಿರುವ ನನಗೆ ವಿಶಿಷ್ಟವಾದ ಅನುಭವಗಳಿವೆ. ಈ ಕಾಡಿನಲ್ಲಿ ವಡಿಶಮಾನು ಎಂಬ ವಿಷವೃಕ್ಷವಿದೆ. ಕಾಡಿನಲ್ಲಿ ತಿರುಗಾಡುವಾಗ ಈ ಮರದ ಕೆಳಗೆ ನೆರಳಿನಲ್ಲಿ ಕುಳಿತುಕೊಳ್ಳುವುದನ್ನು ಮತ್ತು ಈ ಮರದ ಎಲೆಗಳನ್ನು ಕೈಯಲ್ಲಿ ಮುಟ್ಟಿ ಹಿಸುಕುವುದನ್ನು ನಾವು ತಪ್ಪಿಸುತ್ತೇವೆ. ಈ ಪ್ರದೇಶದ ಜನರು ಆತ್ಮಹತ್ಯೆ ಮಾಡಿಕೊಳ್ಳಲು ಇದರ ಎಲೆ ಮತ್ತು ಬೆಲ್ಲದ ಮಿಶ್ರಣವನ್ನು ಈಗಲೂ ಬಳಸುವುದುಂಟು. ಇದು ಕಣ್ಣಿಗೆ ಕಾಣುವ ಹಸಿರು ವಿಷದ ಮರ. ಇನ್ನು ಮುಂದೆ ನಮ್ಮ ದೇಶದಲ್ಲಿ ಮಾತ್ರವಲ್ಲ. ಪ್ರಪಂಚದ ಎಲ್ಲೆಡೆಗಳಲ್ಲಿರುವ ಕಣ್ಣಿಗೆ ಕಾಣದ ವಿಷವೃಕ್ಷದ ಬಗ್ಗೆ ಹೇಳುತ್ತೇನೆ. ಇದರ ಬೇರು–ಕಾಂಡ–ಹಣ್ಣು ಬಹು ಅಪಾಯಕಾರಿಯಾಗಿದೆ. ಕಣ್ಣಿಗೆ ಕಾಣುವುದಕ್ಕಿಂತಲೂ ಕಣ್ಣಿಗೆ ಕಾಣದ್ದು ಉಗ್ರ ಭಯಂಕರ!

ಸ್ಥಳೀಯ ಭೂಗೋಳ, ರಾಷ್ಟ್ರೀಯ ಭೂಗೋಳ ಮತ್ತು ಜಾಗತಿಕ ಭೂಗೋಳ ಎಂಬ ಭೇದವಿಲ್ಲದಂತೆ ಹಬ್ಬಿರುವ ಕಣ್ಣಿಗೆ ಕಾಣದ ವಿಷವೃಕ್ಷದ ಬೇರುಗಳೆಂದರೆ ಪುರೋಹಿತಶಾಹಿ. ಇದರ ಕಾಂಡ ಮತ್ತು ಶಾಖೋಪಶಾಖೆಗಳೇ ಕೋಮುವಾದ, ಈ ವಿಷವೃಕ್ಷದ ಹಣ್ಣುಗಳೇ ಭಯೋತ್ಪಾದನೆ. ಪುರೋಹಿತಶಾಹಿ–ಕೋಮುವಾದ–ಭಯೋತ್ಪಾದನೆಗಳನ್ನು ಸಾಮಾನ್ಯವಾಗಿ ಮೂರು ದಾರಿಗಳೆಂದು ತಿಳಿಯುವುದುಂಟು. ಆದರೆ ನಾವಿಂದು ಪುರೋಹಿತಶಾಹಿಯೆಂಬ ಸಮೃದ್ಧವಾದ ಬೇರುಗಳಿಂದ ಪೋಷಣೆ ಪಡೆಯುತ್ತಾ, ಕ್ರಮೇಣ ಕೋಮುವಾದವೆಂಬ ಬಲವಾದ ಕಾಂಡ–ಶಾಖೋಪಶಾಖೆಗಳಿಂದ ಹಬ್ಬಿಕೊಳ್ಳುವ, ಕಣ್ಣಿಗೆ ಕಾಣದ ಈ ವಿಷವೃಕ್ಷದ ಪ್ರತಿಫಲ ಅಥವಾ ಹಣ್ಣುಗಳೆಂದರೆ ಭಯೋತ್ಪಾದನೆ ಎಂದು ತಿಳಿಯಬೇಕು. ಇದು ಈ ವಿಷವೃಕ್ಷದ ವಿರಾಟ್ ಸ್ವರೂಪ. ಇದು ಬಿಡುವ ಹಣ್ಣುಗಳೆಲ್ಲ ಬಾಂಬುಗಳಾಗಿ ವಿಶ್ವಮಾನವತೆಯನ್ನು ಬೆಚ್ಚಿ ಬೀಳಿಸುತ್ತಿರುವ ದಿನಗಳಿವು. ಇದರ ಬಗ್ಗೆ ಈಗಲೇ ಎಚ್ಚೆತ್ತುಕೊಳ್ಳಬೇಕು. ಇಲ್ಲದಿದ್ದರೆ, ಐ.ಎಸ್. ಉಗ್ರರು, ತಾಲಿಬಾನ್‌ಗಳು ಎಲ್ಲ ಧರ್ಮಗಳಲ್ಲಿ ರಾಷ್ಟ್ರಗಳಲ್ಲಿ ಕಾಣಿಸಿಕೊಳ್ಳಬಹುದು. ಧರ್ಮ ಮತ್ತು ರಾಷ್ಟ್ರಗಳ ಅಪವಿತ್ರ ಮೈತ್ರಿಯನ್ನು ಪುರೋಹಿತಶಾಹಿ–ಕೋಮುವಾದ–ಭಯೋತ್ಪಾದನೆಯೆಂಬ ತ್ರಿಕೋನ ಸಂಬಂಧದಲ್ಲಿ ನೋಡುತ್ತಿದ್ದೇವೆ. ನಾಗರಿಕತೆಯೂ ಸೇರಿದಂತೆ ಎಲ್ಲ ವಿಧವಾದ ಮಾಧ್ಯಮಗಳ ಹಿಡಿತದಿಂದ, ಬಿಡಿಸಿಕೊಂಡು ಸ್ವತಂತ್ರವಾಗಿ ಆಲೋಚಿಸುವುದು, ಸ್ವತಂತ್ರವಾಗಿ ಬದುಕುವುದು ನಮಗೆ ಸಾಧ್ಯವಾಗಬೇಕು. ಇದನ್ನು ಸಾಧ್ಯಮಾಡಿಕೊಂಡ ಶರಣರ ನುಡಿಗಳಿವು;

1. ಮನೆ ನೋಡಾ ಬಡವರು, ಮನ ನೋಡಾ ಧೀರರು...ಕೂಡಲಸಂಗನ ಶರಣರು ಸ್ವತಂತ್ರ ಧೀರರು. –208

2. ನ್ಯಾಯ ನಿಷ್ಠುರ ! ದಾಕ್ಷಿಣ್ಯಪರ ನಾನಲ್ಲ ಲೋಕ ವಿರೋಧಿ ! ಶರಣ ನಾರಿಗಂಜುವನಲ್ಲಿ –414

ಬ್ರಿಟಿಷರು ಸ್ಥಾಪಿಸಿದ ವಸಾಹತುಗಳನ್ನು ಲಕ್ಷ್ಯದಲ್ಲಿಟ್ಟುಕೊಂಡು 'ರವಿಮುಳುಗದ ಸಾಮ್ರಾಜ್ಯ'ವನ್ನು ಕಟ್ಟಿದರೆಂದು ಹೇಳುವುದುಂಟು. ಇಂಗ್ಲಿಷ್ ಕವಿಯೊಬ್ಬ ಈ ಕುರಿತು 'ರೂಲ್ ಬ್ರಿಟಾನಿಯಾ' ಎಂಬ ಕವಿತೆಯನ್ನೇ ಬರೆದಿದ್ದಾನೆ. ಇದು ಚರಿತ್ರೆಯ ಹಳೆಯ ಪುಟ. ನಾವಿಂದು ಹೊಸ ಪ್ರಶ್ನೆಯನ್ನು ಹಾಕಿಕೊಳ್ಳಬೇಕು;

ನಮ್ಮ ದೇಶ (ದೇಹ) ಮತ್ತು ಮನಸ್ಸುಗಳನ್ನು ಆಳುತ್ತಿರುವ ಸ್ಥಳೀಯ ಶಕ್ತಿಗಳಾವುವು? ನಮ್ಮ ಆಲೋಚನಾಕ್ರಮ ಮತ್ತು ಜೀವನ ಶೈಲಿಗಳನ್ನು ನಿಯಂತ್ರಿಸುತ್ತಿರುವ ಜಾಗತಿಕ ಶಕ್ತಿಗಳು ಯಾವುವು? ಮನಸ್ಸುಗಳಿಗೆ ಹಾಕಿರುವ ಮೂಗುದಾರದ ಹಿಂದೆ ಯಾರಿದ್ದಾರೆ? ಇದಕ್ಕೆ ಉತ್ತರ ಸುಲಭವಲ್ಲ; ಗುಡಿ ಚರ್ಚು ಮಸೀದಿಗಳೊ, ಕಾಶಿ–ತಿರುಪತಿ–ಧರ್ಮಸ್ಥಳಗಳು, ವಿಧಾನಸೌಧ–ಪಾರ್ಲಿಮೆಂಟ್, ವೈಟ್ ಹೌಸ್‌ಗಳು ಯಾವುದು? ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಅವರ 'ಜುಗಾರಿ ಕ್ರಾಸ್' ಕಾದಂಬರಿಯ ಪ್ರಶ್ನೆಯಿದು; ನಮ್ಮ ಬಿಗ್‌ಬಾಸ್ ಯಾರು? ಎಲ್ಲಿದ್ದಾನೆ?

ಇತ್ತೀಚೆಗೆ 'ಕ್ಯಾಪ್ಟನ್ ಅಮೆರಿಕಾ' ಎಂಬ ಹಾಲಿವುಡ್ ಸಿನಿಮಾ ಬಂದಿದೆ. ಇಂಗ್ಲೆಂಡ್, ರಷ್ಯಾ, ಚೀನಾ, ಜಪಾನ್, ಇಂಡಿಯಾ ಮುಂತಾದ ದೇಶಗಳು ಕ್ಯಾಪ್ಟನ್ ಅಲ್ಲವೆ? ನಮ್ಮ ದೇಶದ ಅಂತರಂಗಕ್ಕೆ ಸಂಬಂಧಪಟ್ಟಂತೆ 'ಕ್ಯಾಪ್ಟನ್ ಆಚಾರ್ಯತ್ರಯರು' ಇದ್ದಾರೆ. ಇವರ ಪ್ರತಿನಿಧಿಗಳು ಮತ್ತು ವಾರಸುದಾರರೆಲ್ಲ ಸೇರಿ ಬಸವಣ್ಣನನ್ನು ನಾಲ್ಕನೇ ಆಚಾರ್ಯ ಮಾಡುತ್ತಿದ್ದಾರೆ. ಇದಕ್ಕೆ ಅವಕಾಶ ಕೊಡಬಾರದು. ಬಸವಣ್ಣ ಆಚಾರ್ಯ ಪುರುಷನಲ್ಲ! ಜನತೆಯ ವಾಹನ! ಜನಶತಾಬ್ದಿ ಎಕ್ಸ್‌ಪ್ರೆಸ್! ಬಸವಣ್ಣ ತನ್ನ ವಚನದಲ್ಲಿ 'ನಾನು ವಾಹನವಾಗಿದ್ದೆ' ಎಂದು ಮತ್ತೆ ಮತ್ತೆ ಹೇಳಿದ್ದಾನೆ. ಅಲ್ಲಮಪ್ರಭು ತನ್ನ ವಚನದಲ್ಲಿ 'ನಾನು ಪ್ರಭುವೆಂಬ ಜಂಗಮನಾಗಿದ್ದೆ' ಎಂದಿದ್ದಾನೆ. ನಾವು ಈ 'ಜಂಗಮ ವಾಹನ' ಸಂಬಂಧವನ್ನು ಅರಿತುಕೊಳ್ಳಬೇಕು. ಬಸವಣ್ಣ ಸಮಸ್ತ ಕನ್ನಡಿಗರ ಅಣ್ಣ, ಅಕ್ಕಮಹಾದೇವಿ ಸಮಸ್ತ ಕನ್ನಡಿಗರ ಅಕ್ಕ, ಅಲ್ಲಮಪ್ರಭು ಸಮಸ್ತ ಕನ್ನಡಿಗರ ಶ್ರೀಗುರು. ಹನ್ನೆರಡನೇ ಶತಮಾನದ ಅತ್ಯಂತ ಬಲವಾದ ಈ ತ್ರಿಕೋನ ಸಂಬಂಧದಲ್ಲಿ ಅಂತರ್‌ಜಾತಿಯ ಮದುವೆಯನ್ನು ಅಡ್ಡವಾಗಿಟ್ಟುಕೊಂಡು ಬಸವಣ್ಣನನ್ನು 'ಹತ್ಯೆ' (ಅಸ್ಸಾಸಿನೇಷನ್) ಮಾಡಲಾಯಿತು. ಈ ತಾಣವೇ ಇಂದು 'ಕೂಡಲ ಸಂಗಮ'ವಾಗಿ ಅಭಿವೃದ್ಧಿಗೊಂಡಿದೆ. ಬಸವಣ್ಣನ

***ಮನೆ ನೋಡಾ ಬಡವರು, ಮನ ನೋಡಾ ಧೀರರು...***
***ಕೂಡಲಸಂಗನ ಶರಣರು ಸ್ವತಂತ್ರ ಧೀರರು. –208***

***ನ್ಯಾಯ ನಿಷ್ಠುರ ! ದಾಕ್ಷಿಣ್ಯಪರ ನಾನಲ್ಲ***
***ಲೋಕ ವಿರೋಧಿ ! ಶರಣ ನಾರಿಗಂಜುವನಲ್ಲಿ –414***





ಹೆಸರನ್ನು ಬಂಡವಾಳ ಮಾಡಿಕೊಂಡು ಮುಂದೆ ಮಠಮಾನ್ಯಗಳು, ಜಗದ್ಗುರುಗಳು ತಲೆಯೆತ್ತಿದ್ದಾರೆ.

ಅಲ್ಲಮಪ್ರಭು ಯಾರೆಂಬುದು ಯಾರಿಗೂ ಗೊತ್ತಿಲ್ಲ. 'ಅಲ್ಲಮಪ್ರಭು' ಎಂಬುದೊಂದು ಹುಸಿ ನಾಮಧೇಯ (ಸ್ಯೂಡೋನೇಮ್). ಹನ್ನೆರಡನೆ ಶತಮಾನದಲ್ಲಿ ಕ್ಲಾಸಿಕಲ್ ಭಾಷೆಗಳೆಂದು ಹೆಸರಾಗಿದ್ದ 1. ಪರ್ಸೋ ಅರಾಬಿಕ್ 2. ಟಿಬೇಟನ್ 3. ಸಂಸ್ಕೃತ ಭಾಷೆಗಳಲ್ಲಿ ಸೃಷ್ಟಿಕರ್ತನನ್ನು ಸೂಚಿಸುವ ಅಲ್ಲಾಹ್+ಲಾಮಾ+ಪ್ರಭು ಎಂಬ ಮೂರು ಶಬ್ದಗಳಿಂದ 'ಅಲ್ಲಮಪ್ರಭು' ಮೂಡಿ ಬಂದಿದೆ. ಈ ಅಜ್ಞಾತ ವ್ಯಕ್ತಿಯನ್ನು ಗುರುತಿಸಿ, ಶೂನ್ಯ ಸಿಂಹಾಸನದಲ್ಲಿ ಪ್ರತಿಷ್ಠಾಪನೆ ಮಾಡಿದವನು ಬಸವಣ್ಣ. ಈ ಅಣ್ಣನಿಲ್ಲದಿದ್ದರೆ ಅಲ್ಲಮಪ್ರಭು ನಮಗೆ ಸಿಗುತ್ತಿರಲಿಲ್ಲ. ಕನ್ನಡ ಸಾಹಿತ್ಯಕ್ಕೆ 'ಮೌಂಟ್ ಎವರೆಸ್ಟ್' ಎನ್ನಬಹುದಾದ ಅಲ್ಲಮಪ್ರಭುವನ್ನು ಕೈ ಹಿಡಿದು ಕರೆತಂದ ಕಾರಣಕ್ಕೆ ನಾನು ಬಸವಣ್ಣನ ಪಾದಗಳಿಗೆ ಶರಣು ಹೇಳುತ್ತೇನೆ.

ವಚನ ಚಳುವಳಿ ಮತ್ತು ವಚನ ಸಾಹಿತ್ಯದಲ್ಲಿ 'ಮಧ್ಯವರ್ತಿಗಳಿಲ್ಲದ ಕಾಣ್ಕೆ'ಯಿದೆ. ಇದನ್ನು ವರ್‌ಶಿಪ್ ವಿತ್‌ಔಟ್ ಏಜೆನ್ಸಿ ಎನ್ನಬಹುದು. ಧರ್ಮವನ್ನು ಮುಟ್ಟುಗೋಲು ಹಾಕಿಕೊಂಡಿರುವ ಏಜಂಟರುಗಳೆಂದರೆ, 1. ಪುರೋಹಿತಶಾಹಿ 2. ಕೋಮುವಾದ 3. ಭಯೋತ್ಪಾದನೆ, ಮಧ್ಯವರ್ತಿಗಳಿಲ್ಲದ ಕಾಣ್ಕೆ ಎಂದರೆ ಈ ಮೂರು ನೆಲೆಗಳ ನಿರಾಕರಣೆ ಎಂದರ್ಥ. ಇವು ಮೂರು ಒಂದನ್ನೊಂದು ಆಧರಿಸಿದ ಕಣ್ಣಿಗೆ ಕಾಣದ ವಿಷವೃಕ್ಷ;

ತನ್ನಾಶ್ರಯದ ರತಿಸುಖವನು
ತಾನುಂಬ ಊಟವನು
ಬೇರೊಬ್ಬರ ಕೈಯಲು ಮೂಡಿಸಬಹುದೇ?

ತನ್ನ ಲಿಂಗಕ್ಕೆ ಮಾಡುವ
ನಿತ್ಯ ನೇಮವನು ತಾ ಮಾಡಬೇಕಲ್ಲದೆ
ಬೇರೆ ಮತ್ತೊಬ್ಬರ ಕೈಯಲು ಮಾಡಿಸಬಹುದೇ?
ಕೆಮ್ಮನೆ ಉಪಚಾರಕ್ಕೆ ಮಾಡುವರಲ್ಲದೆ
ನಿಮ್ಮ ನೆತ್ತ ಬಲ್ಲರು ಕೂಡಲಸಂಗಮದೇವ?–123

ನೇರ ನಿಯಂತ್ರಣ ಅಥವಾ ದೂರ ನಿಯಂತ್ರಣಕ್ಕೆ ಒಳಗಾಗದ ಆಲೋಚನಾಕ್ರಮ ಮತ್ತು ಜೀವನಶೈಲಿಯನ್ನಿಲ್ಲಿ ಕಾಣಬಹುದು. ಯಾವುದೇ ಬಗೆಯ ನಿಯಂತ್ರಣಕ್ಕೆ ಒಳಪಡದ 'ನಿರಂಕುಶ ಮತಿಯ ಆತ್ಮಶ್ರೀ' (ಕುವೆಂಪು) ಬಸವಣ್ಣನಲ್ಲಿದೆ;

ದೂಷಕನಾವನೊಬ್ಬ ದೇಶವ ಕೊಟ್ಟರೆ
ಆಸೆ ಮಾಡಿ ಅವನ ಹೊರೆಯಲಿರಬೇಡ
ಮದಾರ ಶಿವಭಕ್ತನಾದರೆ
ಆತನ ಹೊರೆಯಲು ಇಪ್ಪುದು
ಕರಲೇಸಯ್ಯ
ಭೃತ್ಯನಾಗಿ, ತೊತ್ತಾಗಿ ಇಪ್ಪುದು
ಕರಲೇಸಯ್ಯ
ಕಾಡುಸೊಪ್ಪು ತಂದು ಓಡಿನಲ್ಲಿ
ಹುರಿದಿಟ್ಟುಕೊಂಡು
ಕೂಡಿಕೊಂಡಿಪ್ಪುದು ನಮ್ಮ
ಕೂಡಲಸಂಗನ ಶರಣರ–88

'ಕಾಡು ಸೊಪ್ಪು ತಂದು'. . .ಎಂಬ ನುಡಿಯಲ್ಲಿ ಮಾರುಕಟ್ಟೆಯಿಂದ ದೂರಸಿಡಿದ, ಕೊಳ್ಳುಬಾಕ ಸಂಸ್ಕೃತಿಯಿಂದ ತನ್ನನ್ನು ಬಿಡಿಸಿಕೊಂಡ ಒಲವು–ನಿಲುವುಗಳಿವೆ.

ಬಸವಣ್ಣ, ಅಕ್ಕಮಹಾದೇವಿ ಇಬ್ಬರೂ ಪರಿವರ್ತನಾವಾದಿಗಳು.

1. ನೀನೊಲಿದರೆ ಕೊರಡು ಕೊನರುವುದಯ್ಯ–ಬಸವಣ್ಣ

2. ನಿನ್ನನೊಲಿದು ಕೊಂಡಾಡಿದರೆ
ಇರುಹೆ ರುದ್ರನಾಗದೆ ಹೇಳಯ್ಯ–ಅಕ್ಕಮಹಾದೇವಿ

ಕರ್ಮ ಸಿದ್ಧಾಂತಕ್ಕೆ ಸಂಬಂಧಪಟ್ಟಂತೆ ಅಕ್ಕಮಹಾದೇವಿ ವಿಚಾರಗಳು ವೈಜ್ಞಾನಿಕ ದೃಷ್ಟಿಯಿಂದ ಕೂಡಿದೆ. ಕರ್ಮ ತತ್ವದಲ್ಲಿ ಎರಡು ಬಗೆ 1. ಸ್ವಕರ್ಮ ಫಲವಾದ 2. ಕರ್ಮಾಧ್ಯಕ್ಷ ಫಲವಾದ. ಹಿಂದೂ ಧರ್ಮದಲ್ಲಿ ಕರ್ಮಾಧ್ಯಕ್ಷನ

***ಮುತ್ತೂ ನೀರಲಾಯಿತ್ತು!***
***ವಾರಿಕಲ್ಲೂ ನೀರಲಾಯಿತ್ತು!***
***ಉಪ್ಪೂ ನೀರಲಾಯಿತ್ತು!***
***ಉಪ್ಪು ಕರಗಿತ್ತು, ವಾರಿಕಲ್ಲು ಕರಗಿತ್ತು!!***
***ಮುತ್ತು ಕರಗಿದುದನಾರೂ ಕಂಡವರಿಲ್ಲ!?***
***ಈ ಸಂಸಾರಿ ಮಾನವರು ಲಿಂಗವ ಮುಟ್ಟಿ***
***ಭವ ಭಾರಿಗಳಾದರು.***
***ನಾ ನಿಮ್ಮ ಮುಟ್ಟಿ ಕರಿಗೊಂಡೆನಯ್ಯ,***
***ಚೆನ್ನಮಲ್ಲಿಕಾರ್ಜುನಯ್ಯ! –246***

ಕಲ್ಪನೆಯಿದೆ. ಈ ಸಚರಾಚರ ಜಗತ್ತು ಈ ಶಕ್ತಿಯ ನಿಯಂತ್ರಣಕ್ಕೆ, ನಿರ್ದೇಶನಕ್ಕೆ ಒಳಪಟ್ಟಿದೆ. 'ತೇನಾ ವಿನಾ ತೃಣಮಪಿನ ಚಲತಿ' (ಅವನ ಅಪ್ಪಣೆಯಿಲ್ಲದೆ ಒಂದು ಹುಲ್ಲುಕಡ್ಡಿಯೂ ಚಲಿಸುವುದಿಲ್ಲ) ಎಂಬ ಮಾತಿನಲ್ಲಿ ಕರ್ಮಾಧ್ಯಕ್ಷ ಫಲವಾದವಿದೆ. ಅಕ್ಕಮಹಾದೇವಿ ಇದಕ್ಕೆ ವಿರುದ್ಧವೆಂಬಂತೆ, ಸ್ವಕರ್ಮಫಲವಾದವನ್ನು ಹೇಳಿದ್ದಾಳೆ.

ತೆರಣಿಯ ಹುಳು ತನ್ನ ಸ್ನೇಹದಿಂದ ಮನೆಯ
ಮಾಡಿ
ತನ್ನ ನೂಲು ತನ್ನನೇ ಸುತ್ತಿ ಸುತ್ತಿ ಸಾವ ತೆರನಂತೆ
ಮನ ಬಂದುದ ಬಯಸಿ ಬೆದ ಬೆದ
ಬೇವುತ್ತಿರುವೆನಯ್ಯ!
ಅಯ್ಯ, ಎನ್ನ ಮನದ ದುರಾಶೆಯ ಮಾಣಿಸಿ
ನಿಮ್ಮತ್ತ ತೋರಾ ಚೆನ್ನಮಲ್ಲಿಕಾರ್ಜುನ–17

ಇದು ಬಿತ್ತಿದಂತೆ ಬೆಳೆ, ಮಾಡಿದ್ದುಣ್ಣೋ ಮಹಾರಾಯ ಎಂಬ ಜನಪದ ವಿವೇಕವನ್ನು ಹೇಳುತ್ತಿದೆ.

ಅಕ್ಕಮಹಾದೇವಿಯ ದಿಗಂಬರತ್ವವು ಮಾಧ್ಯಮಗಳ ದುಷ್ಪ್ರಭಾವಕ್ಕೆ ಸಿಕ್ಕು ಬಹು ಕ್ಲಿಷ್ಟವಾಗಿದೆ. ದಿಗಂಬರಿ, ಕೇಶಾಂಬರಿ, ವಸ್ತ್ರಾಂಬರಿ ಎಂಬ ನಿರೂಪಣೆಗಳಿವೆ. ಮಹಾಭಾರತದಲ್ಲೆ ದ್ರೌಪದಿಯ ವಸ್ತ್ರಾಪಹರಣಕ್ಕೆ ದುಶ್ಯಾಸನ ಹೇಗೋ ಹಾಗೆ ಅಕ್ಕಮಹಾದೇವಿಗೆ ಕೌಶಿಕ ರಾಜನನ್ನು ನಿರ್ದೇಶಿಸಲಾಗಿದೆ. ಹರಿಹರ ಸಂಪ್ರದಾಯದಲ್ಲಿ ಅಕ್ಕಮಹಾದೇವಿಗೆ ಮದುವೆ–ಸಂಸಾರಗಳಿದ್ದರೆ, ಚಾಮರಸ ಸಂಪ್ರದಾಯದಲ್ಲಿ ಮದುವೆ–ಸಂಸಾರಗಳಿಲ್ಲ. 'ಶೂನ್ಯಸಂಪಾದನೆ'ಯಲ್ಲಂತೂ ಕಿನ್ನರಿಬೊಮ್ಮಯ್ಯನ ಯೋನಿ ಪರೀಕ್ಷಾ ಪ್ರಸಂಗವೇ ಇದೆ. ಇವುಗಳನ್ನು ಆಧರಿಸಿ ನಡೆಸುವ ಚಿಂತನೆಗಳಿಗೆ ಅರ್ಥವಿಲ್ಲ. 'ದಿಗಂಬರ' ಎಂಬ ನುಡಿಯನ್ನು ಒಂದು ರೂಪಕವಾಗಿ ತೆಗೆದುಕೊಳ್ಳುವುದು ಉಚಿತ. ಹೀಗೆ ರೂಪಕಾರ್ಥದಲ್ಲಿ ಸ್ವೀಕಾರ ಮಾಡುವಂತೆ ಅಕ್ಕನ ವಚನಗಳೇ ನಮ್ಮನ್ನು ಒತ್ತಾಯಿಸುತ್ತವೆ. 'ನಗ್ನಸತ್ಯ' ಎಂಬ ಶಬ್ದಕೂಡ ರೂಪಕವೇ! ತೆಲುಗಿನಲ್ಲಿ 'ದಿಗಂಬರ ಕವಿಗಳು' ಇದ್ದಾರೆ. ಕೃತಕವಾದ ಆವರಣಗಳು / ಆಚ್ಛಾದನಗಳಿಲ್ಲದ ಕವಿಗಳೇ ದಿಗಂಬರ ಕವಿಗಳು. ಕುವೆಂಪು ಹೇಳುವ 'ಅನಿಕೇತನ' (ಹೌಸ್‌ಲೆಸ್) ತತ್ವವನ್ನು ಕೂಡ ರೂಪಕಾರ್ಥದಲ್ಲಿ ಸ್ವೀಕರಿಸುತ್ತೇವೆ. ನನ್ನ ಪ್ರಕಾರ ಅಕ್ಕಮಹಾದೇವಿಯ ದಿಗಂಬರತ್ವವು ರೂಪಕಾರ್ಥ ಪ್ರೇರಿತವಾಗಿದೆ. ಈ ವಚನಗಳನ್ನು ಗಮನಿಸಿ:

1. ಮಂಗಳವೇ ಮಜ್ಜನವೆನಗೆ, ವಿಭೂತೆಯೇ
ಒಳಗುಂದದ
ಅರಿಸಿನವೆನಗೆ, ದಿಗಂಬರವೇ ದಿವ್ಯಾಂಬರವೆನಗೆ,
ರುದ್ರಾಕ್ಷಿಯೇ ಮೈದೊಡುಗೆಯೆನಗೆ,
ಚೆನ್ನಮಲ್ಲಿಕಾರ್ಜುನಯ್ಯನೇ ಗಂಡನೆನಗೆ.
ಆನು ಚೆನ್ನಮಲ್ಲಿಕಾರ್ಜುನಂಗೆ ಮದುವಳಿಗೆ
ಎನಗೆ ಬೇರೆ ಶೃಂಗಾರವೇಕೆ? ಹೇಳಿರವ್ವ!–78

2. ನಾಣ ಮರೆಯ ನೂಲು ಸಡಿಲೆ ನಾಚುವರು
ನೋಡಾ
ಗಂಡು–ಹೆಣ್ಣೆಂಬ ಜಾತಿ!
ಪ್ರಾಣದೊಡೆಯ ಜಗದೊಳಗೆ ಮುಳುಗುತ್ತ
ತೆರಹಿಲ್ಲದಿರಲು
ದೇವರ ಮುಂದೆ ನಾಚಲೆಡೆಯುಂಟೆ?
ಚೆನ್ನಮಲ್ಲಿಕಾರ್ಜುನಯ್ಯ ಜಗವೆಲ್ಲ ಕಣ್ಣಾಗಿ
ನೋಡುತ್ತಿರಲು
ಮುಚ್ಚಿ ಮರೆಸಬಹುದೆ ಹೇಳಯ್ಯ–184

3. ಫಲ ಒಳಗೆ ಪಕ್ವವಾಗಿಯಲ್ಲದೆ, ಹೊರಗಣ ಸಿಪ್ಪೆ
ಒಪ್ಪಗೆಡದು!
ಕಾಮನ ಮುದ್ರೆಯ ಕಂಡು ನಿಮಗೆ
ನೋವಾದೀತೆಂದು
ಆ ಭಾವದಿಂದ ಮುಚ್ಚಿದೆ! ಇದಕೆ ನೋವೇಕೆ?
ಕಾಡದಿರಣ್ಣ, ಚೆನ್ನಮಲ್ಲಿಕಾರ್ಜುನ ದೇವನ
ಒಳಗಾದವಳ–183

4...ಸ್ತ್ರೀ–ಸನ್ಯಾಸಿಯಾದಡೇನಯ್ಯ?
ಜಾಗ್ರತ್–ಸ್ವಪ್ನ–ಸುಪುಪ್ತಿಯಲ್ಲಿ ತಪ್ಪಿಲ್ಲದಿರಬೇಕು
ದಿಗಂಬರಿಯಾದ ಡೇನಯ್ಯ?
ಮನ ಬತ್ತಲೆಯಿರಬೇಕು
ಇಂತೀ...ಹೊಲಬನರಿಯದೆ ವೃಥಾಕೆಟ್ಟರು ಕಾಣಾ
ಚೆನ್ನಮಲ್ಲಿಕಾರ್ಜುನ–237

5...ಉಟ್ಟುದ ಸೆಳೆಕೊಂಡು, ಒಂದು ಅರುವೆಯನೆ
ಕೊಟ್ಟು
ಹುಟ್ಟು ಮುರಿದು ಬಟ್ಟ ಬಯಲನಿತ್ತ
ಸೃಷ್ಟಿಗೆ ಶ್ರೀಶೈಲ ಮಲ್ಲಿಕಾರ್ಜುನ–287

ಮೇಲ್ಕಂಡ ಐದು ವಚನಗಳನ್ನು ಒಳಹೊಕ್ಕು ಅರ್ಥಮಾಡಿಕೊಂಡರೆ ದಿಗಂಬರತ್ವವು ಒಂದು ರೂಪಕವೆಂಬುದು ಮನದಟ್ಟಾಗುತ್ತದೆ. ಲೋಕದ ಹುಟ್ಟನ್ನು ಮುರಿದು, ಬಟ್ಟ ಬಯಲ ನಿತ್ತ ಮರುಹುಟ್ಟು ಕುರಿತು ಅಕ್ಕಮಹಾದೇವಿ ಹೇಳುತ್ತಿರುವುದು ಗಮನಾರ್ಹ. 'ಬಾಳೇ ಬಯಲು' ಎಂಬುದನ್ನು ಸಾರುವ ದಿಗಂಬರತ್ವ ಇಲ್ಲಿದೆ. ಗೋಪಾಲಕೃಷ್ಣ ಅಡಿಗರು 'ಭೂಮಿಗೀತ'ದಲ್ಲಿ 'ಬತ್ತಲಾಗದೆ ಬಯಲು ಸಿಕ್ಕದಿಲ್ಲಿ'–ಎಂದಿರುವುದು ರೂಪಕಾರ್ಥದಲ್ಲೇ. ಮಲೆನಾಡಿನ ತೀರ್ಥಹಳ್ಳಿಯ ಬಳಿ 'ಬಾಳೇಬೈಲು' ಎಂಬ ಸ್ಥಳವಾಚಕ ಶಬ್ಧವಿದೆ. ಅನಿಕೇತನ, ದಿಗಂಬರ, ಮನಬೋಳು,

ಮನಬತ್ತಲೆ, ಮರುಹುಟ್ಟು ಮುಂತಾದ ಶಬ್ದಗಳನ್ನು ವಾಚ್ಯಾರ್ಥದಲ್ಲಿ ಸ್ವೀಕಾರ ಮಾಡದೆ ವ್ಯಂಗ್ಯಾರ್ಥದಲ್ಲಿ ಸ್ವೀಕರಿಸಬೇಕು. ಹಿಂದಿ ಸಿನೆಮಾದ ಹಾಡು; 'ಚೋಲಿ ಕೆ ಪೀಚೆ ಕ್ಯಾ ಹೈ?' ಎಂದು ಆರಂಭವಾಗುತ್ತಾ ಅಶ್ಲೀಲದ ಧ್ವನಿಯಲ್ಲಿದ್ದರೂ ಉತ್ತರ ರೂಪವಾಗಿ ಚೋಲಿಯ ಹಿಂದಿರುವ ಹೃದಯದ ಪ್ರಸ್ತಾಪ ಮಾಡುತ್ತಾ ರಸಿಕರ ನಿರೀಕ್ಷೆಯನ್ನು ಸುಳ್ಳು ಮಾಡುತ್ತದೆ. ಅಕ್ಕಮಹಾದೇವಿಯ ವಚನಗಳಲ್ಲಿರುವ ದಿವ್ಯಾಂಬರ ದಿಗಂಬರ, ನಾಣಮರೆಯ ನೂಲು, ಜಗವೆಲ್ಲ ಕಣ್ಣಾಗಿ, ಕಾಮನ ಮುದ್ರೆ, ಹುಟ್ಟು ಮುರಿದು, ಬಟ್ಟಬಯಲು ಮುಂತಾದ ನುಡಿಗಳನ್ನು ವಾಚ್ಯಾರ್ಥದಲ್ಲಿ ಅಥವಾ ಅಶ್ಲೀಲವಾಗಿ ಅರ್ಥಮಾಡಿಕೊಳ್ಳಬಾರದು. ಒಬ್ಬಂಗೆ ಕೈಕೊಟ್ಟೆ, ಒಬ್ಬಂಗೆ ಕಾಲ್ಕೊಟ್ಟೆ, ಒಬ್ಬಂಗೆ ಸೀರೆಯನ್ನು ಕೊಟ್ಟು ಬಿಟ್ಟೆ–ಎಂಬ ಒಗಟಿನ ಹಾಡು ಗೆಳೆಯನಿಗೆ ಅಶ್ಲೀಲವಾಗಿಯೇ ಕಾಣುತ್ತದೆ. ಈ ಭಾವದಿಂದಲೇ ಆತ ಪ್ರಶ್ನಿಸಿದಾಗ ಆಕೆ ಕಿಲ ಕಿಲನೆ ನಗುತ್ತಾ ತನ್ನ ಜಾಣತನವನ್ನು ಸ್ಥಾಪಿಸಿ, ಗೆಳೆಯನನ್ನು ಪೆಚ್ಚು ಮಾಡುತ್ತಾಳೆ. ಅಕ್ಕಮಹಾದೇವಿಯ ದಿಗಂಬರತ್ವದ ಬಗ್ಗೆ ಕನ್ನಡ ಸಾಹಿತ್ಯ ವಿಮರ್ಶೆಯಲ್ಲಿ ಗೆಳೆಯನ ಪೆಚ್ಚುತನ ಕಾಣುತ್ತದೆಯೇ ಹೊರತು ಗೆಳತಿಯ ಜಾಣತನ ಕಂಡು ಬರುವುದಿಲ್ಲ.

'ಭವ ಭಾರಿಗಳು' ಮತ್ತು 'ಶರಣರ' ಗುಣಾತ್ಮಕ ವ್ಯತ್ಯಾಸವನ್ನು ಸಾರುವ ಅಕ್ಕಮಹಾದೇವಿಯ ಈ ವಚನ ಗಮನಿಸಿ:

ಮುತ್ತೂ ನೀರಲಾಯಿತ್ತು!
ವಾರಿಕಲ್ಲೂ ನೀರಲಾಯಿತ್ತು!
ಉಪ್ಪೂ ನೀರಲಾಯಿತ್ತು!
ಉಪ್ಪು ಕರಗಿತ್ತು, ವಾರಿಕಲ್ಲು ಕರಗಿತ್ತು!!
ಮುತ್ತು ಕರಗಿದುದನಾರೂ ಕಂಡವರಿಲ್ಲ!?
ಈ ಸಂಸಾರಿ ಮಾನವರು ಲಿಂಗವ ಮುಟ್ಟಿ
ಭವ ಭಾರಿಗಳಾದರು.
ನಾ ನಿಮ್ಮ ಮುಟ್ಟಿ ಕರಿಗೊಂಡೆನಯ್ಯ,
ಚೆನ್ನಮಲ್ಲಿಕಾರ್ಜುನಯ್ಯ! –246

ಸಮುದ್ರದ ಒಡಲು ಮತ್ತು ಗರ್ಭದಿಂದ ಜನಿಸುವ ಉಪ್ಪು–ವಾರಿಕಲ್ಲು–ಮುತ್ತು ಏಕಮೂಲ ಸಂಬಂದವನ್ನು ಪಡೆದಿವೆ. ಆದರೆ, ಉಪ್ಪು–ವಾರಿಕಲ್ಲು ಕರಗಿ ಹೋಗಿ ಮತ್ತೆ ಸಮುದ್ರ ಜಲವೇ ಆಗುತ್ತದೆ. ಆದರೆ, ಮುತ್ತು ಕರಗಿ ಹೋಗದೆ ಮುಕ್ತಿಯನ್ನು ಪಡೆಯುತ್ತದೆ. ಆದ್ದರಿಂದಲೇ ಮುತ್ತು ಕುರಿತು ಸಂಸ್ಕೃತದಲ್ಲಿ 'ಸಮುದ್ರ ಗರ್ಭ ಶುಕ್ತಿಯ ಮುಕ್ತಾಫಲ' ಎಂದು ಕರೆಯುತ್ತಾರೆ. ಅಕ್ಕಮಹಾದೇವಿಯ ಜೀವನ ಸಮುದ್ರದ ಮುಕ್ತಾಫಲವಾದರೆ, ಸಂಸಾರ ಸಾಗರಕ್ಕೆ ಅಂಟಿಕೊಂಡವರು ಭವ ಭಾರಿಗಳಾದರು. 'ಕರಿಗೊಂಡದ್ದು' ಎಂದರೆ 'ಘನವಾದದ್ದು' ಎಂದರ್ಥ. ಅಕ್ಕನು ಸಂಸಾರ ಸಾಗರವನ್ನು ಮೀರಿದ ಘನ ವಸ್ತು ಅಥವಾ ಮುಕ್ತಾಫಲ.

ಶರಣರ ಸ್ವರೂಪದರ್ಶನವನ್ನು ಹೇಳುತ್ತಿರುವ ಅಕ್ಕಮಹಾದೇವಿಯ ವಚನಕ್ಕೆ ಸಂವಾದಿಯಾಗಿ ಬಸವಣ್ಣ ಕೂಡಾ ಬಾಳೆಕಂಬ, ಗೊನೆಬಾಳೆಯ ರೂಪಕದಲ್ಲಿ ಶರಣ ತತ್ವ ಸಾರಿದ್ದಾನೆ:

1. ಮಾಡುವ ಭಕ್ತನ ಕಾಯ ಬಾಳೆಯ
ಕಂಬದಂತಿರಬೇಕು!
ಮೆಲ್ಲ ಮೆಲ್ಲನೆ ಹೊರೆಯೆತ್ತಿ ನೋಡಿದರೆ
ಒಳಗೆ ಕೆಚ್ಚು ಇಲ್ಲದಿರಬೇಕು!
ಮೇಲಾದ ಫಲವ ನಮ್ಮವರು ಬೀಜ ಸಹಿತ
ನುಂಗಿದರು
ಎನಗಿನ್ನಾವ ಭವವಿಲ್ಲ ಕಾಣಾ, ಕೂಡಲ
ಸಂಗಮದೇವ–306

2. ಲಿಂಗವ ಪೂಜಿಸಿದ ಬಳಿಕ
ಜಂಗಮಕ್ಕಂಜಲೇಬೇಕು!
ದಕ್ಕ ನುಂಗಿದಂತೆ ಬೆರೆದುಕೊಂಡಿರಬೇಡ
(ದಕ್ಕ=ಗೂಟ)
ಬೀಗಿ ಬೆಳೆದ ಗೊನೆಬಾಳೆಯಂತೆ ಬಾಗಿಕೊಂಡಿದ್ದರೆ
ಬೇಡಿದ ಪದವಿಯನೀವ ಕೂಡಲ
ಸಂಗಮದೇವ–127

ಬಾಳೆಯ ಕಂಬದೊಳಗೆ ಬೆಳ್ಳನೆಯ ದಿಂಡು ಇರುತ್ತದೆ. ಇದನ್ನು ಅಡುಗೆಯ ಖಾದ್ಯವಾಗಿ ಕೂಡ ಬಳಸುತ್ತಾರೆ. ತುಂಬಾ ಮೃದುವಾದ ನಾರಿನ ಪದಾರ್ಥವಿದು. ಬಾಳೆಯ ಕಂಬದೊಳಗೆ ಕೆಚ್ಚು (ಚೇಗು) ಇರುವುದಿಲ್ಲ. ಮರದ ಕಾಂಡಮಧ್ಯದಲ್ಲಿ ಕಠ್ಗಗೆ ಲೋಹಸದೃಶವಾದ ಕಠಿಣ ಭಾಗವನ್ನೇ ಕೆಚ್ಚು /ಚೇಗು ಎಂದು ಕರೆಯುತ್ತಾರೆ. ಮರವು ನೆಟ್ಟಗೆ ನಿಲುವಾಗಿರಲು ಕೆಚ್ಚು ಪೂರಕವಾಗಿರುತ್ತದೆ. ನೆರೆಬಂದ ನದಿಯಲ್ಲಿರುವ ಮರವು ಎಂಥ ಕೆಚ್ಚನ್ನು ಹೊಂದಿದ್ದರೂ ನೀರಿನ ಸೆಳವಿಗೆ ಸಿಕ್ಕು ತನ್ನ ದೃಢತೆಯನ್ನು ಕಳೆದುಕೊಂಡು ಧರೆಗುರುಳಿ ಬೀಳುತ್ತದೆ. ಅದೇ ನದಿಯ ದಂಡೆಯಲ್ಲಿರುವ ಹುಲ್ಲು ಹೊಳೆಯ ಹರಿವಿಗೆ ಬಾಗಿ ನಮಿಸುತ್ತಾ ಬದುಕಿಕೊಳ್ಳುತ್ತದೆ. ಬೀಗಿ ಬೆಳೆದ ಹೊಳೆದಂಡೆಯ ಮರ ಮತ್ತು ಬಾಗಿ ಬದುಕುವ ಹೊಳೆದಂಡೆಯ ಹುಲ್ಲು ದಂಡೆಯ ಮರ ಮತ್ತು ಬಾಗಿ ಬದುಕುವ ಹೊಳೆದಂಡೆಯ ಹುಲ್ಲು ಕುಮಾರವ್ಯಾಸನಲ್ಲಿ ಕಂಡುಬರುವ ರೂಪಕಗಳು. ಬೀಗಿ ಬೆಳೆಯುವ

***ಆತ್ಮರತಿ – ತನ್ನನ್ನು ತಾನೆ ಪ್ರೀತಿಸು***
***ಆತ್ಮನಿಂದೆ – ತನ್ನನ್ನು ತಾನೆ ನಿಂದಿಸು***
***ಆತ್ಮಸ್ತುತಿ – ತನ್ನನ್ನು ತಾನೆ ಹೊಗಳು***
***ಆತ್ಮನಾಶ – ತನ್ನ ದುಶ್ಚಟಗಳ ಪ್ರತಿಫಲ***
***ಆತ್ಮಾಹುತಿ – ನಂಬಿದ ಸಿದ್ಧಾಂತಕ್ಕಾಗಿ ಬಲಿದಾನ***
***ಆತ್ಮಹತ್ಯೆ – ಪಲಾಯನವಾದ***

ಬಾಳೆ ಕಂಬದ ರೂಪಕದ ಮೂಲಕ ಬಸವಣ್ಣ ಅಹಂಕಾರವಿಲ್ಲದ ಶರಣರ ಅಂತರಂಗವನ್ನು ಅನಾವರಣಗೊಳಿಸಿದ್ದಾನೆ. ಈ ಬಾಳೆಯ ಕಂಬದಿಂದ ಮೂಡಿ ಬರುವ ಗೊನೆಬಾಳೆಯ ಫಲ ನೆಲದೆಡೆಗೆ ಬಾಗುತ್ತದೆ. ಈ ವಚನದಲ್ಲಿ ಬಸವಣ್ಣನು ವರ್ಟಿಕಲ್ ರಚನೆಗಳಿಗೂ ಹಾರಿಜಾಂಟಲ್ ರಚನೆಗಳಿಗೂ ಇರುವ ವ್ಯತ್ಯಾಸವನ್ನು ಹೇಳುತ್ತಿದ್ದಾನೆ. ಗಗನಚುಂಬಿ ಕಟ್ಟಡಗಳು ಮತ್ತು ಗಗನಚುಂಬಿ ವ್ಯಕ್ತಿತ್ವಗಳೆಲ್ಲ ವರ್ಟಿಕಲ್ ರಚನೆಗಳೇ! ನೆಲದಾಳದ ಕಟ್ಟಡಗಳು ಮತ್ತು ನೆಲದಾಳದ ವ್ಯಕ್ತಿತ್ವಗಳು ಹಾರಿಜಾಂಟಲ್ ಆದವುಗಳು. 15ನೇ ಶತಮಾನದಲ್ಲಿ ನಿರ್ಮಾಣ ಮಾಡಿರುವ ನೆಲದಾಳದ ಅರಮನೆ ಬಾವಿಯ 360ಡಿಗ್ರಿಯ ಬಹುಮಹಡಿಗಳ ಕಟ್ಟಡದ ಚಿತ್ರವೊಂದು ಹಿಂದೂ ಪತ್ರಿಕೆಯಲ್ಲಿ Ancient wisdom ಹೆಸರಿನ ಲೇಖನವೊಂದರಲ್ಲಿ ಪ್ರಕಟವಾಗಿತ್ತು. ಈಗ 21ನೇ ಶತಮಾನದಲ್ಲಿ ನಿರ್ಮಾಣ ಮಾಡುತ್ತಿರುವ ಗಗನಚುಂಬಿಯಾದ 90ಡಿಗ್ರಿಯ ಬಹುಮಹಡಿಗಳ ಕಟ್ಟಡದ ಚಿತ್ರವೂ ಆ ಲೇಖನದಲ್ಲಿತ್ತು. 90ಡಿಗ್ರಿಯ ಗಗನಚುಂಬಿ ಕಟ್ಟಡಗಳು ಪರಿಸರಮಾಲಿನ್ಯಕ್ಕೆ ನಿದರ್ಶನವಾಗಿದ್ದರೆ, 360 ಡಿಗ್ರಿಯ ನೆಲದಾಳದ ಕಟ್ಟಡಗಳು ಮಳೆನೀರು ಕೊಯ್ಲಿಗೆ ನಿದರ್ಶನವಾಗಿದ್ದವು. ಕೇವಲ 500–600ವರ್ಷಗಳ ಅಂತರದಲ್ಲಿ ನಮ್ಮ ನಗರ ನಿರ್ಮಾಣದ ವಾಸ್ತುವೇ ಬದಲಾಗಿ ಹೋಗಿದೆ. ಈ ಮಾತು ಮನುಷ್ಯರ ವ್ಯಕ್ತಿತ್ವಗಳಿಗೂ ಅನ್ವಯಿಸುತ್ತದೆ. ಅಂತರ್ಜಲ–ಭೂಜಲ–ಮೇಘಜಲಗಳ ನಿಸರ್ಗ ಸಹಜ ಸಮತೋಲನವನ್ನು ಕಳೆದುಕೊಂಡಿರುವ ನಮಗೆ, ನೀರು ಬೇಕಾದರೆ ಮಳೆನೀರನ್ನು ಹಿಡಿದು ಸಂಗ್ರಹಿಸಿಟ್ಟುಕೊಳ್ಳುವುದೊಂದೇ ಉಳಿದಿರುವ ಮಾರ್ಗವಾಗಿದೆ. ನದಿಯ ತಿರುವು ಯೋಜನೆಗಳು, ನದಿಯ ಎತ್ತುಗಡೆ ಯೋಜನೆಗಳು ಮುಂತಾದುವೆಲ್ಲ ಕನ್ನಡಿಯ ಗಂಟುಗಳಾಗಿಯೇ ಇರುತ್ತವೆ.

ಧರ್ಮ ಮತ್ತು ಸಮಾಜವನ್ನು ದಯಾಮೂಲ ಸಂಬಂಧದಿಂದ ವ್ಯಾಖ್ಯಾನಿಸಿರುವ ಬಸವಣ್ಣನ ಸುಪ್ರಸಿದ್ಧ ವಚನವಿದು; "ದಯವಿಲ್ಲದ ಧರ್ಮವದಾವುದಯ್ಯ?"–170. ಈ ವಚನದಲ್ಲಿ ಬಸವಣ್ಣ ಮಾನವ ದಯಾಮೃತಕ್ಕೆ (ಮಿಲ್ಕ್ ಆಫ್ ಹ್ಯುಮನ್ ಕೈಂಡ್‌ನೆಸ್) ವಿಶೇಷ ಆದ್ಯತೆ ಕೊಟ್ಟಿದ್ದಾನೆ. ಗೊನೆಬಾಳೆಯ ರೂಪಕದಲ್ಲಿ ಫಲ ಕೊಡುವ ಕಾಲಕ್ಕೆ ನೆಲದೆಡೆಗೆ ಬಾಗುವುದನ್ನು ಸಾರಲಾಗಿದೆ. ಇದೇ ನೆಲ ಮುಟ್ಟುವ ಪ್ರೀತಿ (ಡೌನ್‌ಟು ಅರ್ತ್). ಇದನ್ನು ಬಿಂಬಿಸುವ ಮತ್ತೊಂದು ವಚನವಿದು;

ಭಕ್ತಿಯೆಂಬ ಪೃಥ್ವಿಯ ಮೇಲೆ,
ಗುರುವೆಂಬ ಬೀಜವಂಕುರಿಸಿ,
ಲಿಂಗವೆಂಬ ಎಲೆಯಾಯಿತ್ತು,
ವಿಚಾರವೆಂಬ ಹೂವಾಯಿತ್ತು,
ಆಚಾರವೆಂಬ ಕಾಯಾಯಿತ್ತು,
ನಿಷ್ಪತ್ತಿಯೆಂಬ ಹಣ್ಣಾಯಿತ್ತು,
ನಿಷ್ಪತ್ತಿಯೆಂಬ ಹಣ್ಣು
ತೊಟ್ಟು ಬಿಟ್ಟು ಕಳಚಿ ಬೀಳುವಲ್ಲಿ
ಕೂಡಲ ಸಂಗಮದೇವನು
ತನಗೆ ಬೇಕೆಂದೆತ್ತಿ ಕೊಂಡನು–308

ಬುದ್ಧಗುರುವಿನ ಪ್ರಾಚೀನವಾದ ಮೂರ್ತಿಗಳಲ್ಲಿ ಪದ್ಮಾಸನದಲ್ಲಿ ಕುಳಿತುಕೊಂಡು ಬಲಗೈಯ ನಡುಬೆರಳನ್ನು ಧರೆಗೆ ತಾಕಿಸಿರುವ ಸ್ಪರ್ಶಮುದ್ರೆಯೂ ಒಂದು. ಎಡಗೈಯಲ್ಲಿರುವ (ಸುಜಾತ ಎಂಬ ಗೃಹಿಣಿಯಿತ್ತ) ಪಾಯಸದ ಪಾತ್ರೆ ಮಾನವ ದಯಾಮೃತಕ್ಕೆ ಸಂಕೇತವಾಗದ್ದರೆ, ಬಲಗೈಯ ಸ್ಪರ್ಶಮುದ್ರೆ ನೆಲಮುಟ್ಟುವ ಪ್ರೀತಿಯಾಗಿದೆ.

ಈ ಬುದ್ಧತತ್ವವನ್ನೇ ಬಸವಣ್ಣ ತನ್ನ ವಚನಗಳಲ್ಲಿ ಎತ್ತಿ ಹಿಡಿದಿದ್ದಾನೆ. ಕನ್ನಡ ಜನಪದರ ಭೂಮಿತಾಯಿ ತತ್ವದಲ್ಲೂ ಮಾನವ ದಯಾಮೃತ ಮತ್ತು ನೆಲಮುಟ್ಟುವ ಪ್ರೀತಿಯಿದೆ!

ಬೆಳಗಾಗ ನಾನೆದ್ದು ಯಾರ್‍ಯಾರ ನೆನೆಯಾಲಿ?
ಎಳ್ಳುಜೀರಿಗೆ ಬೆಳೆಯೋಳ ಭೂಮತಾಯ
ಎದ್ದೊಂದು ಗಳಿಗೆ ನೆನೆದೇನು.

ಪ್ರಾಚೀನ ಯುಗದಲ್ಲಿ ಬುದ್ಧಗುರು ಮತ್ತು ಮಧ್ಯ ಯುಗದಲ್ಲಿ ಶರಣರು ಹಾಗೂ ಯುಗಯಾತ್ರೆಯಾಗಿ ಕನ್ನಡ ಜನಪದರು ಮಾನವ ದಯಾಮೃತ ಮತ್ತು ನೆಲಮುಟ್ಟುವ ಪ್ರೀತಿಯನ್ನು ಸಾರುತ್ತಾ ಬಂದಿದ್ದಾರೆ.

ಕನ್ನಡದಲ್ಲಿ ಬಳಕೆಯಲ್ಲಿರುವ ಆತ್ಮ ಸಂಬಂಧಿ ಶಬ್ದಗಳ ಸರಣಿಯನ್ನು ಅರ್ಥ ಸಹಿತ ಕೆಳಗೆ ಕೊಡಲಾಗಿದೆ;

ಆತ್ಮರತಿ – ತನ್ನನ್ನು ತಾನೆ ಪ್ರೀತಿಸು
ಆತ್ಮನಿಂದೆ – ತನ್ನನ್ನು ತಾನೆ ನಿಂದಿಸು
ಆತ್ಮಸ್ತುತಿ – ತನ್ನನ್ನು ತಾನೆ ಹೊಗಳು
ಆತ್ಮನಾಶ – ತನ್ನ ದುಶ್ಚಟಗಳ ಪ್ರತಿಫಲ
ಆತ್ಮಾಹುತಿ – ನಂಬಿದ ಸಿದ್ಧಾಂತಕ್ಕಾಗಿ ಬಲಿದಾನ
ಆತ್ಮಹತ್ಯೆ – ಪಲಾಯನವಾದ

ಶರಣರ ವಚನಗಳಲ್ಲಿ ಮೇಲ್ಕಂಡ ನಕಾರಾತ್ಮಕ ಭಾವಗಳು ಕಂಡು ಬರುವುದಿಲ್ಲ. ಬದಲಿಗೆ, ಆತ್ಮವಿಶ್ವಾಸ–ಆತ್ಮಸ್ಥೈರ್ಯ–ಆತ್ಮವಿಮರ್ಶೆ–ಆತ್ಮಜ್ಞಾನದ ಸಕಾರಾತ್ಮಕ ಭಾವಗಳಿವೆ. ಬಸವಣ್ಣನ ವಚನಗಳಲ್ಲಿರುವ ಆತ್ಮ ವಿಮರ್ಶೆಯು ಆತ್ಮಜ್ಞಾನದ ಮಾರ್ಗದರ್ಶಿ! ಅಕ್ಕಮಹಾದೇವಿಯ ವಚನಗಳಲ್ಲಿರುವ ಅಂತಃಕರಣವು ಆತ್ಮಜ್ಞಾನ ಪ್ರದಾಯಕ! ಅಲ್ಲಮ ಪ್ರಭುವಿನ ವಚನಗಳಲ್ಲಿರುವ ಧ್ವಂಸ ಕಾರ್ಯವು ಅಜ್ಞಾನದ ಕೇಡು ಮತ್ತು ಆತ್ಮಜ್ಞಾನದ ಬೀಡು. ಬಸವ ಜಯಂತಿ ಮತ್ತು ಅಕ್ಕಮಹಾದೇವಿ ಜಯಂತಿಯ ಈ ಸಮಾರಂಭದಲ್ಲಿ ಅಲ್ಲಮಪ್ರಭು ಜಯಂತಿಯನ್ನೂ ಸೇರಿಸಿ, ಶರಣ ಸಾಹಿತ್ಯದಲ್ಲಿರುವ ಸದೃಢವಾದ ತ್ರಿಕೋನ ಸಂಬಂಧವನ್ನಿಲ್ಲಿ ಪ್ರಸ್ತುತಪಡಿಸಿದ್ದೇನೆ. ಅ




# ಪಾತಾಳರಿಗೆ ಯಕ್ಷಕಲಾನಿಧಿ

## ಕೇಂದ್ರದಲ್ಲಿ ಜಾನಪದ ಅಕಾಡೆಮಿ ಸ್ಥಾಪನೆಗೆ ಒತ್ತಾಯ

ವೈವಿಧ್ಯಮಯ ಕಲೆಗಳಿರುವ ವಿಶಾಲವಾದ ಭಾರತದಲ್ಲಿ ಜಾನಪದ ಕಲೆಗೊಂದು ಪ್ರತ್ಯೇಕ ಅಕಾಡೆಮಿಯನ್ನು ಸ್ಥಾಪಿಸಬೇಕೆಂದು ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದ ಪ್ರಾಧ್ಯಾಪಕ, ಸುಪ್ರಸಿದ್ಧ ಜಾನಪದ ತಜ್ಞ ಡಾ. ಪುರುಷೋತ್ತಮ ಬಿಳಿಮಲೆಯವರು ಒತ್ತಾಯಿಸಿದರು. ಅಕಾಡೆಮಿ ಆಫ್ ತೆಂಕುತಿಟ್ಟು ಯಕ್ಷಗಾನವು ನವದೆಹಲಿಯಲ್ಲಿ ಇದೇ ಜೂನ್ 12ರಂದು ನಡೆಸಿದ ಸಮಾರಂಭದಲ್ಲಿ ಹಿರಿಯ ಯಕ್ಷಗಾನ ಕಲಾವಿದ ಪಾತಾಳ ವೆಂಕಟ್ರಮಣ ಭಟ್ಟರಿಗೆ 'ಯಕ್ಷ ಕಲಾನಿಧಿ' ಪ್ರಶಸ್ತಿ ನೀಡಿ ಸನ್ಮಾನಿಸಿದ ಸಂದರ್ಭದಲ್ಲಿ ಅವರು ಪ್ರಸ್ತಾವಿಕ ಭಾಷಣ ಮಾಡುತ್ತ ಈ ಬೇಡಿಕೆಯನ್ನು ಮುಂದಿಟ್ಟರು.

ಕೇಂದ್ರ ಸಂಸ್ಕೃತಿ ಖಾತೆಯ ಅಡಿಯಲ್ಲಿ ಬರುವ ಸಾಂಸ್ಕೃತಿಕ ಸಂಪನ್ಮೂಲ ತರಬೇತಿ ಕೇಂದ್ರದ ನಿರ್ದೇಶಕರಾಗಿರುವ ಶ್ರೀ ಗಿರೀಶ್ ಜೋಶಿಯವರು ಅಧ್ಯಕ್ಷತೆ ವಹಿಸಿ ಮಾತಾಡುತ್ತಾ ಸರ್‌ದಾರ್ ಝಾಫ್ರಿಯವರ ಕವಿತೆಯನ್ನು ಆಧರಿಸಿ ವ್ಯಾವಹಾರಿಕ ಮತ್ತು ಆಧ್ಯಾತ್ಮಿಕ ಚಿಂತನೆಯ ಹಿನ್ನೆಲೆಯಲ್ಲಿ ಹೇಗೆ ಸಮಯ ಕಳೆದಂತೆ ವಿಷಯಗಳು ನೆನಪಿನ ಅಂಗಳದಿಂದ ದೂರ ಸಾಗುತ್ತವೆ ಎಂಬುದನ್ನು ವಿವರಿಸಿ, ಹಿರಿಯ ಕಲಾವಿದರನ್ನು ಸನ್ಮಾನಿಸುವ ಅಕಾಡೆಮಿ ಆಫ್ ತೆಂಕುತಿಟ್ಟು ಯಕ್ಷಗಾನದ ಪ್ರಯತ್ನವನ್ನು ಶ್ಲಾಘಿಸಿದರು. ಬಿಳಿಮಲೆಯವರ ಕೋರಿಕೆ ನ್ಯಾಯವಾದುದು ಎಂದ ಜೋಶಿಯವರು, ಸಿಸಿಆರ್‌ಟಿ 60ಕ್ಕೂ ಹೆಚ್ಚು ಯಕ್ಷಗಾನ ಕಲಿಯುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡುತ್ತಿದೆ ಎಂದು ತಿಳಿಸಿದರು.

ಈ ಸಂಮಾನ ಸಮಾರಂಭಕ್ಕೆ ಕೇಂದ್ರ ಕಾನೂನು ಖಾತೆಯ ಜಂಟಿ ಕಾರ್ಯದರ್ಶಿ ಹಾಗೂ ಯಕ್ಷಗಾನದ ಕಲಾವಿದರು ಮತ್ತು ಕಲೆಯನ್ನು ಆಳವಾಗಿ ಅಭ್ಯಸಿಸಿದ ಶ್ರೀ ಉದಯ್ ಕುಮಾರ್ ಶೆಟ್ಟಿಯವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಶ್ರೀ ಉದಯ ಕುಮಾರ್ ಶೆಟ್ಟರು, ಯಕ್ಷಗಾನ ಕಲಿಕೆಯನ್ನು ಕರ್ನಾಟಕದಾದ್ಯಂತ ಖಡ್ಡಾಯವಾಗಿಸಬೇಕೆಂದು ಒತ್ತಾಯಿಸಿದರಲ್ಲದೆ, ಯಕ್ಷಗಾನ, ವ್ಯಕ್ತಿಯ ಸರ್ವತೋಮುಖ ವಿಕಸನಕ್ಕೆ ಹೇಗೆ ಕಾರಣವಾಗುತ್ತದೆ ಎಂಬುದನ್ನು ವಿವರಿಸಿದರು. 'ನಾನು ನಿಮ್ಮ ಮುಂದೆ ನಿಲ್ಲುವುದಕ್ಕೆ ಯಕ್ಷಗಾನವೇ ಕಾರಣ' ಎಂದು. ತಮ್ಮ ಬೆಳವಣಿಗೆಗಾಗಿ ಯಕ್ಷಗಾನಕ್ಕೆ ಶ್ರೇಯ ಸಲ್ಲಿಸಿದ ಶ್ರೀ ಶೆಟ್ಟರು, ಯಕ್ಷಗಾನಕ್ಕೆ ಪಾತಾಳರ ಕೊಡುಗೆಯನ್ನು ನೆನಪಿಸಿಕೊಂಡರು.

ಶಾಲು, ಹಾರ, ಸ್ಮರಣಿಕೆ, ಸಂಮಾನ ಫಲಕ, ಫಲತಾಂಬೂಲ ಹಾಗೂ 20 ಸಾವಿರ ರೂಪಾಯಿಗಳ ಸಂಮಾನ ಧನ ನೀಡಿದ್ದು ಮಾತ್ರವಲ್ಲದೆ ಇದೇ ಸಂದರ್ಭದಲ್ಲಿ ಪಾತಾಳ ವೆಂಕಟ್ರಮಣ ಭಟ್ಟರ ಕುರಿತಾದ 20 ನಿಮಿಷಗಳ ಸಾಕ್ಷ್ಯಚಿತ್ರವನ್ನು ಸಹ ತೋರಿಸಲಾಯಿತು. ಪ್ರಾರಂಭದಲ್ಲಿ ಸ್ವಾಗತಿಸಿದ ಅಕಾಡೆಮಿ ಆಫ್ ತೆಂಕುತಿಟ್ಟು ಯಕ್ಷಗಾನದ ನಿರ್ದೇಶಕಿ ವಿದ್ಯಾ ಕೋಳ್ಯೂರು ಅವರು, ಅತಿಥಿಗಳನ್ನು ಸಭೆಗೆ ಪರಿಚಯಿಸಿ, ಸ್ವಾಗತಿಸಿದರು. ಅಕಾಡೆಮಿಯ ನಿರ್ದೇಶಕ ಸರವು ಕೃಷ್ಣಭಟ್ ಕಾರ್ಯಕ್ರಮವನ್ನು ನಿರೂಪಿಸಿ ವಂದಿಸಿದರು.

*ಸರವು ಕೃಷ್ಣ ಭಟ್*

### ದೆಹಲಿ ಕನ್ನಡಿಗರ ನೆನಪಿನಾಳದಲ್ಲಿ ಸದಾ ಉಳಿಯುವ ಭಾವಪೂರ್ಣ ತಾಳಮದ್ದಳೆ: ಕರ್ಣಭೇದನ

ಕರ್ನಾಟಕದಲ್ಲೂ ತಾನು ಇಂತಹ ತಾಳಮದ್ದಳೆ ಕೇಳದ್ದಿಲ್ಲವೆಂಬ ಹಿರಿಯ ಪಾತಾಳರ ಉದ್ಗಾರ ಆಧಾರ ರಹಿತವಾದುದಲ್ಲ. ಸಾಸಿವೆ ಕಾಳು ಬಿದ್ದರೂ ಕೇಳಿಸುವಷ್ಟು ಮೌನ. ತುಂಬಿದ ಸಭೆ. ಸುಮಾರು 4ಗಂಟೆಗಳ ಕಾಲ ನಡೆದ ತಾಳಮದ್ದಳೆ. ದೆಹಲಿ ಕನ್ನಡಿಗರಿಗೆ ಎಲ್ಲಿಲ್ಲದ ರಸದೌತಣ. ಗಿರೀಶ್ ರೈ ಕಕ್ಕೆಪದವು ಅವರ ಭಾಗವತಿಕೆಗೆ, ಮದ್ದಳೆಯ ಭಾವ ನೀಡಿದ್ದು ಕೃಷ್ಣ ಪ್ರಕಾಶ್ ಉಳಿತ್ತಾಯರು. ಪ್ರಶಾಂತ ಶೆಟ್ಟಿ ವಗೆನಾಡು ಚೆಂಡೆಯಲ್ಲಿ ಸಹಕರಿಸಿದರು. ಕರ್ನಾಟಕ ಮತ್ತು ಯಕ್ಷಗಾನದಿಂದ ದಶಕಗಳಿಂದ ದೂರವಿದ್ದರೂ, ಶ್ರೀಕೃಷ್ಣನಾಗಿ ಡಾ. ಪುರುಷೋತ್ತಮ ಬಿಳಿಮಲೆಯವರು ಸಮರ್ಥವಾಗಿಯೇ ಪಾತ್ರವನ್ನು ಮಂಡಿಸಿದರು. ವಾಸುದೇವ ರಂಗಾಭಟ್ ಅವರ ಕರ್ಣನ ಪಾತ್ರವನ್ನು ಕೇಳಿಯೇ ಅನುಭವಿಸಬೇಕು. ಪ್ರಾಯಶಃ ಈ ರೀತಿಯ ಪ್ರಸ್ತುತೀಕರಣವನ್ನು ದೆಹಲಿಯ ಯಕ್ಷಗಾನ ಪ್ರಿಯರು ಯಾವತ್ತೂ ಕೇಳಿರಲಿಲ್ಲ. ಭಾವನೆ, ಸರಳ ಶಬ್ಧಗಳು ಹಾಗೂ ತಿವಿಯುವ




ಮೌನ–ಇವು ಮೂರು ತಾಳಮದ್ದಳೆಯಲ್ಲಿ ಪ್ರೇಕ್ಷಕರನ್ನು ಹೇಗೆ ಹಿಡಿದಿಡಬಲ್ಲವು ಎಂಬುದಕ್ಕೆ ವಾಸುದೇವ ರಂಗಾಭಟ್ ಮತ್ತು ವಿದ್ಯಾ ಕೋಳ್ಯೂರು ಅವರ ಸಂಭಾಷಣೆ ನಿದರ್ಶನವಾಯಿತು. ಕುಂತಿಯಾಗಿ ವಿದ್ಯಾಕೋಳ್ಯೂರರು ಭಾವಪೂರ್ಣವಾಗಿ ಪಾತ್ರ ಪ್ರಸ್ತುತೀಕರಣ ಮಾಡುವುದರೊಂದಿಗೆ ಯಕ್ಷಗಾನ ತಾಳಮದ್ದಲೆ ವಲಯಕ್ಕೂ ಮರುಪ್ರವೇಶ ಮಾಡಿದ್ದಾರೆ. ರಾತ್ರೆ ಭೋಜನದೊಂದಿಗೆ ದೆಹಲಿಯಲ್ಲಿ ಅರ್ಥಪೂರ್ಣ ಕಾರ್ಯಕ್ರಮವೊಂದು ಮುಗಿಯಿತು.

# ಬದುಕನ್ನೇ ಯಕ್ಷಗಾನಕ್ಕೆ ಅರ್ಪಿಸಿದ ಪಾತಾಳರು

*ಭಾರತ ಸರಕಾರದ ಕಾನೂನು ಮತ್ತು ನ್ಯಾಯಾಂಗ ಸಚಿವಾಲಯದಲ್ಲಿ ಜತೆ ಕಾರ್ಯದರ್ಶಿಯಾಗಿರುವ **ಶ್ರೀ ಉದಯ ಕುಮಾರ್ ಶೆಟ್ಟಿ** ಅವರು ಅಕಾಡೆಮಿ ಆಫ್ ತೆಂಕು ತಿಟ್ಟು ಯಕ್ಷಗಾನದ ವತಿಯಿಂದ **ಖ್ಯಾತ ಯಕ್ಷಗಾನ ಸ್ತ್ರೀ ಪಾತ್ರಧಾರಿ ಪಾತಾಳ ವೆಂಕಟರಮಣ ಭಟ್ಟರಿಗೆ** ಯಕ್ಷಗಾನ ಕಲಾನಿಧಿ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾಡಿದ ಭಾಷಣದ ಆಯ್ದ ಭಾಗ ಅಭಿಮತದ ಓದುಗರಿಗಾಗಿ.*

ನಾವು ಇಂದು ಇಲ್ಲಿ ಅಭಿನಂದಿಸುವ ವ್ಯಕ್ತಿ ಪಾತಾಳ ವೆಂಕಟರಮಣ ಭಟ್ ಅವರ ಹೆಸರಿನಲ್ಲಿ ಮೂರು ಪದಗಳಿವೆ. ಈ ಮೂರೂ ಪದಗಳು ಮಹತ್ವದ್ದು. ಪಾತಾಳ ಎನ್ನುವುದು ಇನ್ನೊಂದು ಲೋಕ. ಪಾತಾಳದಲ್ಲಿರುವವರ ವಿದ್ವತ್ತು ಮತ್ತು ಶಕ್ತಿಯನ್ನು ಅಳೆಯಲಾಗದು. ವೆಂಕಟರಮಣ ಎನ್ನುವುದು ತಿರುಪತಿಯ ದೇವರ ಹೆಸರು. ಸರ್ವಶಕ್ತ, ಸರ್ವಜ್ಞಾನಿ ಮತ್ತು ಸರ್ವವ್ಯಾಪಿಯಾದ ಭಗವಂತನ ಹೆಸರು. ಭಗವಂತನ ಹೆಸರನ್ನು ನಾವೆಲ್ಲರೂ ಉಚ್ಚರಿಸುತ್ತಲೇ ಇರುತ್ತೇವೆ. ನಾನು ಕೂಡಾ ತಿರುಪತಿ ವೆಂಕಟ ವೇಣು ನಾದ ನಮೋನಮಃ ಎಂದು ನುಡಿಯುತ್ತಲೇ ಇರುತ್ತೇನೆ. ಇವರ ಹೆಸರಿನ ಮೂರನೇ ಪದ ಭಟ್ಟ ಎಂದು. ಕರ್ನಾಟಕದಲ್ಲಿ ಬ್ರಾಹ್ಮಣರನ್ನು ಭಟ್ಟ ಎಂದು ಕರೆಯುತ್ತೇವೆ. ವೇದ ಶಾಸ್ತ್ರಗಳನ್ನು ಅಭ್ಯಸಿಸಿರುವ ಬ್ರಾಹ್ಮಣರ ಬಗ್ಗೆ ಸಮಾಜದಲ್ಲಿ ಎಲ್ಲರಿಗೂ ಗೌರವ ಮತ್ತು ಆದರ. ನಾವು ಕೂಡಾ ಶಾಲೆಗೆ ಹೋಗುವ ಸಮಯದಿಂದಲೇ ನಮ್ಮ ಸಹಪಾಠಿಯಾಗಲೀ ಅಥವಾ ಊರಿನ ಬ್ರಾಹ್ಮಣ ಹುಡುಗರಾಗಲೀ ಅವರು ನಮ್ಮಿಂದ ಕಿರಿಯರಾಗಿದ್ದರೂ ಗೌರವದಿಂದ ಬಹುವಚನದಿಂದಲೇ ಅವರ ಜತೆ ವ್ಯವಹರಿಸುವುದು. ಒಟ್ಟಿನಲ್ಲಿ ಪಾತಾಳ ವೆಂಕಟರಮಣ ಭಟ್ ಅವರು ತಮ್ಮ ಹೆಸರಿನಲ್ಲಿಯೇ ಅತ್ಯಂತ ಅದ್ಭುತ ವ್ಯಕ್ತಿ ಎಂದು ಎದ್ದು ಕಾಣುತ್ತಾರೆ.

ಪಾತಾಳ ವೆಂಕಟರಮಣ ಭಟ್ ಅವರು ತಮ್ಮ ಬದುಕನ್ನು ಕರಾವಳಿ ಕರ್ನಾಟಕದ ಅತ್ಯಂತ ಜನಪ್ರಿಯ ಜನಪದ ಕಲೆಯಾದ ಯಕ್ಷಗಾನಕ್ಕೆ ಅರ್ಪಿಸಿದ್ದಾರೆ. ದೃಶ್ಯ ಮತ್ತು ಶ್ರಾವ್ಯ ಎರಡೂ ಮಾಧ್ಯಮಗಳಲ್ಲೂ ಇತರ ಎಲ್ಲಾ ಸಂಗೀತ ಮತ್ತು ನೃತ್ಯ ಪ್ರಕಾರಗಳಿಗಿಂತ ಭಿನ್ನವಾಗಿರುವ ಯಕ್ಷಗಾನದಲ್ಲಿ ಭಾಗವತರು ಹಿಮ್ಮೇಳದಲ್ಲಿ ಹಾಡಿದ ನಂತರ ವೇಷಧಾರಿಗಳು ಸಂಭಾಷಣೆ ಅಥವಾ ಅರ್ಥವನ್ನು ತಮ್ಮದೇ ಭಾಷಾ ಮತ್ತು ಪಾಂಡಿತ್ಯದ ಮೇಲೆ ಮಾಡುತ್ತಾರೆ.

ನಾವು ಶಾಲಾ ದಿನಗಳಲ್ಲಿ ಯಕ್ಷಗಾನ ನೋಡಲು ಹೋಗುತ್ತಿದ್ದೆವು. ಮೇಳಗಳು ಟೆಂಟ್ ಹಾಕಿ ಟಿಕೇಟು ಇಟ್ಟು ಆಟ ಆಡಿಸುತ್ತಿದ್ದರು. ನಾವು ಮಕ್ಕಳು ಒಂದು ರೂಪಾಯಿ ಟಿಕೇಟು ತೆಗೆದುಕೊಂಡು ನೆಲದ ಮೇಲೆ ಚಾಪೆ ಹಾಸಿ ಆಟ ನೋಡುತ್ತಿದ್ದೆವು. ನೆಲದಲ್ಲಿ ಕುಳಿತ ನಮಗೆ ಕಲ್ಲು ಮುಳ್ಳುಗಳು ಚುಚ್ಚುತ್ತಿದ್ದವು. ನಮ್ಮ ಹಿರಿಯರು ಹತ್ತು ರೂಪಾಯಿ ಟಿಕೇಟು ತೆಗೆದು ಕುರ್ಚಿಯಲ್ಲಿ ಕುಳಿತು ಆಟ ನೋಡುತ್ತಿದ್ದರು. ನಮಗೆ ಒಂದು ರೂಪಾಯಿ ಟಿಕೇಟಿಗೆ ಮತ್ತು ಒಂದು ರೂಪಾಯಿ ಕಡ್ಲೆಕಾಯಿಗೆ ಸಿಗುತ್ತಿತ್ತು. ಎಷ್ಟೆಲ್ಲ ತೊಂದರೆಗಳಿದ್ದರೂ ಯಾರೂ ಯಕ್ಷಗಾನ ನೋಡುವುದನ್ನು ಬಿಡುತ್ತಿರಲಿಲ್ಲ. ಅದು ನಮ್ಮನ್ನು ಅಷ್ಟೊಂದು ರೀತಿಯಲ್ಲಿ ಆಕರ್ಷಿಸುತ್ತಿತ್ತು. ನಾನಿಂದು ಏನಾದರೂ ಆಗಿದ್ದರೆ ಅದಕ್ಕೆ ಯಕ್ಷಗಾನದ ಕೊಡುಗೆ ಇದೆಯೆಂದೇ ನಂಬಿದ್ದೇನೆ. ನಾನು ಕೂಡಾ ಯಕ್ಷಗಾನದ ಭಾಗವತಿಕೆಯನ್ನು ಮಾಡಬಲ್ಲೆ ಮತ್ತು ಕುಣಿಯಬಲ್ಲೆ ಕೂಡಾ.

ನಮಗೆ ಯಕ್ಷಗಾನವೆಂದರೆ ರಾಮಾಯಣ ಮತ್ತು ಮಹಾಭಾರತದ ಕತೆಗಳ ಆಖ್ಯಾನಗಳು. ಎಲ್ಲದರಲ್ಲೂ ಧರ್ಮದ ವಿಜಯವನ್ನು ಸಾರಿ ಹೇಳುತ್ತದೆ. ಧರ್ಮವೆಂಬುದೇ ಸತ್ಯ. ಧರ್ಮವು ನಮ್ಮ ಬದುಕಿನ ತಳಪಾಯ. ನಾವು ಭಗವಂತನು ಆಡಿಸುವ ಗೊಂಬೆಗಳು. ನಾವು ನಮ್ಮ ಅಹಂಕಾರದಿಂದ ದೂರವಿರಬೇಕು. ಭೌತಿಕ ಬದುಕಿಗಿಂತ ಹೆಚ್ಚು ಧಾರ್ಮಿಕ ಬದುಕನ್ನು ಅಳವಡಿಸಬೇಕು. ಆದರೆ, ದುರಾದೃಷ್ಟವಶಾತ್, ನಮ್ಮ ಯುವ ತಲೆಮಾರು ಇದೆಲ್ಲವನ್ನು ಮರೆತು ಇನ್ನಾವುದೋ ವಿಚಾರಗಳತ್ತ ಮುನ್ನಡೆಯುತ್ತಿದೆ.

ನನಗೆ ಯಕ್ಷಗಾನದ ಕುಣಿತ ಮತ್ತು ಹಾಡುಗಾರಿಕೆ ಗೊತ್ತಿರುವುದರಿಂದ ಪಾತಾಳ ವೆಂಕಟರಮಣ ಭಟ್ಟರ ಗುಣ ಮತ್ತು ಅನುಭವಗಳ ಕುರಿತು ಚೆನ್ನಾಗಿ ಗೊತ್ತಿದೆ. ಅವರು ಯಕ್ಷಗಾನದಲ್ಲಿ ಸ್ತ್ರೀವೇಷ ಹಾಕುವವರು. ಓರ್ವ ಗಂಡಾಸಾಗಿ ಸ್ತ್ರೀ ವೇಷ ಮಾಡುವುದು ಎಲ್ಲರಿಂದ ಸಾಧ್ಯವಲ್ಲದ ವಿಷಯ. ಅವರ ಅಭಿನಯ ದೈವಿಕವಾದುದು. ನನಗೆ ಹಲವಾರು ಯಕ್ಷಗಾನ ಕಲಾವಿದರ ನೆನಪಾಗುತ್ತಿದೆ. ಗೋಪಾಲಕೃಷ್ಣ ಕಾಮತ್, ಕಾಳಿಂಗ ನಾವಡ, ನಾರಾಯಣ ಶಬರಾಯ, ಸುಬ್ರಹ್ಮಣ್ಯ ಧಾರೇಶ್ವರ, ಮರವಂತೆ ದಾಸರು, ಮರಿಯಪ್ಪ ಆಚಾರ್, ವಿಠಲ ಕಾಮತ್, ಕಡತೋಕ ಮಂಜುನಾಥ ಭಾಗವತರು, ಪುತ್ತಿಗೆ ರಘುರಾಮ ಹೊಳ್ಳ, ಪದ್ಯಾಣದವರು, ದಿನೇಶ ಅಮ್ಮಣ್ಣಾಯ, ಬಲಿಪ ಭಾಗವತರು, ಅಗರಿ ಶ್ರೀನಿವಾಸ ಭಾಗವತರು, ಶಂಭು ಹೆಗಡೆ, ಗಜಾನನ ಹೆಗಡೆ, ಬ್ರಹ್ಮಾವರದ ನಾಯಿರಿ, ಚಿಟ್ಟಾಣಿಯವರು, ವೈಕುಂಠ, ಅರಾಟೆ, ದಯಾನಂದ, ಶಿರಿಯಾರ ಮಂಜು, ಕೊಕ್ಕರ್ಣೆ ನರಸಿಂಹ, ಕೋಳ್ಯೂರು ರಾಮಚಂದ್ರ ರಾವ್, ಬಿಳಿಯೂರು, ಯಾಜಿ, ಜಳವಳ್ಳಿ, ಹಾರಾಡಿ ರಾಮ, ಪ್ರಭಾಕರ ಜೋಷಿ, ಮೂಡಂಬೈಲು, ಕುಂಬ್ಳೆ ಸುಂದರ ರಾವ್, ಶೇಣಿ ಗೋಪಾಲಕೃಷ್ಣ ಭಟ್, ಮಲ್ಪೆ ಸಾಮಗರು, ಪೆರ್ಲ ಕೃಷ್ಣ ಭಟ್ ... ಇವರೆಲ್ಲರೂ ಯಕ್ಷಗಾನದ ಮಹಾರಥಿಗಳು. ಪಾತಾಳ ವೆಂಕಟರಮಣ ಭಟ್ಟರು ಇವರೆಲ್ಲರ ಸಾಲಿನಲ್ಲಿ ನಿಲ್ಲುವವರು. ಸ್ತ್ರೀ ವೇಷದಲ್ಲಿಯಂತೂ ಕೆಲವರನ್ನು ಮೀರುವವರು. ಏಕಾಗ್ರತೆ, ಶಿಸ್ತು, ಶ್ರಮ, ತಾಳ್ಮೆ, ಹಿರಿಯರಿಗೆ ಗೌರವ ಮೊದಲಾದ ಉತ್ತಮಗುಣಗಳನ್ನು ಮನುಷ್ಯನಿಗೆ ನೀಡುವುದರೊಂದಿಗೆ ಯಕ್ಷಗಾನವು ಬೌದ್ಧಿಕವಾಗಿ ಬಹಳಷ್ಟು ನೀಡುತ್ತದೆ.

ಕಳೆದ ಮೂರು ದಶಕಗಳಿಂದ ನನಗೆ ಕಾನೂನು ಕ್ಷೇತ್ರದಲ್ಲಿ ಅನುಭವವಿದೆ. ಪಾತಾಳ ವೆಂಕಟರಮಣ ಭಟ್ಟರಿಗೆ ಯಕ್ಷಗಾನದಲ್ಲಿ ಸುಮಾರು ಏಳು ದಶಕಗಳ ಅನುಭವವಿದೆ. ಅವರನ್ನು ಅರಿಯದವರು ಕರಾವಳಿಯಲ್ಲಿ ಯಾರೂ ಇರಲಾರರು. ಮೆಡಿಕಲ್, ಇಂಜಿನಿಯರಿಂಗ್ ಅಥವಾ ಕಾನೂನಿನಂತಹ ಶಿಕ್ಷಣದಲ್ಲಿರುವಂತೆ ಯಕ್ಷಗಾನದಲ್ಲಿ ಯಾವುದೇ ಸೀಮಿತ ಅಧ್ಯಯನ ಮಿತಿಯಿಲ್ಲ. ಅತ್ಯಂತ ವಿಸ್ತಾರ ಮತ್ತು ವೈವಿಧ್ಯಮಯ ಗುಣಗಳನ್ನು ಹೊಂದಿರುವ ಯಕ್ಷಗಾನದತ್ತ ಎಲ್ಲರೂ ಆಕರ್ಷಿತರಾಗುತ್ತಾರೆ. ಯಕ್ಷಗಾನವು ವ್ಯಕ್ತಿಗಳಲ್ಲಿ ಉತ್ತಮಗುಣಗಳನ್ನು ತರುವುದಲ್ಲದೇ ದೇವರ ಮೇಲೆ ನಂಬಿಕೆಯನ್ನು ತರುತ್ತದೆ.

ಪಾತಾಳರ ಭೀಷ್ಮ ವಿಜಯದ ಅಂಬೆಯ ಪಾತ್ರವು ನನ್ನ ಮನದಲ್ಲಿ ಅಚ್ಚೊತ್ತಿ ನಿಂತಿದೆ. ಭೀಷ್ಮ ಮತ್ತು ಸಾಲ್ವರು ಅಂಬೆಯನ್ನು ವಿವಾಹವಾಗಲು ನಿರಾಕರಿಸಿದಾಗ ಅವಳು ಪಡುವ ವೇದನೆಯನ್ನು ಪಾತಾಳರು ಅಭಿನಯಿಸಿರುವುದು ನನಗೆ ಈಗಲೂ ಕಣ್ಣಿಗೆ ಕಾಣುತ್ತದೆ. ಅವರ ನೃತ್ಯ, ವೇಷಭೂಷಣ, ಮುಖವರ್ಣಿಕೆ ಮತ್ತು ಅಚ್ಚಗನ್ನಡದ ಮಾತುಗಾರಿಕೆ ಎಲ್ಲವೂ ನಿಖರವಾಗಿರುತ್ತದೆ. ಹಿಮ್ಮೇಳದವರು ಏನಾದರೂ ತಪ್ಪಿದರೂ ಪಾತಾಳರು ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸುತ್ತಿದ್ದರು. ಹಾಗಾಗಿ ಪ್ರೇಕ್ಷಕರನ್ನು ತಮ್ಮೆಡೆಗೆ ಆಕರ್ಷಿಸುವ ಸಮ್ಮೋಹನ ಶಕ್ತಿ ಅವರಲ್ಲಿತ್ತು. ಅ

**ಅಭಿಮತ ವರದಿ**




ಸಾಂಸ್ಕೃತಿಕ ಸಂಪನ್ಮೂಲ ತರಬೇತಿ ಕೇಂದ್ರದ ನಿರ್ದೇಶಕರಾಗಿರುವ ಶ್ರೀ ಗಿರೀಶ್ ಜೋಶಿಯವರು ಮಾತಾನಾಡುತ್ತಿರುವುದು

# ರಂಗಾಯಣದಲ್ಲಿ 'ದಿನಕರ' ನಾಟಕಗಳ ಪ್ರಯೋಗ

ಮಾನವನ ಮನಸ್ಸೆಂಬುದು ಹಲವು ಕನಸುಗಳ ಆಗರ. ಆ ಕನಸುಗಳಲ್ಲೊಂದು ಮೈಸೂರು ರಂಗಾಯಣವನ್ನು ನೋಡುವುದು, ಅಲ್ಲಿನ ರಂಗಮಂದಿರದಲ್ಲಿ ನಾಟಕ ಪ್ರದರ್ಶಿಸುವುದು. ಈ ಕನಸು ನನಸಾಗುವುದೆ? ಎಂಬ ವಿಚಾರ ಸದಾ ಕಾಡುತ್ತಿತ್ತು. ಆದರೆ, ಅದು ನಿಜವಾಗಿಯೂ ನನ್ನ ಭಾಗ್ಯವೇ ಸರಿ, ಹೀಗಿರಲು ಇದೇ ಮೇ 28ರಂದು 'ದಿನಕರ' ತಂಡದ ಕೆಲ ಕಲಾವಿದರ ಪಯಣ ದೇಶದ ರಾಜಧಾನಿಯಿಂದ ಕರ್ನಾಟಕದ ರಾಜಧಾನಿಯತ್ತ ಸಾಗಿತು. ಬೆಂಗಳೂರಿನ ಹನುಮಂತನಗರದ 'ಮಕ್ಕಳ ಕೂಟ'ಕ್ಕೆ ತಲುಪಿದೆವು.

ಪ್ರಥಮತಃ ಮಕ್ಕಳ ಕೂಟದಲ್ಲಿ ನಡೆಯುವ ಮಕ್ಕಳ ಸಮ್ಮೇಳನ, ಮಕ್ಕಳ ಪ್ರತಿಭಾ ಪ್ರದರ್ಶನದ ಬಗ್ಗೆ ತಿಳಿದು ಹೆಮ್ಮೆಯೆನಿಸಿತು. ಮಕ್ಕಳ ಕೂಟದಲ್ಲಿ ನಮ್ಮ ನಾಟಕದ ತಾಲೀಮು ಪ್ರಾರಂಭವಾಗುವುದರ ಮುಖಾಂತರ ಮೇಲಣ ಕನಸಿನ ಸಾಕಾರದ ಹೂವು ಅರಳಲಾರಂಭಿಸಿತು. ನಮ್ಮ ತಾಲೀಮು ನಡೆಯುವಲ್ಲಿ ಕನ್ನಡ ಚಿತ್ರರಂಗದ ಪ್ರಸಿದ್ಧ ನಿರ್ಮಾಪಕ ನಟ ಶ್ರೀ ಕರಿಸುಬ್ಬು ಮತ್ತು ಬಿಜಿನೆಸ್ ಮ್ಯಾಗಜೀನ್‌ನ ಸಂಪಾದಕ ಶ್ರೀ ನಾರಾಯಣ ಸ್ವಾಮಿ, ಸಂಗೀತ ದಿಗ್ಗಜರಾದ ಶ್ರೀ ಬಿ.ವಿ. ಶ್ರೀನಿವಾಸ್ ಮುಂತಾದವರು ಬಂದಿದ್ದರು, ಇಂತಹ ಘನತೆವೆತ್ತ ವ್ಯಕ್ತಿಗಳ ಸಮ್ಮುಖದಲ್ಲಿ ನಮ್ಮ ರಿಹರ್ಸಲ್ ಸಾಗಿರಲು, ಅವರು ನೀಡಿದ ಸಲಹೆ, ಸೂಚನೆಗಳು ನಮ್ಮ ರಂಗಪ್ರಯೋಗದ ಯಶಸ್ಸಿನ ಏಣಿಯ ಮೆಟ್ಟಿಲುಗಳಾಗಿದ್ದವು.

ನಾಟಕದ ಬೆನ್ನೆಲುಬಾದ ಸಂಗೀತಕ್ಕೆ ಸಹಕರಿಸಲು ಬಂದವರು ಶ್ರೀ ಟಿ.ವೈ. ಹರೀಶ್ ಮತ್ತು ಶ್ರೀ ಎನ್. ಶ್ರೀನಿವಾಸ್ ಪ್ರಸಾದ್ ಅವರು. ತಾಲೀಮಿಗೆ ದಿನಂಪ್ರತಿ ಬಂದು ನಾಟಕದ ಯಶಸ್ಸಿನಲ್ಲಿ ಭಾಗಿಗಳಾದರು. ನನ್ನ ಮಿತ್ರರ ಸಮಯಬದ್ಧವಾದ ಸದುಪಯೋಗ ದೊರೆಯಲಿಲ್ಲ ಎಂಬುವುದೊಂದೇ ನೋವಿನ ವಿಷಯ.

ಕರಿಸುಬ್ಬು ಅವರು ಬೆಂಗಳೂರು ಲಾಲ್‌ಬಾಗ್ ಹತ್ತಿರದ ಎಸ್.ಎಲ್. ಎನ್. (ಮುದ್ದಣ್ಣ) ಉಪಹಾರ ಗೃಹದಲ್ಲಿ ನೀಡಿದ ಬೆಳಗಿನ ಉಪಹಾರದ 'ದಾವತ್' ಮರೆಯಲಾರದಂತಹ ಸವಿರುಚಿ.

ಹೀಗೆ ನಾಲ್ಕು ದಿನದ ನಂತರ ಹಲವಾರು ಸಿಹಿ ಕಹಿ ನೆನಪುಗಳೊಂದಿಗೆ ನಮ್ಮ ಪಯಣ ಮೈಸೂರಿನತ್ತ ಹೊರಟಿತು. ಸಂಗೀತಮಯವಾಗಿದ್ದ ನಮ್ಮ ಪಯಣ ಮುಗಿದು ಅರಮನೆಗಳ ನಗರಿ ತಲುಪಿದ್ದು ಗೊತ್ತೇ ಆಗಲಿಲ್ಲ. ಶೀತಲ ಪ್ರದೇಶವೆನಿಸಿದ ಮೈಸೂರು ಸೂರ್ಯನ ಧಗೆಯಲ್ಲಿ ಉರಿಯುತ್ತಿದ್ದರೂ, ನಮ್ಮೆಲ್ಲರ ಹುಮ್ಮಸ್ಸಿಗೆ ಯಾವುದೇ ತರಹದ ಕುಂದುಂಟಾಗಲಿಲ್ಲ.

ಭಾರತದ ಖ್ಯಾತ ರಂಗತಜ್ಞ/ರಂಗಕರ್ಮಿ ಕರ್ನಾಟಕದ ದಿ. ಬಿ.ವಿ. ಕಾರಂತ ಅವರಿಂದ ಪ್ರಾರಂಭಗೊಂಡ 'ರಂಗಾಯಣ'ದ ಎದುರು ನಿಂತು ಕಲಾಮಂದಿರ, ಕಲಾರಾಧನೆಯ ಕೇಂದ್ರ. ವಿಭಿನ್ನ ಕಲಾಚಿತ್ರಗಳಿಂದ ತುಂಬಿದ ಆವರಣ ಬೆರಗುಗಣ್ಣುಗಳಿಂದ ವೀಕ್ಷಿಸುತ್ತಿದ್ದ ಆ ಕ್ಷಣ, ಸಿ.ಜಿ.ಕೆ. ಹವ್ಯಾಸಿ ನಾಟಕೋತ್ಸವ 2016ರ ಫಲಕದಲ್ಲಿ ನಮ್ಮ 'ದಿನಕರ' ತಂಡದ ನಾಟಕದ ಹೆಸರನ್ನು ನೋಡಿ ಏನೋ ಆನಂದ ಪುಳಕ. ಮಧ್ಯಾಹ್ನದ ಭೋಜನವನ್ನು ಸ್ವೀಕರಿಸಿ ರಂಗಾಯಣದ 'ಭೂಮಿಗೀತ'ದತ್ತ ನಡೆದೆವು. ವಿಶಾಲವಾದ ರಂಗಮಂಚ, ನಾಟಕಕ್ಕೆ ಬೇಕಾದಂತಹ ಎಲ್ಲಾ ತರಹದ ಪರಿಕರಗಳ ಅಪಾರ ಸಂಗ್ರಹ ನೋಡಿ ಬೆರಗಾದೆ.

ರಂಗಾಯಣದ ಶ್ರೀ ಮಂಜುನಾಥ ಬೆಳಕೆರೆ ಅವರದ್ದು ಬಹಳ ಗಂಭೀರ, ಶಿಸ್ತಿನ ವ್ಯಕ್ತಿತ್ವವೆಂದು ಕೇಳಿದ್ದೆ. ಆದರೆ ಭೇಟಿಯಾದ ದಿನದಿಂದ ಅವರು ನಮ್ಮಲ್ಲೇ ಒಬ್ಬರಂತೆ ಇದ್ದರು. ನಮಗೆ ಬೇಕಾದ ಎಲ್ಲಾ ತರಹದ ನೆರವಿಗೆ ಸಿದ್ಧರಿರುತ್ತಿದ್ದರು. ಬೆಳಕೆರೆ ಅವರೊಂದಿಗೆ ಕಳೆದ ಸಂತೋಷದ ಕ್ಷಣಗಳು ಮುದ ನೀಡಿದ್ದು ಯಾವಾಗಲೂ ಮನದಾಳದಲ್ಲಿ ಹಸಿರಾಗಿರುತ್ತದೆ.

ಶನಿವಾರ ಜೂನ್ 4ರಂದು 'ಭೂಮಿಗೀತ' ವೇದಿಕೆಯ ಮೇಲೆ ನಮ್ಮ ದಿನಕರ ತಂಡದ ಎರಡು ನಾಟಕ 'ಹಳ್ಳಕೊಳ್ಳ ನೀರು' ಮತ್ತು 'ಪಾತ್ರಧಾರಿಣಿ' ಪ್ರದರ್ಶನಗೊಂಡವು. ಶ್ರೀ ಬೆಳಕೆರೆ, ಶ್ರೀ ಸಂತೋಷ ಕುಸನೂರ ಮತ್ತು ನಾಟಕ ಅಕಾಡೆಮಿಯ ಸದಸ್ಯರು ಹಾಗೂ ಮೇಜರ್ ಮೇಕಪ್ ಆರ್ಟಿಸ್ಟ್ ಆದ ಶ್ರೀ ಬಿ.ಎಂ. ರಾಮಚಂದ್ರ ಅವರುಗಳು ಮಾಡಿದ ಶೃಂಗಾರ ನಮಗೆ ಅವರಿಂದ ದೊರೆತ ಆಶೀರ್ವಾದದಂತಿತ್ತು. 'ಪಾತ್ರಧಾರಿಣಿ'ಯ ಎರಡನೇ ಪ್ರದರ್ಶನವನ್ನು ರಂಗಭೂಮಿಯಲ್ಲಿ ಪ್ರದರ್ಶಿಸುವ ಸುಯೋಗ ನನ್ನದಾಗಿತ್ತು. ಹೊಸ ಪ್ರೇಕ್ಷಕರೆದುರು ಹೊಸ ಆವರಣದಲ್ಲಿ ನಟಿಸುವ ಅನುಭವ ತುಂಬಾ ಕುತೂಹಲಕಾರಿ. 'ಪಾತ್ರಧಾರಿಣಿ'ಯಲ್ಲಿನ ಪ್ರಭಾವಾಶಾಲಿಯಾದ ಪಾತ್ರ ಮಾಡಲು ನಾನು ಸದಾ ಸಿದ್ಧ ಎಂದಿನಂತೆ ದಿಲೀಪ್ ಅವರೊಂದಿಗೆ ಈ ನಾಟಕ ಪ್ರಯೋಗದ ಅನುಭವ ಮುದಕೊಟ್ಟಿತು.

ಜೂನ್ 5 ಕನ್ನಡ ಕವಿ ಕೇಸರಿ ಕಂದಗಲ ಹನಮಂತರಾಯ ಅವರ 'ರಕ್ತರಾತ್ರಿ' ನಾಟಕದ ಪ್ರದರ್ಶನದ ದಿನ. ರಂಗದ ಮೇಲೆ ಕಾಣಿಸಿಕೊಂಡವರು 13 ಮಂದಿಯಾದರೆ, ಯಶಸ್ವಿಗೆ ಸಹಕಾರಿಯಾದವರು ಇನ್ನೂ ಹಲವರು. ಅವರಲ್ಲಿ ಶ್ರೀ ಯೋಗೇಂದರ್ ಸಿಂಗ್, ಶ್ರೀ ಹರಿಪ್ರಿಯಾ ಮತ್ತು ಶ್ರೀ ದಿಲೀಪ್ ಬಾಪಟ್ ಹಾಗೂ ಇತರರನ್ನು ಮರೆಯುವಂತಿಲ್ಲ. ನಮ್ಮ ನಾಟಕದ ವೀಕ್ಷಣೆಗೆ ಅಜ್ಜಂಪುರ, ದಾವಣಗೆರೆ, ಬೆಂಗಳೂರು, ನಂಜನಗೂಡು ಹೀಗೆ ದೂರ ದೂರದ ಸ್ಥಳಗಳಿಂದ ಸದಭಿರುಚಿಯ ಪ್ರೇಕ್ಷಕರು ಹಾಗೂ ಗಣ್ಯವ್ಯಕ್ತಿಗಳು ಬಂದಿದ್ದರು. ಇವರಲ್ಲಿ ಹಿರಿಯ ಜನಪದ ತಜ್ಞ ಶ್ರೀ ಕಾಳೇಗೌಡ ನಾಗವಾರ್, ಶ್ರೀ ಕರಿಸುಬ್ಬು ದಂಪತಿಗಳು, ಪ್ರಜಾವಾಣಿ ಸಂಪಾದಕ ಶ್ರೀ ಗಣೇಶ ಅಮಿನಗಡದ, ಶ್ರೀ ಮಲ್ಲಿಕಾರ್ಜುನ ಕಡಕೋಳ ಹಾಗೂ ಕನ್ನಡದ ಏಕೀಕರಣಕ್ಕಾಗಿ ಹೋರಾಡಿದ ಹಿರಿಯ ಜೀವ



ಶ್ರೀ ಮನು ಪಾಟೀಲ ಅವರು ಮುಖ್ಯರು. ಹೀಗೆ ಕಿಕ್ಕಿರಿದ ಪ್ರೇಕ್ಷಕರಿಂದ ರಂಗಮಂದಿರ ತುಂಬಿತ್ತು. ಭೀಮ, ದುರ್ಯೋಧನರ ಗದಾಯುದ್ಧದಿಂದ ಪ್ರಾರಂಭಗೊಂಡ 'ರಕ್ತರಾತ್ರಿ' ನಾಟಕದ ಪ್ರತಿಯೊಂದು ದೃಶ್ಯದ ನಂತರ ಬರುತ್ತಿದ್ದ ಪ್ರೇಕ್ಷಕರ ಚಪ್ಪಾಳೆಯ ಸದ್ದು ಸುಂದರವಾದ ಅಭಿನಯ ನೀಡಲು ಪ್ರೇರಣೆಯಂತಿತ್ತು. ಸಣ್ಣ ಪುಟ್ಟ ಖಿನ್ನತೆಗಳು ಇದ್ದರೂ ನಮ್ಮ ನಾಟಕ ಪ್ರೇಕ್ಷಕರ ಮನ ಮುಟ್ಟುವಲ್ಲಿ ಯಶಸ್ವಿಯಾಗಿರುವುದು ಹೆಮ್ಮೆಯ ವಿಷಯ. ರಂಗಾಯಣದ ನಿರ್ದೇಶಕರಾದ ಶ್ರೀ ಜನಾರ್ಧನ್ (ಜನ್ನಿ) ನಾಟಕದ ನಂತರ ವೇದಿಕೆಯ ಮೇಲೆ ಹೇಳಿದ ಸಕಾರಾತ್ಮಕ ಹಾಗೂ ಪ್ರೇರಣಾತ್ಮಕ ನುಡಿಗಳಿಗೆ ಈ ಲೇಖನದ ಮುಖೇನ ಧನ್ಯವಾದಗಳನ್ನು ಹೇಳಬಯಸುವೆ.

ನಾಟಕದ ಯಶಸ್ವಿ ಪ್ರದರ್ಶನದ ಮರುದಿನ ಹೊಸಗನಸುಗಳು ಸೂರ್ಯೋದಯದ ಬೆನ್ನೇರಿ ಬಂತು. ಮುಂಜಾನೆಯ ಟೀ ಸೇವನೆಯ ನಂತರ ನಮ್ಮ ನಮ್ಮ ಲಗೇಜುಗಳೊಂದಿಗೆ ತಂಗುದಾಣದಿಂದ ಹೊರಟು, ಕನ್ನಡದ ಚಿತ್ರರಂಗದ ಹಾಸ್ಯನಟ, ರಂಗಕರ್ಮಿ ಶ್ರೀ ಮಂಡ್ಯಾ ರಮೇಶ್ ಅವರ ಪ್ರೀತಿಯ ಕರೆಯೋಲೆಗೆ ಅವರ 'ನಟನ' ಥಿಯೇಟರ್ / ತರಬೇತಿ ಕೇಂದ್ರ ನೋಡಲು ಹೋದೆವು. ಶ್ರೀ ರಮೇಶ್ ಅವರ ಕಲೆಯ ಮೇಲಿದ್ದ ಪ್ರೀತಿ, ಅವರು ರಂಗಭೂಮಿಗೆ ಸಲ್ಲಿಸುತ್ತಿರುವ ಸೇವೆಯಿಂದ ವ್ಯಕ್ತವಾಗುತ್ತಿತ್ತು. ಸಮಯದ ಅಭಾವವಿದ್ದುದರಿಂದ ಹೆಚ್ಚಿನ ಸಮಯವನ್ನು ಶ್ರೀ ರಮೇಶ್ ಅವರೊಂದಿಗೆ ಕಳೆಯಲಾಗದೆ ಅವರಿಗೆ ವಿದಾಯ ಹೇಳಿ ಹೊರಟೆವು. ನಂತರದ ಆತಿಥ್ಯ ದೊರಕಿದ್ದು ಶ್ರೀ ಬೆಳಕೆರೆಯವರ 'ಪರಸ್ಪರ' ತಂಡದಿಂದ 'ಗುರು ರೆಸಿಡೆನ್ಸಿ'ಯಲ್ಲಿ. ಬೆಳಗಿನ ಉಪಹಾರ ಮೈಸೂರು ಪಾಕ್‌ನ ಸವಿಯೊಂದಿಗೆ ಆರಂಭವಾದ ಆತಿಥ್ಯ ನಾನಾ ತರಹದ ತಿಂಡಿ–ತಿನಿಸು, ಮಾತು–ಕತೆಗಳ ಜೊತೆ ಮುಗಿದಿದ್ದು ಗೊತ್ತೇ ಆಗಲಿಲ್ಲ. ಮೈಸೂರು ಚಾಮುಂಡೇಶ್ವರಿಗೆ ಮನದಲ್ಲೇ ನಮನ ಸಲ್ಲಿಸಿ ಮರಳಿ ಗೂಡಿನತ್ತ ಹೊರಡಲು ಬೆಂಗಳೂರಿಗೆ ಪಯಣಿಸಿದೆವು.

ಈ ಪೂರ್ಣ ಪ್ರವಾಸದಲ್ಲಿ ನಮ್ಮ ಜೊತೆ ನೀಡಿದ ಶ್ರೀ ಮನು ಪಾಟೀಲ್ 'ಅಜ್ಜ' ಮತ್ತು ನಮ್ಮ 'ಅಶ್ವತ್ಥಾಮ' ಶ್ರೀ ಶಶಿಧರ ಮುನವಳ್ಳಿ ಇವರಿಗೆ ವಿಶೇಷವಾದ ಧನ್ಯವಾದಗಳು. ಅವರಿಂದ ಕಲಿತ ಪಾಠಗಳು ಹಲವು, ಇದು ನನ್ನ ಮುಂದಿನ ನಡೆಯ ದಾರಿದೀಪ.

ಲೇಖನಿಯಿಂದ ಹಾಳೆಯಲ್ಲಿ ಇಳಿಸದಿರುವ ಇನ್ನೂ ಕೆಲವು ಘಟನೆಗಳು ಮನದಾಳದಲ್ಲಿವೆ. ಈ ಎಲ್ಲಾ ಮರೆಯಲಾರದಂತಹ ಸವಿನೆನಪುಗಳ ಕಾರಣಕರ್ತರು ನಮ್ಮ ಶಿವಾನಂದ ಇಂಗಳೇಶ್ವರ ಅವರು. ಹೀಗೆ ದಿನಕರ ತಂಡ ಬೆಳೆದು ಅತ್ಯುನ್ನತ ಶಿಖರವನ್ನೇರಲಿ ಎಂಬುದು ನನ್ನ ಮನದಾಸೆ. ಅ

***ಸವಿತಾ ನೆಲ್ಲಿ***





# ಮೈಸೂರು ಸಿ.ಜಿ.ಕೆ ಹವ್ಯಾಸಿ ನಾಟಕೋತ್ಸವ- 2016ರಲ್ಲಿ ದಿನಕರ ತಂಡ



ಚಂದ್ರಕಾಂತ ಕುಸನೂರ ಅವರ "ಹಳ್ಳ ಕೊಳ್ಳ ನೀರು" ಮತ್ತು ಡಾ॥ ಲೋಹಿತ್ ನಾಯ್ಕರ್ ಅವರ "ಪಾತ್ರಧಾರಿಣಿ" ಎಂಬ ಎರಡು ನಾಟಕಕಗಳನ್ನು ಪ್ರಸ್ತುತ ಪಡಿಸಿದ್ದು ಮೈಸೂರಿನ ಪ್ರೇಕ್ಷಕರಿಗೆ ಸಂತೋಷವನ್ನು ತಂದು ಕೊಟ್ಟಿದೆ, ಪಾತ್ರಧಾರಿಣಿ ನಾಟಕದ ಪಾತ್ರಧಾರಿಗಳನ್ನು ಮೈಸೂರಿನ ಪ್ರೇಕ್ಷಕರು ಮೆಚ್ಚಿಕೊಂಡರು. ಅದರಲ್ಲಿ ಪಾತ್ರಧಾರಿಣಿಯ ಪಾತ್ರಧಾರಿಯಾದ ಸವಿತಾ ನೆಲ್ಲಿಯವರು ವಿಭಿನ್ನ ಅಭಿನಯ ನೀಡಿದ್ದು ಜನ ಮೆಚ್ಚುಗೆಯನ್ನು ಪಡೆಯಲು ಸಹಕಾರಿಯಾಯಿತು.

ಕಂದಗಲ್ ಹನಮಂತರಾಯ ಅವರ ಕೃತಿಯಾದ "ರಕ್ತ ರಾತ್ರಿ"ಯ ಆಯ್ದ ಅಂಕಗಳನ್ನು ಪ್ರಸ್ತುತ ಪಡಿಸಲಾಯಿತು. ಈ ನಾಟಕದ ವಿಶ್ಲೇಷಣೆಯನ್ನು ಶ್ರೀ ಅಕ್ಕಿಹೆಬ್ಬಾಳ ನಾಗರಾಜ ಅವರು ಮೈಸೂರಿನ 'ಪ್ರಜಾವಾಣಿ' ದಿನಪತ್ರಿಕೆಯಲ್ಲಿ ಸುಂದರವಾಗಿ ವರ್ಣಿಸಿದ್ದು ಓದಿ ತುಂಬಾ ಸಂತೋಷವಾಯಿತು. ದಿನಕರ ತಂಡದ ನಿರ್ದೇಶಕರಾದ ಶ್ರೀ ಶಿವಾನಂದ ಇಂಗಳೇಶ್ವರ ಇವರು ಸಮಸ್ತ ಮೂರು ನಾಟಕಗಳನ್ನು ನಿರ್ದೇಶಿಸಿ ಪ್ರಸ್ತುತಪಡಿಸಿದ್ದು ಶ್ಲಾಘನೀಯ. ದೆಹಲಿ ಕರ್ನಾಟಕ ಸಂಘವೂ ಕೂಡ ನಮ್ಮ ದಿನಕರ ತಂಡಕ್ಕೆ ಕಾಲಕಾಲಕ್ಕೆ ರಂಗಮಂದಿರವನ್ನು ಒದಗಿಸಿ ನಮ್ಮ ಕಲಾ ತಂಡಕ್ಕೆ ಪ್ರೋತ್ಸಾಹ ನೀಡುತ್ತಿರುವುದನ್ನು ನಾವು ಇಲ್ಲಿ ಸ್ಮರಿಸಬಹುದಾದ ಸಂಗತಿಯಾಗಿದೆ. ಅ

***ಶಶಿಧರ ಮುನವಳ್ಳಿ, ಬೆಂಗಳೂರು***

# ಮನಃ ಪಟಲದಲ್ಲಿ ನೆನಪುಗಳ ಸಾಲು

ಹುಟ್ಟುವಾಗಲೇ ತಲೆ ಮೊದಲು ಬಂದು ಭೂಮಿಗೆ ಶಿರಬಾಗಿ ದಿನೇ ದಿನೇ ಕೈ ಕಲಾಡಿಸಿ ಅಲ್ಲಿ ಇಲ್ಲಿ ದೃಷ್ಟಿಸಿ ನೋಡುತ್ತಾ ಗುರುತಿಸಲು ಪ್ರಯತ್ನಸಿ ಹುಸಿ ನಗೆ ನಕ್ಕು, ಹಾಲು ಚೀಪಿ, ಜೊಲ್ಲು ಸುರಿಸಿ, ಕಾಲೆತ್ತಿ, ಕೈ ತಿರುಗಿಸಿ, ಮಗುಚಿ, ತೆವಳಿ, ಈಜುತ್ತಾ, ಅಂಬೆಗಾಲಿಟ್ಟು ಮೇಲೇಳಲು ಕಷ್ಟಪಟ್ಟ ಮೃದು ಕೈಗಳಲ್ಲಿ ತಾರತಮ್ಯ ಮಾಡಿ ಕಿಲಕಿಲ ನಗುತ್ತಾ ಪುಟ್ಟ ಪುಟ್ಟ ಗೆಜ್ಜೆ ಕಟ್ಟಿದ್ದ ಹೆಜ್ಜೆಗಳನ್ನು ಸೊಟ್ಟಾಸೊಟ್ಟಾಗಿ ಇಟ್ಟು ಕತ್ತೆತ್ತಿ ಅಲ್ಲಿ ಇಲ್ಲಿ ಸುತ್ತಮುತ್ತ ನೋಡುತ್ತಾ ಬಿಚ್ಚಿಟ್ಟುಕೊಂಡು ಆಗಾಗ ಬಾಗಿಲ ಹಿಂದೆ 'ತೋಚಿ' ಮಾಡಿ ದಿಟ್ಟಳಾಗಿ ಕೇಕೆ ಹಾಕುತ್ತಾ 'ಹಿಡಿ ಹಿಡಿ' ಎಂದು ಬೆಳೆದ ಬೊಂಬೆ. ಧ್ವನಿ ಏರಿಸುತ್ತಾ ಕೂಗುತ್ತ, ಕುಣಿಯುತ, ನೆಗೆಯುತ್ತ ಚಿಕ್ಕ ತಮ್ಮ, ತಂಗಿಯನ್ನು ಕೀಟಲೆ ಮಾಡುತ್ತಾ, ಅಜ್ಜಿ ಹೇಳಿ ಕೊಟ್ಟ ದೇವರ ಮಂತ್ರ ಇಂಗ್ಲಿಷ್ ಮತ್ತು ಕನ್ನಡದಲ್ಲಿ ಹೇಳಿ ಗುರುತು ಮಾಡಿಕೊಟ್ಟ ತರಕಾರಿಗಳ ಹೆಸರು (Brinjal–ಬದನೆಕಾಯಿ, Onion–ಈರುಳ್ಳಿ, Sugar–ಸಕ್ಕರೆ) ಕಲಿತು, ಹಾಡು ಹಸೆ, ಶುಭ್ರ ಚೊಕ್ಕಟ ಅಚ್ಚುಕಟ್ಟಿನ ಕೆಲಸ ಕಲಿಸಿದ ಅಜ್ಜಿಯ ಮುದ್ದು ಮೊಮ್ಮಗಳಾದ ನಾನು, ಕುಂಟ–ಪಿಲ್ಲೆ (Am I Right–ಆಟ), ಚೌಕಾಭಾರ–ಹುಣಿಸೆ ಬೀಜನದ ಆಟ, 5–7 ಗಜ್ಜುಗದಾಟ, ಕಲ್ಲಾಟ, ಹಲಗುಣಿ ಮಣೆ, ಪಗಡೆ ಆಟ, ಎಲ್ಲಾ ಕಲಿತು, ನಕಲು–ಭದ್ರ ವೇಷದಿಂದ ಅಜ್ಜಿಯನ್ನು ಗೋಳು ಹುಯ್ದುಕೊಂಡು, ಸಗಣಿಯಲ್ಲಿ ಮನೆ ಸಾರಿಸಿ–ಸುಂದರವಾಗಿ ಕೆಮ್ಮಣ್ಣು ರಂಗೋಲಿಯಿಂದ ಚುಕ್ಕಿ, ಎಳೆ, ಒಂಕಿ, ಗೀಟಿನ ಸುಂದರ ರಂಗೋಲಿ ಇಟ್ಟು ಜಂಭ ಪಟ್ಟಿದ್ದೂ ಪಟ್ಟಿದ್ದೆ !

ಮರಹತ್ತಿ ಹುಣಿಸೆ, ಮಾವು, ಸೀಬೆ, ಬೇಲದ ಹಣ್ಣು, ಸಂಪಿಗೆ ಹೂವು ಕಿತ್ತು, ಹಣ್ಣು ಚೀಪಿ, ಸಂಗಪಿಗೆ, ಮಲ್ಲಿಗೆ, ಸೇವಂತಿಗೆ, ಸುರಭಿ ಹೂವುಗಳಿಂದ ಮಾಲೆ, ವೇಣಿ ಕಟ್ಟಿ ಎಲ್ಲರೊಡನೆ ಹಂಚಿಕೊಂಡು ಬಳೆ, ಲೋಲಕ್, ಮಣಿಸರ, ಕಾಲ್ಗಡಗ ಹಾಕಿ ಲಂಬಾಣಿ ನೃತ್ಯಮಾಡಿ ಹಗ್ಗ ಕಟ್ಟಿ ಹಗ್ಗದ ಮೇಲೆ ನಡೆಯಲು ಹೋಗಿ ಬಿದ್ದು ಪೆಟ್ಟು ಮಾಡಿಕೊಂಡು ಅಜ್ಜಿ ಕೈಲಿ 'ಮುಂಡೇದೆ' ಹೆಣ್ಣು ಹುಡ್ಗಿ ಕೈಕಾಲು ಮುರ್ಕೊಂಡ್ರೆ ಯಾರು ಮದುವೆ ಮಾಡ್ಕೋತಾರೆ ಎಂದು ಬೈಸಿಕೊಂಡ ದಿನಗಳು ಎಲ್ಲಾ ಸುಂದರ ದಿನಗಳು ಶಿಶುವಿಹಾರದಲ್ಲಿ ಮರಳಿನ ಮೇಲೆ ಅಕ್ಷರ ಬರೆದು ಕಲಿತು ಆ ಅಕ್ಷರಗಳನ್ನು ಜೋಡಿಸಿ ಪದಗಳನ್ನು ದಿನೇದಿನೇ ಸ್ಲೇಟು ಬಳಪ, ಹಾಳೆಯ ಮೇಲೆ ಸೀಸದ ಕಡ್ಡಿ, ನಂತರ ಲೇಖನಿ–ದೌತಿಯಿಂದ ನೋಟ್ ಬುಕ್‌ವರೆಗೆ ತಲುಪಿಸಿ, ಆಗಾಗ್ಗೆ ಲೇಖನಿಯನ್ನು ಶ್ಯಾಯಿಯಲ್ಲಿ ಅದ್ದಿ ಹಾಕಿದ್ದ ಲಂಗದ ಮೇಲೆ ಕೊಡವಿ ಚಿತ್ತಾರ ಮೂಡಿಸಿ ಮನೆಗೆ ಬಂದ ಕೂಡಲೇ ಅಜ್ಜಿಯ ಕೈಲಿ 'ಥೂ ಮುಂಡೇದೆ' ಎಂಬ ಬೈಗಳ ಜೊತೆ ಅಪ್ಪ ಅಮ್ಮನ ಬೆದರಿಕೆಗೆ ಹೆದರಿ ಲಂಗವನ್ನು ಒಗೆಯುವ ಕಲ್ಲಿನ ಮೇಲೆ ಸೋಪು ಹಾಕಿ ಉಜ್ಜಿ ಉಜ್ಜಿ ಶ್ಯಾಯಿ ಕಾಣದಂತೆ ಒಗೆದ ದಿನದ ಬದುಕಿನ ಮೋಜು! ಆ ದಿನವಂತೂ ಹಗಲೂ ಇರುಳೂ ಅಜ್ಜಿ ಹೇಳಿಕೊಟ್ಟಿದ್ದ 'ದೇವರೇ ಭಗವಂತ ಏನು ತಪ್ಪು ಮಾಡಿದ್ದರೂ ಕ್ಷಮಿಸಪ್ಪ, ಎಲ್ಲರಿಗೂ ಒಳ್ಳೇ ಬುದ್ಧಿಕೊಡಪ್ಪಾ' ಎಂದು ಹಲವಾರು ಬಾರಿ ಪ್ರಾರ್ಥಿಸಿದ್ದೇ ಪ್ರಾರ್ಥಿಸಿದ್ದು ಎಂತಹ ಭಯ! ಹಳ್ಳಿ ಊರುಗಳಲ್ಲಿ ದೇವಸ್ಥಾನದ ಮಂಗಳಾರತಿ, ವಾರಕ್ಕೆರಡು ದಿವಸ ಹರಿಕಥೆ, ಜಯತೀರ್ಥಚಾರ್ಯರ ಉಪನ್ಯಾಸ ಇವುಗಳೂ ಆ ಕಾಲದ ಮನಃಶಾಂತಿಯ ಮನೋರಂಜನಾ ಕಾರ್ಯಗಳಿಗೆ ಅಜ್ಜಿ ತಾಯಿ ಜೊತೆ ಹೋಗುವ ಅಭ್ಯಾಸ (ಹೆಣ್ಣು ಮಕ್ಕಳನ್ನು ಮನೇಲಿ ಒಬ್ಬೊಬ್ಬರನ್ನೇ ಬಿಟ್ಟಿರುತ್ತಿರಲಿಲ್ಲ) ಅಲ್ಲಿ ಕರಸೇವೆ ಎಂಬಂತೆ ಬಂದ ಭಕ್ತಾದಿಗಳಿಗೆ ಮಂಗಳಾರತಿ ಕೊಟ್ಟು ಪ್ರಸಾದ ಹಂಚುವ ಕೆಲಸ ಹಂಚಿಕೊಂಡು ವಿಶೇಷ ಗಾಂಭೀರ್ಯದಿಂದ ಎಲ್ಲರಿಗೂ ಕೊಟ್ಟದ್ದು ನೆನಪಿಸಿಕೊಳ್ಳಲು ಈಗಲೂ ರೋಮಾಂಚನ! ಹಳ್ಳಿಗಳಲ್ಲಿ ಬಯಲಾಟ, ಚಲಿಸುವ ನಾಟಕ ಕಂಪೆನಿ, ಸಿನಿಮಾ (Mobile ಸಿನಿಮಾ) ಬಣ್ಣ ಬಣ್ಣದ ಪರದೆ, ತಡಿಕ್ಕೆ ಟೆಂಟು ಕಟ್ಟಿ ಗುಡಾರ ಕಟ್ಟಿ, ಕ್ಯಾಂಪ್ ಹಾಕಿ ತೋರಿಸುವ ನಾಟಕ, ಸಿನಿಮಾ, ಸರ್ಕಸ್ (ಮೊತ್ತ ಮೊದಲು ರಷ್ಯನ್ ಸರ್ಕಸ್ ನೋಡಿದ್ದು) ಎಲ್ಲರ ಮನೆಯವರೂ ಮಕ್ಕಳನ್ನು ಕರೆದುಕೊಂಡು ಹೋಗುತ್ತಿದ್ದರು. ಅಲ್ಲದೆ ನಾಟಕ ಸಿನಿಮಾ ಪೌರಾಣಿಕ ಮತ್ತು ಸಂಸಾರದ ಕಷ್ಟ ಸುಖಗಳ ದೃಶ್ಯಗಳಿಂದ ಕೂಡಿದ್ದವು. ಮನೆಮಂದಿಯೆಲ್ಲಾ ಎರಡಾಣೆ–ನಾಲ್ಕಾಣೆ ಟಿಕೆಟ್ ಕೊಂಡು, ಚಾಪೆ ಹಿಡಿದುಕೊಂದು, ಕಡ್ಲೆಪುರಿ ಕಟ್ಟಿಕೊಂಡು ಹೋಗಿ ಚಾಪೆ ಮೇಲೆ ಕುಳಿತು ಕಡ್ಲೇಪುರಿ ತಿಂದು ಚಪ್ಪಾಳೆ ತಟ್ಟಿ, ಕಚ್ಚುತ್ತಿದ್ದ ಸೊಳ್ಳೆಗಳನ್ನು ಛಟಪಟ ಎಂದು ಹೊಡೆಯುತ್ತಾ ಮಜಾ ಮಾಡಿದ್ದು ಮರೆಯಲು ಸಾಧ್ಯವೆ? ಸತ್ಯಹರಿಶ್ಚಂದ್ರದಲ್ಲಿ ಥಳಥಳ ಹರಿದ ಕಣ್ಣೀರು ಆಗ ಹಿಡಿದಿಟ್ಟಿದ್ದರೆ ಬಕೇಟುಗಳು ತುಂಬುತ್ತಿದ್ದವೇನೋ 'ಕೃಷ್ಣ ವಿಜಯ' ನಾಟಕದಲ್ಲಿ ನಾಟಕ ಪಟ್ಟಿನ ಹಾಡು "ಹೊಡೆದಟ್ಟಿ ಬಿಡುವರು ಮಡದಿ ಮಣಿಯರು ನೂಕುವರು ಆಚೆಗೆ ಭಲಭಲ ಕೃಷ್ಣಾ"

'ಭವಿಷ್ಯ ಪೋಗಿ ಬರುವೆಯಾ ನಾಗವೇಣಿ ನಗರಿಗೀಗ ಪೋಗಿ ಬರುವೆಯಾ'
ಎಲ್ಲಾ ಎರಡೆರಡು ಸಾಲು ಕಲಿತು ಹೇಳಿದ್ದೇ ಹೇಳಿದ್ದು, ಹಾಡಿದ್ದೇ ಹಾಡಿದ್ದು ಅದೆಲ್ಲಾ ಎಂದು ಮರೆಯಲಾಗದು.

ಶಾಲೆಯಲ್ಲಿ ಧ್ರುವ, ಪ್ರಹ್ಲಾದ ಕೃಷ್ಣ, ನಾರದ ಪಾತ್ರದೊಡನೆ, ಮನೆಯಲ್ಲೂ ನಾಟಕದ ಮಾತುಗಳನ್ನು ಬರೆದು (ಟೆಂಟಿನ ತಡಿಕೆ ಸಂಧಿ  ಕಂಪೆನಿ ನಾಟಕದವರು ಪ್ರಾಕ್ಟೀಸ್ ಮಾಡುವುದನ್ನು ಕದ್ದು ನೋಡಿದ್ದರ

ಒಂದು ಊರಿನಲ್ಲಿ ಒಬ್ಬ ಹಾವು ಹಿಡಿಯುವವನಿದ್ದ. ಹಾವುಗಳನ್ನು ಹಿಡಿಯುವುದು ಅವನಿಗೊಂದು ಎಡಗೈಯ ಆಟವಿದ್ದಂತೆ. ಎಂತಹ ವಿಷಕಾರವು ಹಾವುಗಳಾದರೂ ಅವನಿಗೆ ಕಿಂಚಿತ್ತೂ ಭಯವಿಲ್ಲ.  ಕಣ್ಣುಮುಚ್ಚಿ ತೆರೆಯುವುದೊರಳಗೆ ಹಿಡಿದು ಬಿಡುತ್ತಿದ್ದ ಆ ಹಾವಾಡಿಗ. ಹಿಡಿದ ಹಾವುಗಳಿಗೆ ಅವನೆಂದೂ ಶಿಕ್ಷೆ ಕೊಡುತ್ತಿರಲಿಲ್ಲ. ಅವನ ಕೈಯಲ್ಲಿ ಅದಾವುದೋ ಒಂದು ವಿಶೇಷ ರೇಖೆ ಇದೆ ಅಂತೆಲ್ಲಾ ಊರ ಜನ ಮಾತಾಡಿಕೊಳ್ಳುತ್ತಿದ್ದರು.  ಅಕ್ಕಪಕ್ಕದ ಹಳ್ಳಿಗಳಲ್ಲಿ ಎಲ್ಲಿ ಹಾವು ಕಾಣಿಸಿಕೊಂಡರೂ ಅವನಿಗೆ ಕರೆ ಹೋಗುತ್ತಿತ್ತು.  ಆತ ಬಂದು ಲೀಲಾಜಾಲವಾಗಿ ಆ ಹಾವುಗಳನ್ನು ಅರಸಿ ಹಿಡಿದುಕೊಂಡು ಹೋಗಿಬಿಡುತ್ತಿದ್ದ.  ಹಿಡಿದ ಹಾವುಗಳನ್ನು ದೂರದ ಬೆಟ್ಟಗುಡ್ಡಗಳಲ್ಲೋ, ಕಾಡಿನಲ್ಲೋ ಬಿಟ್ಟುಬಿಡುತ್ತಿದ್ದ.

ಹೊಟ್ಟೆಪಾಡಿಗಾಗಿ ಒಂದೆರೆಡು ಹಾವುಗಳನ್ನು ಮಾತ್ರ ತನ್ನ ಬಳಿ ಸಾಕಿಕೊಂಡಿದ್ದ. ಊರ, ಪರ ಊರ ಸಂತೆ, ಜಾತ್ರೆಗಳಲ್ಲಿ ತನ್ನ ಪುಂಗಿಯ ಜೊತೆಗೆ ಹೋಗಿ ಆ ಹಾವುಗಳನ್ನು ಆಡಿಸಿ ಬದುಕಿಗೊಂದಿಷ್ಟು ಗಳಿಸಿಕೊಳ್ಳುತ್ತಿದ್ದ. ಯಾವಾಗಲೂ ಮಸುಕಲಾದ ಒಂದು ಬಿಳಿಯ ಪಂಚೆ, ಒಂದು ಪುಟ್ಟ ಟವೆಲ್ ಮೈಮೇಲೆ, ಕೈಯೊಲ್ಲೊಂದು ಸಣ್ಣ ದೊಣ್ಣೆ. ಇಷ್ಟರ ಹೊರತಾಗಿ ಅವನ ಬಳಿ ಇನ್ನೇನೂ ಇರಲಿಲ್ಲ. ಆ ಒಂದೆರೆಡು ಹಾವುಗಳು ಅವನ ಕುತ್ತಿಗೆಗೆ ಸುತ್ತಿಕೊಂಡೋ, ತಲೆಯ ಮೇಲೆ ಇರಿಕೆ ಹಾಕಿಕೊಂಡೋ ಜೊತಾಡುತ್ತಿರುತ್ತಿದ್ದವು.  ತನ್ನ ದೊಣ್ಣೆಯನ್ನು ಯಾವುದೋ ಮಂತ್ರ ದಂಡದಂತೆ ಆ ಕಡೆ ಈ ಕಡೆ ತೋರಿಸುತ್ತ ಆ ಹಾವುಗಳನ್ನು ನಿಯಂತ್ರಿಸುತ್ತಿದ್ದ. ಒಂದು ಪುಂಗಿ ಮಾತ್ರ ಅವನ ಕೊರಳಿಗೆ ಸದಾ ಜೋತು ಬಿದ್ದಿರುತ್ತಿತ್ತು. ಆಗೊಮ್ಮೆ, ಈಗೊಮ್ಮೆ ಅದನ್ನು ಬಾರಿಸಿ ಹಾವುಗಳನ್ನು ಆಡಿಸುತ್ತಿದ್ದ. ಒಂದು ಹತ್ತೋ ಇಪ್ಪತ್ತೋ ರುಪಾಯಿ ಕಾಸಾದೊಡನೆ ಅಲ್ಲಿಂದ ಹೊರಟು ಹೋಗಿಬಿಡುತ್ತಿದ್ದ.

ಹೊಳೆಯುವ ಕಣ್ಣುಗಳು, ಉದ್ದವಾಗಿ ಬೆಳೆದ ಜಟೆಯಂತಹ ಕೂದಲು, ಗಡ್ಡ, ಮೀಸೆ ಎಲ್ಲವೂ ರೇಷ್ಮೆ ಬಿಳಿ ಬಣ್ಣದ್ದು.



ಸಹಾಯದಿಂದ) ನಾನೇ ನಾಟಕ ರಚಿಸಿ ಬೇಗಡೆ (ಸಿಗರೇಟ್ ಕೇಸಿನೊಳಗೆ ಬಳಿ ಬೇಗಡೆ ಇರುತ್ತಿತ್ತು) ಅದನ್ನು ಬೀದಿಯಲ್ಲಿ ಎಸೆದಿದ್ದರೆ ಆರಿಸಿ ತಂದಿಟ್ಟುಕೊಳ್ಳುತ್ತಿದ್ದೆ, ರಟ್ಟುಗಳಿಂದ ಕಿರೀಟ ಮಾಡಿ ಮುಖ್ಯ ಪಾತ್ರಗಳಾದ ದೇವರುಗಳನ್ನು ನನಗಾಗಿ ಮೀಸಲಿಟ್ಟುಕೊಂಡು ವಿಷ್ಣು ರಾಮ, ನರಸಿಂಹ ದೇವರಾಗಿ ತಂದೆಯ ಮುಗುಟ ಉಟ್ಟುಕೊಂಡು ಕಿರೀಟ ಕಟ್ಟಿಕೊಂಡು ತಮ್ಮ ತಂಗಿಯರಿಗೆ ಅಕ್ಕಪಕ್ಕದ ಹುಡುಗ ಹುಡುಗಿಯರಿಗೆ ಶಿಕ್ಷಣ ಮತ್ತು ಶಿಕ್ಷೆ ಕೊಟ್ಟು ನಾಟಕ ಮಾಡಿದ್ದೇ ಮಾಡಿದ್ದು. ಅಬ್ಬ ಏನು ಸಾಹಸ! ಆದರೆ ನನ್ನಜ್ಜಿ ಮಾತ್ರ ನಾನು ಟೆಂಟಿನ ಹತ್ತಿರ ಹೋಗೋದು, ನಾಟಕದ ಹಾಡು ಹೇಳೋದು ಕಂಡರೆ ದರದರ ನನ್ನನ್ನು ಎಳೆದುಕೊಂಡು ಬಂದು ಹೊರಕ್ಕೆ ಕಾಲಿಡು 'ಮುಂಡೇದೆ' ಕಾಲು ಮುರಿದು ಕೈಗೆ ಕೊಡ್ತೇನೆ ಎಂದು ಬಯ್ದು ಕಾವಲು ಕಾದದ್ದು. ಆ ಕಾಲದ ಕಾಯಿದೆ ಕಾನೂನು! ಅವರಿಗೆ ಹೆಣ್ಣು ಮಕ್ಕಳನ್ನು ಕಂಪೆನಿ ನಾಟಕದವರು ಹಾರಿಸಿಕೊಂಡು ಹೋಗುವವರೆಂಬ ಭಯ. ಅಂದ ಹಾಗೆ ಆ ಕಾಲದಲ್ಲಿ ಬಳ್ಳಾರಿ ಲಲಿತಾಳ ಕಥೆ ಪ್ರಸಿದ್ಧಿಯಾಗಿತ್ತಂತೆ. ಅಜ್ಜಿ, ಅಮ್ಮ, ಅಪ್ಪ, ಶಾಲಾ ಮಾಸ್ತರು, ಹಾಡಿನ ಮಾಸ್ತರು, ಭಿಕ್ಷುಕರ ಪಾತ್ರ ಎಲ್ಲವನ್ನು ಸೃಷ್ಟಿಸಿಕೊಂಡು ನಾಟಕ ಮಾಡಲು ಶುರು ಮಾಡಿ ಮುಂದೆ ಬದುಕಿನ ನಾಟಕವನ್ನೇ ನಿಭಾಯಿಸಿದ್ದಾಯಿತು.

ಅಟ್ಟು ಗುಬ್ಬಚ್ಚೆ, ರಂಗೋಲಿ, ಹಾಡು ನೃತ್ಯಗಳ, ಓಟ ಆಶುಭಾಷಣ, ಕೇರಂ, ಕಠಣ Breaking, Target aiming, Badminton, hurdle Race ಇವೆಲ್ಲಾ ಆ ಕಾಲದ ಶಾಲಾ ಕಾಲೇಜುಗಳಲ್ಲಿ ಹುಡುಗಿಯರಿಗೆ ಆಟ ಸ್ಪರ್ಧೆಗಳಾಗಿದ್ದವು. ಅಂತೂ ಎಲ್ಲದರಲ್ಲೂ ಮುಂದು. ಬಹುಮಾನ ಗಳಿಸಿದ್ದೇ ಗಳಿಸಿದ್ದು. ನಾನು ಶಿಶುವಿಹಾರದಿಂದ ಹಿಡಿದು ಪಿ.ಎಚ್.ಡಿ. ವರೆಗೂ Boys & Girsl School, College, University ಓದಿದ್ದು. ಹೆಣ್ಣು ಮಕ್ಕಳು ಒಂದು ಕಡೆ ಗಂಡು ಮಕ್ಕಳು ಒಂದು ಕಡೆ ಕುಳಿತು, ಓದುವ ಕಾಲ. ಆದರೂ ಕಿತಾಪತಿ, ಕೀಟಲೇ ಎಲ್ಲಾ ಇದ್ದೇ ಇರುತ್ತಿತ್ತು. ಎಲ್ಲಾ ವಿಷಯಗಳಲ್ಲೂ ಭಾಗವಹಿಸುವ ಸ್ಪರ್ಧೆ, ಎಲ್ಲಾ ಪ್ರೇರಣೆ, ಉತ್ಸಾಹ ಚಿಕ್ಕಂದಿನಿಂದಲೂ ಮೈಗೂಡಿತ್ತು ಕಾಲೇಜಿಗೆ ವಿಜ್ಞಾನಿಯಾಗಬೇಕೆಂದು ಅಜ್ಞಾನಿಯಾದ ನಾನು ಓದುತ್ತಾ ಮದುವೆಯಾಗಿ ಅತ್ತೆ ಮಾವಂದಿರು–ಗಂಡನ ಪ್ರೋತ್ಸಾಹಕ್ಕೆ ತಲೆಬಾಗಿ ಮಕ್ಕಳಾದರೂ ಸಸ್ಯಶಾಸ್ತ್ರ–ವಿಜ್ಞಾನ ಶಾಸ್ತ್ರ, ಸಂಶೋಧನೆ, ಸಂಗೀತ, ಸಂಸ್ಕೃತ, ಜರ್ಮನ್ ಭಾಷೆ ಎಲ್ಲವುದನ್ನೂ ಜತೆ ಜತೆಯಲಿ ಕಲಿತು, ಸಂಘ–ಸಂಸ್ಥೆ, ಎಲ್ಲದರಲ್ಲೂ ಭಾಗವಹಿಸುತ್ತಾ ಅವಿಭಕ್ತ ಕುಟುಂಬದಲ್ಲಿ ಬೆಳೆದು, ಎಲ್ಲರ ಮೆಚ್ಚುಗೆಗೆ ಪಾತ್ರಳಾಗಿ ಜೀವನ ನಾಟಕ ಸೂತ್ರಧಾರಿಣಿಯಾಗಿ ನಿಭಾಯಿಸುತ್ತಲೇ ಇದ್ದೇನೆ ಅರಿಷಡ್ವರ್ಗಗಳೊಡನೆ ಎಲ್ಲವನ್ನೂ ಸಕಾರಾತ್ಮಕವಾಗಿ ಅಳವಡಿಸಿಕೊಂಡು ನಿರ್ವಹಿಸುವ ಶಕ್ತಿ, ಮನೆಯವರೆಲ್ಲರ ಪ್ರೋತ್ಸಾಹ, ಒಗ್ಗಟ್ಟು, ಹಿರಿಯರ ಬುದ್ಧಿವಾದ, ಆಶೀರ್ವಾದ ಸಂಸ್ಕಾರವೇ ಕಾರಣವಾಗಿ ಸುಂದರವಾಗಿ ಬಾಳುವುದೇ ಜೀವನದ ಅಭಿರುಚಿ ಎನ್ನಿಸಿದೆ. 'ಕೆಟ್ಟು ಪಟ್ಟಣ ಸೇರು' ಎಂಬುದು ಎಷ್ಟೋ ಅನುಭವಗಳಿಗೆ ಪುಟಕೊಡುತ್ತದೆ. ದೇಶ ಸುತ್ತಿ, ಭಾಷೆ, ನಡೆನುಡಿ ಕಲಿತು, ಹೋಲಿಕೆ–ಹೊಂದಾಣಿಕೆಯಿಂದ ಕೀಳರಿಮೆ ಇಲ್ಲದೆ ಬಾಳುವ ಸಾಹಸ, ಸಕಾರಾತ್ಮಕ ಜ್ಞಾನ, ತಿಳುವಳಿಕೆಯಿಂದ ಸಾಧ್ಯವಾಗಿ–ಹಸನಾಗಿದೆ.

ಬಂದದ್ದೆಲ್ಲಾ ಬರಲಿ–ಭಗವಂತನ ದಯೆ ಇರಲಿ. ಕಷ್ಟ ಕೊಡುವವ ಅವ; ಅದನ್ನು ಪಾರು ಮಾಡುವುದೂ ಅವನೇ ತೋರಿಸುವ ಮಾರ್ಗ ಎಂಬ ಗುರಿಯಿಂದ ಸಮಸ್ಯೆಗಳಿಗೆ ಸಮಾಧಾನ ಹುಡುಕಬೇಕು. ತಾಳ್ಮೆ–ಸಹಿಷ್ಣುತೆಯನ್ನು ಯಾವಾಗಲೂ ಕಾಪಾಡಿಕೊಳ್ಳಬೇಕು. ನೇರದೃಷ್ಟಿಯಿಂದ ಈಸಬೇಕು; ಇದ್ದು ಜಯಿಸಬೇಕು ಎಂಬ ದೃಢ ಮನಸ್ಸಿನಿಂದ, ಭರವಸೆ ಎಂಬ ಕಲ್ಲುಚಪ್ಪಡಿಯನ್ನು ಎದೆಗೆ ಕಟ್ಟಿಕೊಂಡು ಪ್ರವಾಹದಲ್ಲಿ ಕೊಚ್ಚಿಹೋಗದೆ ವಿರುದ್ಧ ದಿಕ್ಕಿನಲ್ಲಿ ಈಜಬೇಕು! ಸ್ನೇಹಿತರು, ಬಂಧು ಬಾಂಧವರು, ಸಂಘ, ಸಂಸ್ಥೆಗಳು ನೆರೆ ಹೊರೆಯವರು ರಕ್ಷಾಕವಚವಾಗಿ ಭಾರವಾದ ಮನಸ್ಸನ್ನು ಹಗುರಗೊಳಿಸಬೇಕು. ರವೀಂದ್ರನಾಥ್ ಟಾಗೂರ್ ಹೇಳಿದ್ದಾರೆ. ಈ ಸುಂದರ ಭೂಮಿಯಲ್ಲಿ ನಾನು ಸಾಯಲು ಬಯಸುವುದಿಲ್ಲ. ಅ

***ಡಾ. ಅಹಲ್ಯಾ ಚಿಂತಾಮಣಿ***

ಆ ಹಾವುಗಳು ಹರಿದಾಡುವಾಗ ಅವುಗಳ ಹೊಳೆಯುವ ಮೈ ಬಣ್ಣ ಅವನ ಕೂದಲಿನ ಬಿಳಿಯ ರಾಶಿಯಲ್ಲಿ ಮಿಂಚುತ್ತಿದ್ದವು. ಹಾವಾಡಿಗ ಬರುತ್ತಿದ್ದಾನೆಂದರೆ ಅಷ್ಟು ದೂರದಿಂದಲೇ ಊರಿಗೆಲ್ಲಾ ತಿಳಿದು ಬಿಡುತ್ತಿತ್ತು. ಮಕ್ಕಳ ಗುಂಪೊಂದು "ಹೋ' ಎಂದು ಅವನ ಹಿಂದೆ ಬೊಬ್ಬೆ ಹೊಡೆದುಕೊಂಡು ಓಡುತ್ತಾ ಬರುತ್ತಿದ್ದರು. ನಾಯಿಗಳು ಬೌ ಬೌ ಎಂದು ಅರಚುತ್ತಲೇ

# ಹಾವಾಡಿಗ



ಇರುತ್ತಿದ್ದವು ಅಂವ ಊರು ಬಿಟ್ಟು ಹೋಗುವ ತನಕ. ಹಾವಾಡಿಗ ಬಂದು ಗಂಭೀರವಾಗಿ ಊರಿನ ಅರಳಿಕಟ್ಟೆಯ ಮೇಲೋ, ಗೋಳಿಯ ಮರದ ಅಡಿಯಲ್ಲೋ ಕುಳಿತು ತನ್ನ ದೊಣ್ಣೆ ಬೀಸಿ, ಪುಂಗಿ ಊದಿ, ಹಾವುಗಳನ್ನು ಆಡಿಸಲು ಶುರು ಮಾಡಿದನೆಂದರೆ ಕೊನೆಯ ಪಕ್ಷ ಊರಿನ 20–30 ಮಂದಿ, ಹೆಂಗಸರು–ಗಂಡಸರು ಸೇರಿದಂತೆ ಹಾಗೂ ಒಂದು ಹತ್ತಿಪ್ಪತ್ತು ಮಕ್ಕಳು ಕ್ಷಣಾರ್ಧದಲ್ಲಿ ಸೇರಿಯೇ ಸೇರುತ್ತಿದ್ದರು. ಹಾವಾಡಿಗ ಅವನ ಪಾಡಿಗೆ ಪುಂಗಿ ಊದಿ ಹಾವುಗಳನ್ನು ಕುಣಿಸುತ್ತಿದ್ದ.

ಕೆಲವು ಮಹಿಳೆಯರು ಅರಿಶಿನ ಕುಂಕುಮ ತಂದು ಹಾವಿನತ್ತ ಎರಚಿ ಕೈ ಮುಗಿದು ನಿಲ್ಲುವುದು ಇನ್ನು ಕೆಲವರು ಹಾಲು ತಂದು ಮಣ್ಣಿನ ಗದ್ದಗಳಲ್ಲಿ ಹಾಕಿ ಇಡುವುದು ಮತ್ತೆ ಕೆಲವರು ಮನೆಯಲ್ಲಿದ್ದ ಬಾಳೆ ಹಣ್ಣು, ಮಾವಿನ ಹಣ್ಣು, ತಂದು ಹಾವಿನ ಎದುರುಗಡೆ ಇಟ್ಟು ಕೈ ಮುಗಿದು ನಿಂತು ಬಿಡುತ್ತಿದ್ದರು. ಆ ಹಾವುಗಳೋ ಹಸಿವಾದರೆ ಎಲ್ಲೋ ಸ್ವಲ್ಪ ಹಾಲನ್ನು ನೆಕ್ಕಿ ಬಿಡುತ್ತಿದ್ದವು. ಇಲ್ಲವಾದರೆ ಆ ಮಣ್ಣಿನ ಗದ್ದದಲ್ಲಿದ್ದ ಹಾಲು ಅಲ್ಲೇ ಹಾಗೇ ಇರುತ್ತಿತ್ತು. ಬಾಳೆ ಹಣ್ಣು ಮಾವಿನ ಹಣ್ಣು ಹಾವಾಡಿನಗೋ ಅಥವಾ ಅವನಿಗೆ ಇಷ್ಟವಾದರೆ ಆ ನೆರೆದ ಮಕ್ಕಳಿಗೆ ಆಹಾರವಾಗುತ್ತಿತ್ತು. ಐದು–ಹತ್ತು ರೂಪಾಯಿ ಚಿಲ್ಲರೆ ನಾಣ್ಯ ಸೇರಿದಂತೆ ಒಟ್ಟಾದ ತಕ್ಷಣ ತನ್ನ ಹಾವಿನೊಂದಿಗೆ ಅಲ್ಲಿಂದ ಗಾಡಿ ಬಿಟ್ಟುಬಿಡುತ್ತಿದ್ದ. ಆ ಊರಿನಿಂದ ಹೊರಗೆ ಹೋಗುವ ತನಕ ಮತ್ತೆ ಮಕ್ಕಳ ಬೊಬ್ಬೆ, ನಾಯಿಗಳ ಬೌ ಬೌ ಕೇಳಿಸುತ್ತಲೇ ಇರುತ್ತಿತ್ತು.

ಇದು ಹೀಗೆ ಎಷ್ಟೋ ವರ್ಷಗಳಿಂದ ನಡೆದುಕೊಂಡು ಬರುತ್ತಲೇ ಇತ್ತು.

ಈ ಮಧ್ಯೆ ಎಲ್ಲೋ ಒಂದು ಹಾವು ಮನೆಯೊಳಗೋ, ದನದ ಹಟ್ಟಿಯೊಳಗೋ ಅಥವಾ ಹೂವಿನ ತೋಟದೊಳಗೆ ಕಾಣಿಸಿಕೊಂಡಾಗ ಆ ಊರಿನ ಜನ ಹಾವಾಡಿಗನನ್ನು ಹುಡುಕಿಕೊಂಡು ಹೋಗುತ್ತಿದ್ದರು. ಅವನಿದ್ದ ಜಾಗದಿಂದ ಅವನನ್ನು ಕರೆದುಕೊಂಡು ಬರುತ್ತಿದ್ದರು. ಅವನು ಅಲ್ಲೆಲ್ಲಾ ಹುಡುಕಿ ಹುಲ್ಲಿನ ರಾಶಿ, ಸೌದೆ ರಾಶಿ ಅಡಿಯಲ್ಲಿ, ಚಪ್ಪಡಿ ಕಲ್ಲಿನಲ್ಲಿಯಡಿ ತನ್ನ ದೊಣ್ಣೆಯಿಂದ ಬಡಿದು ಹಾವನ್ನು ಹುಡುಕಿ ತೆಗೆದು ಕ್ಷಣಾರ್ಧದಲ್ಲಿ ಅದನ್ನು ಹಿಡಿದುಕೊಂಡು ಗುಡ್ಡದ ಕಡೆಗೆ ಹೊರಟು ಬಿಡುತ್ತಿದ್ದ. ಒಂದಷ್ಟು ಮಕ್ಕಳು ನಾಯಿಯ ಹಿಂಡು ಬೊಬ್ಬೆ ಹಾಕಿ ಒಂದಷ್ಟು ದೂರ ಅವನನ್ನು ಹಿಂಬಾಲಿಸುತ್ತಿದ್ದವು. ಆ ಮನೆಯವರು ಏನೋ ಒಂದು ಐದೋ–ಹತ್ತೋ ರೂಪಾಯಿ ಕಾಸು ಕೊಟ್ಟರೆ ಖುಷಿಯಿಂದ ತೆಗೆದುಕೊಳ್ಳುತ್ತಿದ್ದ. ಇಲ್ಲವಾದರೆ ಅದಕ್ಕಾಗಿ ಎಂದೂ ಕಾಯುತ್ತಿರಲಿಲ್ಲ, ಬೇಡುತ್ತಿರಲಿಲ್ಲ.

ಅದೊಂದು ದಿನ ಊರಿನ ಅರಳಿ ಮರದ ಕೆಳಗೆ ಎಂದಿನಂತೆ ಹಾವಾಡಿಗ ಕಾಣಿಸಿಕೊಂಡ ಆದರೆ ಪುಂಗಿಯ ಸದ್ದಿಲ್ಲ. ಹಾವುಗಳೂ ಇಲ್ಲ. ಅವನು ಗಾಢ ನಿದ್ರೆಯಲ್ಲಿ ಮಲಗಿದ್ದ. ಊರ ಜನ ಬಂದು ನೋಡುವಷ್ಟರಲ್ಲಿ ಅಂವ ಶವವಾಗಿದ್ದ. ಹಾವುಗಳು ಎಲ್ಲಿಗೋ ಹರಿದುಹೋಗಿದ್ದವು. ದೊಣ್ಣೆ, ಪುಂಗಿ ಹಾಗೇ ಅವನೊಡನೆ ಬಿದ್ದಿದ್ದವು. ಆ ಶಾಂತ ಮುಖದಲ್ಲಿ ಮಂದಹಾಸವಿತ್ತು.

ಹಾವಾಡಿಗ ಸತ್ತು ಹೋಗಿಬಿಟ್ಟಿದ್ದ. ಅಂದಿನಿಂದ ಆ ಊರುಗಳಲ್ಲಿ ಹಾವಾಡಿಗನ ನೆನಪು ಮಾತ್ರ. ಅ

***ಸಖಾರಾಮ ಉಪ್ಪೂರು***

# ದೆಹಲಿ ಕರ್ನಾಟಕ ಸಂಘದ ಕಾರಂತ, ಮಹಿಷಿ ಮತ್ತು ರಂಗ ಪ್ರಶಸ್ತಿಗಳಿಗೆ ಅರ್ಜಿ ಆಹ್ವಾನ

ದೇಶದ ರಾಜಧಾನಿ ದೆಹಲಿಯಲ್ಲಿ ಕನ್ನಡ ಭಾಷೆ ಮತ್ತು ಕರ್ನಾಟಕದ ಸಂಸ್ಕೃತಿಯನ್ನು ಕಳೆದ ಆರು ದಶಕಗಳಿಂದ ಉಳಿಸಿ ಬೆಳೆಸುತ್ತಿರುವ ದೆಹಲಿ ಕರ್ನಾಟಕ ಸಂಘವು ಪುಸ್ತಕ ಪ್ರಕಟಣೆ, ಮಹಿಳಾ ಸಾಹಿತ್ಯ ಮತ್ತು ರಂಗಭೂಮಿಗೆ ಸಂಬಂಧಿಸಿದಂತೆ ನೀಡುವ ಮೂರು ಪ್ರಶಸ್ತಿಗಳಿಗೆ ಅರ್ಹ ಸಾಧಕರಿಂದ ಅರ್ಜಿಯನ್ನು ಆಹ್ವಾನಿಸಿದೆ.

**ಡಾ. ಕೆ. ಶಿವರಾಮ ಕಾರಂತ ಪ್ರಶಸ್ತಿ :** ದೆಹಲಿ ಕರ್ನಾಟಕ ಸಂಘವು ಪ್ರತಿ ಎರಡು ವರ್ಷಗಳಿಗೊಮ್ಮೆ ನೀಡುವ ಡಾ. ಕೆ. ಶಿವರಾಮ ಕಾರಂತ ಪ್ರಶಸ್ತಿಯನ್ನು 2016ನೇ ಸಾಲಿಗೆ ನೀಡಲಾಗುತ್ತಿದೆ. ಡಾ. ಶಿವರಾಮ ಕಾರಂತರು ಸ್ವತ: ಹಲವಾರು ಕೃತಿಗಳನ್ನು ಪ್ರಕಟಿಸಿ ಕನ್ನಡದ ಸಾಹಿತ್ಯ ಕ್ಷೇತ್ರಕ್ಕೆ ವಿಶೇಷ ಕೊಡುಗೆಯನ್ನು ನೀಡಿದ್ದಾರೆ. ಈ ವರ್ಷದ ಪ್ರಶಸ್ತಿಯನ್ನು ಪುಸ್ತಕ ಪ್ರಕಾಶನದ ಕ್ಷೇತ್ರದಲ್ಲಿ ಕನ್ನಡ ಸಾಹಿತ್ಯಕ್ಕೆ ಗಣನೀಯ ಸೇವೆ ಸಲ್ಲಿಸಿದವರಿಗೆ ನೀಡಲಾಗುವುದು. ಈ ಪ್ರಶಸ್ತಿ ನಗದು ಹಣ ರೂ. 50,000/– ಸ್ಮರಣಿಕೆ ಮತ್ತು ಪ್ರಶಸ್ತಿ ಪತ್ರಗಳನ್ನೊಳಗೊಂಡಿದೆ. ಈ ಹಿಂದೆ ಈ ಪ್ರಶಸ್ತಿಯನ್ನು ಡಾ. ಕಾರಂತರ ಸಾಧನಾಕ್ಷೇತ್ರಗಳಾದ ಸಾಹಿತ್ಯ ಕ್ಷೇತ್ರಕ್ಕೆ ಯಶವಂತ ಚಿತ್ತಾಲ, ವಿಜ್ಞಾನ ಕ್ಷೇತ್ರಕ್ಕೆ ಜಿ.ಟಿ.ನಾರಾಯಣ ರಾವ್, ಯಕ್ಷಗಾನ ಕ್ಷೇತ್ರಕ್ಕೆ ಶ್ರೀ ಬನ್ನಂಜೆ ಸಂಜೀವ ಸುವರ್ಣ, ಪರಿಸರ ಕ್ಷೇತ್ರಕ್ಕೆ ಸಾಲುಮರದ ತಿಮ್ಮಕ್ಕ ಹಾಗೂ ಮಕ್ಕಳ ಸಾಹಿತ್ಯ ಕ್ಷೇತ್ರಕ್ಕೆ ಶ್ರೀ ಕೋಟಿಗಾನ ಹಳ್ಳಿ ರಾಮಯ್ಯನವರಿಗೆ ನೀಡಲಾಗಿದೆ. ಪ್ರಶಸ್ತಿಗೆ ಸಾಧಕರ ಹೆಸರನ್ನು ಸಂಕ್ಷಿಪ್ತ ವಿವರಗಳೊಂದಿಗೆ ಕಳುಹಿಸಿಕೊಡಬೇಕು

**ದೆಹಲಿ ಕರ್ನಾಟಕ ಸಂಘ ಕನ್ನಡ ಭಾರತಿ ರಂಗ ಪ್ರಶಸ್ತಿ :** ದೆಹಲಿ ಕರ್ನಾಟಕ ಸಂಘವು 2015ರಿಂದ ರಂಗಭೂಮಿಯ ಚಟುವಟಿಕೆಯನ್ನು ಪ್ರೋತ್ಸಾಹಿಸುವುದಕ್ಕಾಗಿ ಕನ್ನಡ ಭಾರತಿ ರಂಗ ಪ್ರಶಸ್ತಿಯನ್ನು ಪ್ರತಿ ವರ್ಷವೂ ನೀಡಲು ಪ್ರಾರಂಭಿಸಿದೆ. ಈ ಪ್ರಶಸ್ತಿ ರೂ. 50,000/– ನಗದು ಹಣ, ಸ್ಮರಣಿಕೆ ಮತ್ತು ಪ್ರಶಸ್ತಿ ಪತ್ರಗಳನ್ನೊಳಗೊಂಡಿದೆ. 2015ರ ಈ ಪ್ರಶಸ್ತಿಯನ್ನು ದೆಹಲಿಯಲ್ಲಿ ಕನ್ನಡ ಭಾರತಿಯ ಸಂಸ್ಥಾಪಕ ಸದಸ್ಯರೂ ಹಾಗೂ ಅದರ ಬೆಳವಣಿಗೆಗೆ ಸಕ್ರಿಯವಾಗಿ ಕೆಲಸ ಮಾಡಿದ್ದ ಎಂ.ವಿ. ನಾರಾಯಣ ರಾವ್ ಅವರಿಗೆ ನೀಡಲಾಗಿತ್ತು. ರಂಗಭೂಮಿಯ ಯಾವುದೇ ಕ್ಷೇತ್ರದಲ್ಲಿ ಗಣನೀಯ ಕೊಡುಗೆ ನೀಡಿರುವವರಿಗೆ ಈ ಪ್ರಶಸ್ತಿಯನ್ನು ನೀಡಲಾಗುವುದು. ಪ್ರಶಸ್ತಿಗೆ ಸಾಧಕರ ಹೆಸರನ್ನು ಸಂಕ್ಷಿಪ್ತ ವಿವರಗಳೊಂದಿಗೆ ಕಳುಹಿಸಿಕೊಡಬೇಕು

**ಡಾ. ಸರೋಜಿನಿ ಮಹಿಷಿ ಪ್ರಶಸ್ತಿ :** ದೆಹಲಿ ಕರ್ನಾಟಕ ಸಂಘದ ಮಾಜಿ ಅಧ್ಯಕ್ಷೆ ದಿ. ಡಾ. ಸರೋಜಿನಿ ಮಹಿಷಿಯವರ ಹೆಸರಿನಲ್ಲಿ ಸಾಹಿತ್ಯ ಕೃತಿಗಳಿಗೆ ಸಂಬಂಧಿಸಿದಂತೆ ಡಾ. ಸರೋಜಿನಿ ಮಹಿಷಿ ಪ್ರಶಸ್ತಿಯನ್ನು ಪ್ರತಿ ವರ್ಷ ನೀಡಲು ಉದ್ದೇಶಿಸಿದೆ. ಈ ಪ್ರಶಸ್ತಿಯು ರೂ. 50,000/– ನಗದು ಹಣ, ಸ್ಮರಣಿಕೆ ಮತ್ತು ಪ್ರಶಸ್ತಿ ಪತ್ರಗಳನ್ನೊಳಗೊಂಡಿದೆ. ಈ ವರ್ಷದ ಪ್ರಶಸ್ತಿಯನ್ನು ಮಹಿಳಾ ಲೇಖಕಿಯರ ಕನ್ನಡದ ಸಾಹಿತ್ಯ ಕೃತಿಗಳಿಗೆ ನೀಡಲು ನಿರ್ಧರಿಸಲಾಗಿದೆ. ಪ್ರಕಟಿತ ಕೃತಿಗಳು ಎರಡು ವರ್ಷಗಳ ಇತ್ತೀಚಿನದ್ದಾಗಿರಬೇಕು. ಕೃತಿಗಳ ಆಯ್ಕೆಗಾಗಿ ಆಯ್ಕೆ ಸಮಿತಿಯನ್ನು ರಚಿಸಲಾಗಿದೆ. ಆಸಕ್ತರು ತಮ್ಮ ಸಂಕ್ಷಿಪ್ತ ವಿವರಗಳೊಂದಿಗೆ ಕೃತಿಯ ಜೊತೆಗೆ ಕಳುಹಿಸಿಕೊಡಬೇಕು.

ಈ ಮೇಲಿನ ಎಲ್ಲ ಪ್ರಶಸ್ತಿಗಳಿಗೆ ಅರ್ಜಿಯನ್ನು ಈ ಕೆಳಗಿನ ವಿಳಾಸಕ್ಕೆ ಜುಲೈ 20, 2016ರೊಳಗೆ ಕಳುಹಿಸಿಕೊಡತಕ್ಕದ್ದು. **The General Secretary, Delhi Karnataka Sangha, Rao Tularam Marg, Sector 12, R.K. Puram, New Delhi 110 022.**

## ಅಭಿನಂದನೆ



ದೆಹಲಿ ಕರ್ನಾಟಕ ಸಂಘದ ಸದಸ್ಯರಾದ ಶ್ರೀ ಅನಿಲ್ ರೈ ಅವರು ಇತ್ತೀಚೆಗೆ ರಕ್ಷಾ ಅವರನ್ನು ವಿವಾಹವಾದರು. ಈ ಸಂದರ್ಭದಲ್ಲಿ ನೂತನ ದಂಪತಿಯನ್ನು ಸಂಘದಲ್ಲಿ ನಡೆದ ಶತಮಾನ ಕಂಡ ಕನ್ನಡದ ಕಯ್ಯಾರ– 'ಕಯ್ಯಾರ ಕಿಞ್ಞಣ್ಣ ರೈ ನೆನಪು' ಕಾರ್ಯಕ್ರಮದಲ್ಲಿ ಮುಖ್ಯ ಉಪನ್ಯಾಸಕರಾಗಿ ಆಗಮಿಸಿದ್ದ ಶ್ರೀ ಎಂ.ಕೆ. ಭಾಸ್ಕರ ರಾವ್ ಅವರು ಪುಷ್ಪಗುಚ್ಛ ನೀಡಿ ಇದೇ ಜೂನ್ 5ರಂದು ಅಭಿನಂದಿಸಿದರು.


**SAUJANYA** PRINTING PRESS
A HOUSE OF QUALITY PRINTING

ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ ಬಹುವರ್ಣದ ಸುಸಜ್ಜಿತ ಮುದ್ರಣಾಲಯ
ಸೌಜನ್ಯ ಪ್ರಿಂಟಿಂಗ್ ಪ್ರೆಸ್ ಮತ್ತು ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್
ಇಲ್ಲಿ ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡಲಾಗುವುದು.
ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು ಬೈಂಡಿಂಗ್ ಕೆಲಸಗಳಿಗಾಗಿ ದಯವಿಟ್ಟು ಸಂಪರ್ಕಿಸಿ

C-95, Okhla Industrial Area Phase-I, New Delhi – 110 020


E-MAIL: saujanyapp2010@gmail.com / hpgp2006@gmail.com
PHONE: 011-40520770 MOBILE:9811104398,,9811604398


ಶ್ರೀ ಗುರುಪ್ರಸಾದಿತ ಯಕ್ಷಗಾನ ಮಂಡಳಿ, ಸಾಲಿಗ್ರಾಮ ಇವರಿಂದ
ದೆಹಲಿ ಕರ್ನಾಟಕ ಸಂಘ ಇವರ ಆಶ್ರಯದಲ್ಲಿ
ಅಹೋರಾತ್ರಿ ಯಕ್ಷಗಾನ
ದಿನಾಂಕ : ಜುಲೈ 16, 2016ರ ಶನಿವಾರ, ರಾತ್ರಿ ಗಂಟೆ 9.30ರಿಂದ
ಸ್ಥಳ : ದೆಹಲಿ ಕರ್ನಾಟಕ ಸಂಘದ ಸಭಾಂಗಣ, ರಾವ್ ತುಲಾರಾಮ್ ಮಾರ್ಗ
ಸೆಕ್ಟರ್-12, ಆರ್.ಕೆ. ಪುರಂ, ನವದೆಹಲಿ-110022
ಭೀಷ್ಮ ವಿಜಯ
ಹಾಗೂ
ನಾಗಶ್ರೀ
ಎಂಬ ಕಥಾನಕವನ್ನು ಸರ್ವಾಂಗ
ಸುಂದರವಾಗಿ ಆಡಿತೋರಿಸಲಿರುವರು.
ರಂಗದಲ್ಲಿ ರಂಜಿಸಲಿರುವ ಕಲಾವಿದರು
ಭಾಗವತರು : ಶ್ರೀ ಜಿ. ರಾಘವೇಂದ್ರ ಮಯ್ಯ ಹಾಲಾಡಿ
ಶ್ರೀ ರವಿಕುಮಾರ್ ಸೂರಾಲು
ಶ್ರೀ ಆನಂದ ಕುಮಾರ್ ಅಂಕೋಲ
ಚಂಡೆ : ಶ್ರೀ ಶಿವಾನಂದ ಕೋಟ, ಶ್ರೀ ರಾಮ ಭಂಡಾರಿ ಕರ್ಕಿ
ಮದ್ದಳೆ : ಶ್ರೀ ಪರಮೇಶ್ವರ ಭಂಡಾರಿ, ಕರ್ಕಿ, ಶ್ರೀ ನಾಗರಾಜ ಭಂಡಾರಿ ಹಿರೆಬೈಲು
ಸ್ತ್ರೀಪಾತ್ರ : ಶ್ರೀ ಶಶಿಕಾಂತ ಶೆಟ್ಟಿ ಕಾರ್ಕಳ,
ಶ್ರೀ ಶಂಕರ ದೇವಾಡಿಗ ಉಳ್ಳೂರು
ಶ್ರೀ ಗೋವಿಂದ ಮೊಗವೀರ ವಂಡಾರು,
ಶ್ರೀ ಷಣ್ಮುಖ ಜಿ. ಗೌಡ ಬಿಳಿಗೋಡು
ಶ್ರೀ ನಾಗರಾಜ ಭಟ್ ಕುಂಕಿಪಾಲು
ಹಾಸ್ಯ : ಶ್ರೀ ಮಹಾಬಲೇಶ್ವರ ಭಟ್ ಕ್ಯಾದಗಿ
ಶ್ರೀ ಅರುಣ್‌ಕುಮಾರ್ ಜಾರ್ಕಳ
- ಮುಮ್ಮೇಳ -
ಶ್ರೀ ಆರ್ಡೋಡು ಮೋಹನದಾಸ ಶೆಟ್ಟಿ
ಶ್ರೀ ಪ್ರಸನ್ನ ಶೆಟ್ಟಿಗಾರ್ ಮಂದಾರ್ತಿ
ಶ್ರೀ ರಾಜೇಶ ಭಂಡಾರಿ ಗುಣವಂತೆ
ಶ್ರೀ ವಿನಾಯಕ ಗುಂಡವಾಳ
ಶ್ರೀ ಭಾಸ್ಕರ ಬಿಲ್ಲವ ತುಂಬ್ರಿ
ಶ್ರೀ ವರುಂಠ ಗಾಂಧರ್ ಯಲ್ಲಾಪುರ
ಶ್ರೀ ಚಂದ್ರಹಾಸ ಗೌಡ ಹೊಸಪಟ್ಣ
ಶ್ರೀ ಈಶ್ವರ ನಾಯ್ಕ ಮಂಕಿ
ಶ್ರೀ ನಾಗರಾಜ ಭಂಡಾರಿ ಗುಣವಂತೆ
ಶ್ರೀ ಹರೀಶ ಮೊಗವೀರ ಜಪ್ತಿ
ಸರ್ವರಿಗೂ ಆದರದ ಸ್ವಾಗತ ಬಯಸುವ
ಎ. ಕಿಶನ್ ಹೆಗ್ಡೆ
ಮೇಳದ ವ್ಯವಸ್ಥಾಪಕರು
ವಸಂತ ಶೆಟ್ಟಿ ಬೆಳ್ಳಾರೆ, ಅಧ್ಯಕ್ಷರು
ಸಿ.ಎಂ. ನಾಗರಾಜ, ಪ್ರಧಾನ ಕಾರ್ಯದರ್ಶಿ
ದೆಹಲಿ ಕರ್ನಾಟಕ ಸಂಘ
ಸಖಾರಾಮ ಉಪ್ಪೂರು, ಅಧ್ಯಕ್ಷರು, ಸಾಂಸ್ಕೃತಿಕ ಸಮಿತಿ
ಮೊ : 9958807225
ರಾಧಾಕೃಷ್ಣ, ಕಾರ್ಯಕ್ರಮದ ಸಂಚಾಲಕರು
ಮೊ : 9818252183
ದೆಹಲಿ ಕರ್ನಾಟಕ ಸಂಘ
ಪ್ರಾಯೋಜನೆ : ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು

Delhi Karnataka Sangha Abhimatha Monthly,
July-2016, Vol. No.26, Issue No.10, Price Rs.1/- RNI Regn. No. 53405/91, DL-SW-1/4016/16-18
Printout Date : July 8th / 9th, Postal Date :10th / 11th, Total Pages-24
Printed & Published by C.M. Nagaraja, General Secretary on behalf of Delhi Karnataka Sangha (R)
Rao Tularam Marg, Sector-12, R.K.Puram, New Delhi-110022, Tel: 26109615
Printed at Saujanya Printing Press C-95, Okhla Industrial Area, Phase-I, New Delhi-110020, Tel: 40520770, Editor: Balakrishna Naik D.

Easy Banking at your Fingertips

KBL Mobile Banking




- Paying shopping bills, Movie tickets, restaurant bills Utility bills like electricity bill, mobile bills etc.

Call toll free no. 1800 425 1444 or step into your nearest branch for details

Karnataka Bank
Your Family Bank. Across India.

Regd. & Head Office: Mangaluru - 575 002 CIN - L85110KA1924PLC001128 E-mail: info@ktkbank.com Visit us at: www.karnatakabank.com